ಪ್ರೇಮ ಪ್ರವಾಹ

'ಅಂತರಂಗ' ಪತ್ರಿಕೆಯಿಂದ
ಆಯ್ದ ಐದು ಕತೆಗಳು.

ಪ್ರಕಾಶಕರು:
ಅಂತರಂಗ ಕಾರ್ಯಾಲಯ,
ಉಡುಪಿ.

1958

ವಿಕ್ರಯಾಧಿಕಾರಿಗಳು;
ರತ ಪುಸ್ತಕ ಭಂಡಾರ, ಉಡುಪಿ.

ಎಂಟಾಣೆ

‘ಅಂತರಂಗ’ ಪತ್ರಿಕೆಯಿಂದಲೇ ಆಯ್ದು
ಪ್ರಕಟಿಸಿದ ಇನ್ನೊಂದು ಕಥಾಸಂಗ್ರಹ:

‘ಅಂತರಂಗದ ಕತೆಗಳು’

(೧೩ ಕತೆಗಳ ಕಟ್ಟು)

ದ್ವಿತೀಯ ಮುದ್ರಣ

ಮುದ್ರಕರು:
ನವಯುಗ ಪ್ರೆಸ್,
ಉಡುಪಿ.

ಮುನ್ನುಡಿ

ಇದೊಂದು ಚಿಕ್ಕ ಕತೆಗಳ ಸಂಗ್ರಹ. ಹೆಸರು 'ಪ್ರೇಮ ಪ್ರವಾಹ' ಎಂದೊಡನೆ ಕೆಲವೊಂದು ವ್ಯಕ್ತಿ ಸಂಸ್ಥೆಗಳಿಗೆ– ಪುಸ್ತಕ ಭಂಡಾರಗಳಿಗೆ– ಅದೊಂದು ದೃಷ್ಟಿಯಿಂದ ತ್ಯಾಜ್ಯವೆನಿಸುವಂತಹದಲ್ಲ. ಶಿಷ್ಟಾಚಾರದ ಚೌಕಟ್ಟಿನೊಳಗೆ ಅಚ್ಚುಕಟ್ಟಾಗಿ ಮನೋಹರವಾಗಿ ತೋರುವ ಚಿತ್ರಗಳಿವು. ಚಿಕ್ಕ ಕತೆಯ ಮುಖ್ಯ ಲಕ್ಷಣಗಳೆಂದರೆ, ಅದು ತನ್ನ ಶಿರೋನಾಮೆಯಿಂದ ವಾಚಕರನ್ನು ಆಕರ್ಷಿಸಬೇಕು; ಮೊದಲ ಕೆಲವು ಮಾತುಗಳಿಂದಲೆ ಅವರ ಬಗೆಯನ್ನದು ಸೆಳದು ಅತ್ಯಾಧುನಿಕ ಜನಜೀವನಕ್ಷೇತ್ರದಲ್ಲಿ ವಿಹಾರಕ್ಕೊಯ್ಯಬೇಕು. ಜೀವನದ ಸಿಹಿಕಹಿಗಳನ್ನು ಗುಣದೋಷಗಳನ್ನು ಬಗೆಗಾಣಿಸಬೇಕು; ಕೊನೆಮುಟ್ಟುವಷ್ಟರಲ್ಲಿ ಹೃದಯದಲ್ಲೊಂದು ಅಚ್ಚಳಿಯದ ಪರಿಣಾಮವನ್ನುಂಟುಮಾಡಬೇಕು. ಈ ದೃಷ್ಟಿಯಿಂದ ನೋಡಿದರೆ ಇದರ ಕತೆಗಳೆಲ್ಲ ಗುರಿಮುಟ್ಟಿವೆ. ಮೊದಲನೆಯದು ಇಂದಿನ ಭೀಕರ ಸಮರಭೂಮಿಯಲ್ಲಿಯೂ ಪ್ರಣಯದ ಪರಿಣಾಮವನ್ನು ಕಾಣಿಸುತ್ತೆ. ಅದರೊತ್ತಿನದು ಪ್ರಣಯದಲ್ಲಿ ವಿಜ್ಞಾನವು ವಿಚಿತ್ರವಾಗಿ ಇಣಿಕಿದ ಬಗೆಯನ್ನು ಬಣ್ಣಿಸುತ್ತೆ. ಮತ್ತಾಚೆಯದು ಪ್ರೇಮ, ದಾರಿದ್ರ್ಯ, ಸೌಂದರ್ಯಗಳ ಎರಕದಿಂದಾದ ಹೆಣ್ಣಿನ ಕರುಣಾಜನಕ ಚಿತ್ರ. ನಾಲ್ಕನೆಯದರ ಕ್ಷೇತ್ರವು ಅಮೇರಿಕ; ತುಬ್ಬುಕತೆಯ ಕೌತುಕವಿದೆ ಅದರಲ್ಲಿ, ಕೊನೆಯದು ನಿಜಪ್ರೇಮ ಪ್ರವಾಹದ ದಿವ್ಯತೆಯುಳ್ಳ ಪವಿತ್ರ ಚಿತ್ರ. ಈ ಕತೆಗಳ ಸ್ವಾರಸ್ಯವನ್ನು ಇನ್ನೂ ಹೆಚ್ಚಿಗೆ ಮುನ್ನುಡಿಯೇ ತೋರಿಬಿಟ್ಟರೆ ಅದರಿಂದಾಚೆಗೆ ವಾಚಕರಿಗೆ ಗೋಚರಿಸುವುದು ಕಂಡ ಸೀಮೆಯೆಂದಾದೀತು; ಅವರಾಗಿ ಸಂಚರಿಸಿ ಹೊಂದಬೇಕಾದ ಆನಂದಾನುಭವವನ್ನು ಅಪಹರಿಸಿದಂತಾಪೀತು. ಅದುಕಾರಣ ಸಣ್ಣ ಕತೆಗಳ ಈ ಸಣ್ಣ ಪುಸ್ತಕಕ್ಕೆ ಇಷ್ಟೇ ಸಣ್ಣ ಮುನ್ನುಡಿಯೇ ಚೆನ್ನ.

ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರೇಮ ಪ್ರವಾಹ

ಪರಿವಿಡಿ:

ಪ್ರೇಮ ಪ್ರವಾಹ

೧

ಪ್ರಣಯ-ಪ್ರಲಯ

ಕರ್ನೆಲ್ ಹೆರ್ಮಾನ್ ಗ್ಲಕ್—ಮೂರೇ ಘಂಟೆಗಳ ಮೊದಲು ಕೆಂಪು ಸೇನೆಯ ಕೈಯಿಂದ ಆ ಪಟ್ಟಣವನ್ನು ಕಸಗೊಂಡ ನಾಜೀ ಸೇನಾ ನಾಯಕ ತನ್ನ ಆಫೀಸು ಕೋಣೆಯಲ್ಲಿ, ಬೇಟೆಗೆದ್ದ ಮೃಗರಾಜನ ಠೀವಿ ಯಲ್ಲಿ ಕುಳಿತಿದ್ದ. ಕಠಿಣ ಛಳಿಯ ನಿವಾರಣೆಗಾಗಿ ಇದಿರಿನ ಸ್ಟವ್‌ನಲ್ಲಿ ಹೊಗೆಯೇಳುತಿತ್ತು; ಇಡೀ ಪಟ್ಟಣದ ಮಾಡುಗಳಿಂದಲೂ ಹಾಗಾಗು ತ್ತಿತ್ತೆನ್ನಿ! ಕರ್ನಲನೊಮ್ಮೆ ಸುತ್ತಲೂ ನೋಡಿಕೊಂಡ; ಅಲ್ಲಿ ಓಲಗ ಕೊಟ್ಟದ್ದ ಎಲ್ಲಾ ಆಫೀಸರರ ಮುಖದಲ್ಲೂ ಯಜಮಾನನ ನೋಟ ಬಿದ್ದಾಗ ದೈನ್ಯತೆ ಮೂಡಿತು. ಆದರೆ ಫ್ರೆಡರಿಕ್ ವೋನ್ ಕ್ರಾಮ್ ಅನ್ಯಮನಸ್ಕನಾಗಿದ್ದಾನೆ; ಇದಿರಿನ ಗೋಡೆಯುಲ್ಲಿದ್ದ ನಕಾಶೆಯ ಪರಿಶೀಲ ನೆಯಲ್ಲಿದ್ದಾನೇನೋ ಎಂಬಂತೆ ಗಂಭೀರವಾಗಿದ್ದಾನೆ. ಫ್ರೆಡರಿಕನೆಂದರೆ ಕರ್ನಲ್ ಗ್ಲಕ್ಕನಿಗಾಗದು. ಆದರೇನು ಮಾಡಲಿ? ಅವ ಕೈಕೆಳಗಿನ ಉದ್ಯೋಗಸ್ಥನೇನೋ ಹೌದು. ಹಾಗೆಂದು ತನ್ನ ಸೇನೆಯಿಂದ ವರ್ಗಾ ಯಿಸಿ ಬಿಡುವ ಅಧಿಕಾರ ಕೂಡಾ ಕರ್ನಲನಿಗಿಲ್ಲ. ಫ್ರೆಡರಿಕ್ ನಾಜೀ ಪ್ರಮುಖಾಧಿಕಾರಿಗಳ ಒಲವು ಸಂಪಾದಿಸಿದ ತರುಣ; ದೊಡ್ಡ ಕುಟುಂಬ ದಿಂದ ಬಂದ ಪ್ರತಿಷ್ಠಾವಂತ; ಮೇಲಾಗಿ ನಾಜೀ ಗೆಸ್ಟೆಪೋ ಅಧಿಕಾರಿ ಗಳಿಂದ ಪ್ರತಿಯೊಂದು ಸೈನ್ಯ ವಿಭಾಗಕ್ಕೆ ನೇಮಿಸಲ್ಪಡುವ ಆಫೀಸರರ ಲ್ಲೊಬ್ಬ. ಹೀಗಾಗಿ ಕರ್ನಲ್ ಗ್ಲಕ್ಕನಿಗೆ ಫ್ರೆಡರಿಕ್ ಕ್ರಾಮನೊಂದು ಉದರಶೂಲೆ. ಕಡಿದು ಹಾಕಲಾಗುವ ಕಾಲ್ಗೊಡಕಲ್ಲ.

'ಜಾವೋಲ್ ಹೆರ್ ಕರ್ನೆಲ್!' ಸಾರ್ಜೆಂಟನೊಬ್ಬ ಕಾಲ್ಜೋಡಿಸಿ ನಿಂತು ಕೈಯೆತ್ತಿ ಸೆಲ್ಯೂಟ್ ಕೊಟ್ಟ. ಅವನ ಹಿಂಭಾಗದಲ್ಲಿ ಸುಂದರಿ ಯುವತಿಯರದೊಂದು ಸಾಲು ನಿಂತಿತ್ತು; ಅವರು ನಿಂತ ಭೂಭಾಗ

ಕಂಪಿಸುತ್ತಿದೆಯೋ ಎಂಬಂತೆ ಅವರೆಲ್ಲಾ ನಡುಗುತ್ತಿದ್ದರು. ಕೈವಶವಾದೊಡನೆ ಕಮಾಂಡರ್ ಗ್ಲಕ್ಕನು ಪಟ್ಟಣದಿಂದ ಪಡೆಯುವ ಕಾಣಿಕೆಗಳಿವು; ಊರಲ್ಲಿ ಅಳಿದುಳಿದ ಸುಂದರಿ ಯುವತಿಯರನ್ನು ಆರಿಸಿ ತರಲಾಗಿತ್ತು. ಗ್ಲಕ್ಕನ ದೃಷ್ಟಿ ಅನುಕ್ರಮವಾಗಿ ಪ್ರತಿಯೊಂದು ಯುವತಿಯ ಮೇಲೆ ಒಂದು ಬಾರಿ ಬಿತ್ತು; ಎರಡನೇ ಬಾರಿ ಆ ನೋಟವೋಡುತ್ತಾ ಬಂದಂತೆ– "ನಿನ್ನ ಮೋರೆಯ ಮುಸುಕನ್ನು ತೆಗಿ"—ಸಾಲಿನ ಮಧ್ಯದಲ್ಲಿ ಪರದೆ ಹಾಕಿಕೊಂಡಿದ್ದ ಯುವತಿಗೆ ಕರ್ನಲನ ಆಜ್ಞೆಯಾಯಿತು. ಅಡ್ಡಮೋಡ ಸರಿದಾಗ ಚಂದ್ರಬಿಂಬ ಹೊರಬರುವಂತೆ ಸುಂದರವದನವೊಂದು ಕರ್ನಲನ ದೃಷ್ಟಿದೋಷಕ್ಕೊಳಗಾಯಿತು.

ಆಶ್ಚರ್ಯವೆಂದರೆ ಈ ಯುವತಿ ಬೆದರಿ ಹೋಗಿಲ್ಲ! ಅವಳ ಕಣ್ಣುಗಳ ಪ್ರಕಾಶ ಕೋಲ್ಮಿಂಚಿನಂತಿತ್ತು.

"ಹಾ! ನೀನೇ! ನೀನೇ ನನಗೆ ಬೇಕು" ಗ್ಲಕ್ ಕೂತಲ್ಲೆ ಉಯ್ಯಾಲೆ ಯಾಡಿದ.

"ಯಾರು, ಇಲೋನಾ!" ಫ್ರೆಡರಿಕ್ ಕ್ರಾಮ್ ಆಸನದಿಂದೆದ್ದು ಬಿಟ್ಟ.

ಯುವತಿಯ ದೃಷ್ಟಿ ಆ ಕಡೆಗೆ ಬಿತ್ತು. ಅವಳ ಕಣ್ಣುಗಳರಳಿದವು. "ನೀನು! ಫ್ರೆಡರಿಕ್!"

"ಏಹೇ! ಹಾಗಾದರೆ ನಿಮ್ಮಿಬ್ಬರೊಳಗೆ ಪರಿಚಯವಿದೆ. ಫ್ರೆಡರಿಕ್, ನೀನು ಮಹಾಸ್ವಾರ್ಥಿ. ಈ ವರೆಗೂ ನನಗವಳ ಪರಿಚಯ ಮಾಡಿಕೊಡಲಿಲ್ಲ. ದುಃಸ್ವಾರ್ಥಿ." ಗ್ಲಕ್ಕನ ತೀಕ್ಷ್ಣ ದೃಷ್ಟಿ ಫ್ರೆಡರಿಕನನ್ನು ತಿವಿಯಿತು.

೦೦ ೦೦ ೦೦

ಹೌದು. ಫ್ರೆಡರಿಕ್ ಇಲೊನಾರೊಳಗೆ ಪರಿಚಯವಿತ್ತು. ಆಕೆ ರಶ್ಯನ್ ಯೆಹೂದೀ ಯುವತಿ. ಬಾಲ್ಯದಿಂದಲೂ ಜರ್ಮನಿಯಲ್ಲಿದ್ದವಳು. ಜರ್ಮನಿಯಲ್ಲಿದ್ದಾಗ ಅವಳಿತ್ತ ಆಲಿಂಗನ, ಚುಂಬನಗಳ ಮಾಧುರ್ಯವನ್ನು ಫ್ರೆಡರಿಕ್ ಇಂದೂ ಮರೆತಿಲ್ಲ. "ನಾವು ಮದುವೆಯಾಗೋಣ" ಎಂದು ಅವರು ಸಮ್ಮತಿಸಿಕೊಂಡು ಹೆಚ್ಚು ದಿನಗಳು ಕಳೆದಿರಲಿಲ್ಲ –

ಅಷ್ಟರಲ್ಲಿ ಜರ್ಮನಿಯೊಳಗೆ ಯೆಹೂದೀ ಬೇಟೆಯ ಕಾನೂನು ಬಂತು. ಫ್ರೆಡರಿಕ್—ನಾಜೀ ಗೆಸ್ಟೆಪೋ—ಕರ್ತವ್ಯಬದ್ಧನಾದ; ಜ್ಯೂ ಶೋಧನೆಗಾರಂಭಿಸಿದ. ಇಲೋನಾ ಜರ್ಮನಿಯಿಂದೋಡಿಸಲ್ಪಟ್ಟಳು. ಫ್ರೆಡರಿಕನು ಆ ಮೇಲೆ ಅವಳನ್ನು ಕಾಣದಾದ. ನಂತರವೂ ಆತ ಹಲವು ಚೆಂದುಟಿಗಳ ಸವಿ ಕಂಡಿದ್ದ; ನಳಿತೋಳುಗಳ ಬಂಧಿಯಾಗಿದ್ದ. ಆದರೆ ಇಲೋನಾಳನ್ನು ಮರೆಯುವದಸಾಧ್ಯವಾಗಿತ್ತು. ಇಂದು ಅದೇ ಇಲೋನಾ ಕಣ್ಣ ಮುಂದಿದ್ದಾಳೆ.

o o o

"ನಾನು ಚುನಾಯಿಸಿದೆ. ನೀವು ನಿಮಗೆ ಬೇಕಾದವರನ್ನು ಆರಿಸಿಕೊಳ್ಳಿ" ಮಿಕ್ಕ ಆಫೀಸರರಿಗೆ ಕರ್ನಲ್‌ಗ್ಲಕ್ಕನ ಆಜ್ಞೆಯಾಯಿತು. ಇಲೋನಾಳ ಮೃದು ತೋಳಿಗೆ ಕರ್ನಲನ ಯಮಬಾಹು ತಕ್ಕೆ ಬಿತ್ತು. ಆಕೆಯು ದೀನ ದೃಷ್ಟಿಯಿಂದ ತನ್ನನ್ನು ನೋಡುವದನ್ನು ಫ್ರೆಡರಿಕ್ ಕಂಡ. ಅವನ ಕೈ ಪಿಸ್ತೂಲಿನ ಕಡೆಗೆ ಹೋಯಿತು.

ಆದರೆ ಅಸಾಧ್ಯ—ಕರ್ನಲ್ ಹೆರ್ಮಾನ್ ಗ್ಲಕ್ಕನಂತಹ ಚತುರ ನಾಜೀ ಸೇನಾನಿಯನ್ನು ಗುಂಡಿಕ್ಕಿ ಕೊಲ್ಲುವದು ಅಸಾಧ್ಯ!

ಫ್ರೆಡರಿಕ್ ಎರಡೇಮಿನಿಟುಗಳಲ್ಲಿ ಹಲವುಹಂಚಿಕೆಗಳನ್ನು ಯೋಚಿಸಿದ.

"ಹೆರ್ ಕರ್ನೆಲ್! ನಿಮ್ಮ ಅಪ್ಪಣೆ ಪಡೆದು ನಾನು ಗೆಸ್ಟೆಪೋ ಹೆಡ್ಡಾಫೀಸಿಗೆ ಫೋನ್ ಮಾಡುತ್ತೇನೆ".

"ನೀನು ಪಿಶಾಚಿಗೆ ಬೇಕಾದರೂ ಫೋನ್ ಮಾಡು"—ಕರ್ನಲ್ ಈ ಪ್ರಪಂಚದಲ್ಲೇ ಇರಲಿಲ್ಲ!

ಫ್ರೆಡರಿಕ್ ವೋನ್ ಕ್ರಾಮ್ ಫೋನಿನಲ್ಲಿ ಮಾತಾಡುತ್ತಿದ್ದ. ಮಿಕ್ಕ ಆಫೀಸರರೆಲ್ಲಾ ಬೀರ್ ಕುಡಿಯುತ್ತಾ ತಮ್ಮ ತೊಡೆಯಲ್ಲಿದ್ದ ನಿಶ್ಚೇತನ ಗೊಂಬೆಗಳ ಬಾಯಿಗೆ ಒತ್ತಾಯದಿಂದ ಅದನ್ನು ಇಡುತ್ತಾ ಇದ್ದರು.

ಫ್ರೆಡರಿಕ್ ಮುಂದೆ ಬಂದು ಸೆಲ್ಯೂಟ್ ಕೊಟ್ಟ. "ನನಗೆ ಈ ಹೆಂಗಸನ್ನು ದಸ್ತಗಿರಿಮಾಡಲು ಅಪ್ಪಣೆಯಾಗಿದೆ. ಅವಳು ಅಪಾಯಕಾರೀ ಗುಪ್ತಚಾರಿಣಿಯೆಂದು ನಾನು ಗುರುತು ಹಚ್ಚಿದೆ. ಅವಳನ್ನು ಕೂಡಲೇ ವಿಚಾರಿಸಬೇಕಾಗಿದೆ".

ಈ ಮಾತನ್ನು ಕೇಳಿದಾಗ ಯುವತಿಯ ವದನ ಹೆಣದ ಮುಖ ದಂತಾಯಿತು.

ಗ್ಲಕ್ ಸಿಡಿಲು ಬಡಿದಂತಾದ. "ನರಕದ ಹುಳ! ನೀನು ನನ್ನನ್ನು ಆಜ್ಞಾಪಿಸುತ್ತೀ?"- ದಡಕ್ಕನೆದ್ದು ಹೋಗಿ ಫೋನಿನಲ್ಲಿ ಮಾತಾಡಿ ಬಂದ.

"ಹೋಗು ಪಿಶಾಚಿ! ಕೂಡಲೇ ಕೊಂಡುಹೋಗು. ಒಂದು ದಿನ ನಾನೇ ನಿನಗೆ ಮೃತ್ಯುವೆಂದು ತಿಳಿದುಕೋ!''—ಕರ್ನೆಲ್ ಗ್ಲಕ್ ಉದ್ವೇಗವನ್ನು ತಡೆಯುಲಾರದೆ ಆಸನದಲ್ಲಿ ಗಜಕ್ಕನೆ ಬಿದ್ದುಬಿಟ್ಟ.

o o o

ಹಿಮಾವರಿತ ದಾರಿಯಲ್ಲಿ ಬಹು ಪ್ರಯಾಸದಿಂದ ಫ್ರೆಡರಿಕನ ಕಾರು ಐದು ಮೈಲು ಸಾಗಿರಬಹುದು. ರಸ್ತೆಯನ್ನಲ್ಲದೆ ತನ್ನ ಪಕ್ಕದಲ್ಲಿರುವ ಇಲೋನಾಳ ಕಡೆಗೊಮ್ಮೆಯೂ ಅವನು ನೋಡಿರಲಿಲ್ಲ. ತನ್ನ ತಾರುಣ್ಯ ಭರಿತ ದೇಹದಲ್ಲೇಳುತ್ತಿದ್ದ ವಿದ್ಯುದ್ವೇಗವನ್ನು ಪ್ರಯಾಸದಿಂದ ತಡೆದು ಕೊಂಡಿದ್ದ. ಕಾರು ಸಟಕ್ಕನೆ ನಿಂತಿತು.

"ಇಲೋನಾ! ನೀನೀಗ ಹೋಗಬಹುದು!".

ಆಕೆ ಆಶ್ಚರ್ಯಗೊಂಡಳು. "ಏನನ್ನುತ್ತೀ ಫ್ರೆಡರಿಕ್?''

"ನಿನ್ನ ಮಾನವುಳಿಸಲು ನಾನು ಹಾಗೆ ಮಾಡಬೇಕಾಯಿತು. ಆದರೆ......ಆಗಲಿ, ಹೋಗು. ತಡಮಾಡಬೇಡ. ಈಗಲೇ ಈ ಹಾದಿಯಿಂದ ನಮ್ಮ ಸೈನ್ಯ ಬರಬಹುದು!''

"ಹಾಗಾದರೆ ನಿನಗೆ ನಾನೊಬ್ಬ ಗುಪ್ತಚಾರಿಣಿಯೆಂದು ಗೊತ್ತಿಲ್ಲ ವೇನು?"

ಈಗ ಫ್ರೆಡರಿಕ್ ಆಕೆಯ ಮುಖ ನೋಡಿದ: "ನೀನು ಗುಪ್ತಚಾರಿ ಣಿಯಾಗುವದೇ?-- ಸಾಧ್ಯವೇ ಇಲ್ಲ!"—ಅವಳು ನಗುತ್ತಾ ಒಪ್ಪಿಕೊಳ್ಳು ವಳೆಂಬ ನಿರೀಕ್ಷೆಯಿಂದ ಆತನಾಕೆಯನ್ನು ನೋಡುತಿದ್ದ.

"ಹಾಗಾದರೆ ನೀನು ಗೆಸ್ಟೆಪೋ ಕಾರ್ಯಾಲಯಕ್ಕೆ ಏನೆಂದು ರಿಪೋರ್ಟ್ರ್ ಮಾಡುವೆ?''

"ಏನಾದರೂ ಮಾಡಬಲ್ಲೆ. ನೀನು ತಪ್ಪಿಸಿಕೊಂಡು ಹೋದಿ ಯೆನ್ನುತ್ತೇನೆ.''

"ಹಾಗೆ ಹೇಳಿ ನೀನು ಮರಣದಿಂದ ಪಾರಾಗಬಲ್ಲೆಯಾ?...... ಫ್ರೆಡರಿಕ್!"

ಆಕೆ ಅವನ ಹತ್ತಿರಕ್ಕೆ ಸರಿದಳು. ಇಲೋನಾಳ ತುಟಿ ಮೇಲ್ಮೊಗವಾಯಿತು. ಅವಳ ಕಣ್ಣುಗಳು ಪ್ರೇಮೋನ್ಮತ್ತವಾಗಿದ್ದವು.

"ಫ್ರೆಡರಿಕ್! ನನ್ನನ್ನು ಮದುವೆಯಾಗುವೆನೆಂದು ಒಮ್ಮೆ ಹೇಳಿದ್ದಿ. ಅದನ್ನು ಮರೆತೆಯಾ? ಬಾ. ಹೋಗೋಣ. ನಾವು ರಶ್ಯಾ ಸೇನೆಯು ಗಡಿ ಹೊಕ್ಕರಾಯಿತು. ಆ ಮೇಲೆ ನಾನೇ ನಿನಗೆ ಗ್ಯಾರಂಟೀ. ಯಾರೂ ನಿನಗಪಾಯಮಾಡದಂತೆ ನಾನಿದ್ದೇನೆ".

ಅವನಾಗ ಗಹಗಹಿಸಿ ನಕ್ಕುಬಿಟ್ಟ. "ಬಲ್ಲೆಯಾ—ನಾನು ಗೆಸ್ಟೆಪೋ X 24. ಮತ್ತು ನಾಜೀ ದಲದ ಓರ್ವ ಆಫೀಸರ್!"

ಅವಳು ಶಂಕಿಸಿದಳು. "...........ಫ್ರೆಡರಿಕ್.........ನನಗಾಗಿ ಅದನ್ನು ತ್ಯಜಿಸಲಾರೆಯಾ?"

ಫ್ರೆಡರಿಕನು ಸಮಸ್ಯೆಗೊಳಗಾಗಿ ನೆರಿಗೆಬಿದ್ದ ಹಣೆಗೊಮ್ಮೆ ಕೈಯನ್ನೆಳೆದುಕೊಂಡ. ಕೇಳಿದ: "ಆದರೆ ನೀನೊಮ್ಮೆ 'ನಾನು ಗುಪ್ತಚಾರಿಣಿ' ಎಂದೆಯಲ್ಲಾ – ಅದೇಕೆ?"

"ನಿನಗೆ ನನ್ನ ವಿಷಯವೆಲ್ಲಾ ಗೊತ್ತಿದೆಯೆಂದು, ನೀನು ಫೋನ್ ಮಾಡಿದಾಗ ತಿಳಿದುಕೊಂಡಿದ್ದೆ. ಸತ್ಯಕ್ಕೂ ನಾನು ಗುಪ್ತಚಾರಿಣಿ— M 13".

"ಮೆಯಿನ್ ಘೋಟ್!" ಅವನು ನಿರಾಶೆಯಿಂದ ಪುನಃ ಕೂಗಿಕೊಂಡ—"ಮೆಯಿನ್ ಘೋಟ್'!"

"ಯಾಕೆ ಫ್ರೆಡರಿಕ್! ನನ್ನನ್ನು ಧಿಕ್ಕರಿಸುವೆಯಾ? ನೀನು ನಿನ್ನ ದೇಶಕ್ಕಾಗಿ ದುಡಿಯುವಂತೆ ನಾನು ನನ್ನ ದೇಶಕ್ಕಾಗಿ ದುಡಿಯುವದು ತಪ್ಪೆ?"

ಫ್ರೆಡರಿಕನಿಗೆ ತನ್ನ ಮೆದುಳೊಳಗೆ ಡೈನೆಮಾ ಇಟ್ಟಂತೆ ಭಾಸವಾಯಿತು. ಎಂದೂ ತಪ್ಪನ್ನು ಮಾಡದ ಫುರಾರನ ನಮ್ರ ಸೇವಕ X24. ರೀಕ್‌ಗಾಗಿ ಸಜೀವ ಟೋರ್ಪೆಡೋ ಆಗಲು ಯಾವ ಕ್ಷಣದಲ್ಲಾದರೂ ತಯಾರಿರುವ ನಾಜೀ ಯುವಕ-ಅವನ ಸ್ಪಷ್ಟ ಕರ್ತವ್ಯವೆಂದರೆ ಈ ಗುಪ್ತ

ಚರೆ ಯುವತಿಯನ್ನು ಕೂಡಲೇ ದಸ್ತಗಿರಿ ಮಾಡಬೇಕು; ಇಲ್ಲವೇ ನಿಂತಲ್ಲೇ ರುಂಡಹಾರಿಸಬೇಕು! ಆದರೆ ಈಕೆ ಇಲೋನಾ-ಫ್ರೆಡರಿಕನ ಪಾಲಿಗೆ ಪ್ರಪಂಚದಲ್ಲಿ ಎಲ್ಲಕ್ಕಿಂತ ಪ್ರೀತಿಯ ವಸ್ತು!

"ಬೇಗ ತೊಲಗು! ಓಡು ಇಲ್ಲಿಂದ!!" ಫ್ರೆಡರಿಕ್ ಆಕೆಯನ್ನು ಬಲವಾಗಿ ದೂಡಿದ.

"ಬಾ ನನ್ನೊಡನೆ. ಗತಕಾಲವನ್ನು ಮರೆತು ನವಜೀವನವನ್ನಾರಂಭಿಸೋಣ-ಫ್ರೆಡರಿಕ್!" ಆಕೆ ತನ್ನ ಕೋಮಲ ಶರೀರದ ಸರ್ವಾಂಗಗಳನ್ನು ಫ್ರೆಡರಿಕನ ದೇಹಕ್ಕೊತ್ತಿ ನಿಂತಳು.

ಎರಡು ತರುಣ ದೇಹಗಳ ಘರ್ಷಣೆ ನಡೆದಿದೆ; ಮಿಲನವೆನ್ನಲೆ?—ಸಾಧ್ಯವಿಲ್ಲ. ಬಿಡುಗಡೆಗಾಗಿ ಆ ಘರ್ಷಣೆಯೆನ್ನಲೆ?—ಅದೂ ಅಲ್ಲ.

'ಢುಂ ದುಢುಂ, ಢಢಂ!'—ಗನ್ನುಗಳ ಶಬ್ದ ಹತ್ತಿರದಲ್ಲೇ ಕೇಳಿ ಬಂತು. ರಶ್ಯದ ತೀವ್ರ ಹಿಮ ಕೂಡಾ ಎಲ್ಲಿಯೂ ಫ್ರೆಡರಿಕನನ್ನು ಇಷ್ಟು ಹೊತ್ತು ತಡೆದುದಿಲ್ಲ. ಆದರೆ ಇಲೋನಾಳ ಕೋಮಲ ಕಾಯದ ನುಣ್ಪು ಅವನನ್ನು ಕದಲಬಿಡಲಿಲ್ಲ.

"ಇನ್ನಾದರೂ ಹೋಗಲಾರೆಯಾ ಇಲೋನಾ?"—ಫ್ರೆಡರಿಕ್ ದೀನನಾಗಿ ಪ್ರಾರ್ಥಿಸಿಕೊಂಡ.

"ಇಲ್ಲ"—ಇಲೋನಳ ಸ್ಪಷ್ಟ ಉತ್ತರ—"ನೀನು ನಿನ್ನ ಕರ್ತವ್ಯಗಳಲ್ಲೊಂದನ್ನು ಮಾಡಲೇಬೇಕು''.

ಫ್ರೆಡರಿಕನ ಹೃದಯಾಂದೋಲನವೊಮ್ಮೆ ಶಾಂತವಾಯಿತು; ಮುಖವು ಗಂಭೀರವಾಯಿತು. "ನನ್ನ ಇಲೋನಾ! ನೀನು ಮರಣಕ್ಕಂಜುವೆಯಾ?"

"ನಿನ್ನನ್ನು ಪಕ್ಕದಲ್ಲಿಟ್ಟುಕೊಂಡಾದರೆ ಅಂಜಲಾರೆ ಫ್ರೆಡರಿಕ್''

"ಹಾಗಾದರೆ ನನ್ನನ್ನು ಚುಂಬಿಸು'

ಆವ ಚುಂಬಿಸಿದುದಲ್ಲ, ಅವಳ ಪ್ರಾಣವನ್ನೇ ಜಗಿದ—ಆ ಚುಂಬನದಲ್ಲಿ ಅಂತಹ ರಭಸವಿತ್ತು!

ಫಕ್ಕನೆ ಆಕೆಯಾಲಿಂಗನದಿಂದ ಫ್ರೆಡರಿಕನ ಕೈ ಸಡಲಿತು. ಇಲೋನಾ ನಾಲ್ಕಂಗುಲ ದೂರವಾಗಿದ್ದಾಳೆ ಮಾತ್ರ—'ಢುಂ!'

"ಆ್ಹೀ......ಫ್ರೆ....ಡ್........!" ಆಕೆಯ ರಕ್ತ ಮಿಶ್ರಿತ ದೇಹ ಫ್ರೆಡರಿಕನ ಎದೆಯ ಮೇಲೆ ಬಿತ್ತು. ಅವನದನ್ನಪ್ಪಿ ಹಿಡಿದು ನಿಧಾನವಾಗಿ ನೆಲಕ್ಕೊರಗಿಸಿದ. ಅಲ್ಲಿಯೇ ಬಿದ್ದು ಹೆಣದ ಮುಖಕ್ಕೊಮ್ಮೆ, ಎದೆಯ ರಕ್ತರಂಜಿತ ಘಾಯಕ್ಕೊಮ್ಮೆ, ಬಲವಾದ ಚುಂಬನವೊತ್ತಿದ; ಚುಂಬಿಸುತ್ತಾ ಹೋರಾಡಿದ. ಆ ಮೇಲೆ ನೆಟ್ಟಗೆ ಕುಳಿತ; ಎದ್ದು ನಿಲ್ಲುವದವನಿಂದಾಗಲಿಲ್ಲ. ಹಾಗೆಯೇ ಪಿಸ್ತೂಲಿದ್ದ ಬಲಗೈಯನ್ನು ನೀಟಾಗಿ ಎತ್ತಿದ. ಫ್ರೆಡರಿಕನ ತುಟಿ ತಾಂಬೂಲ ಸವಿದಂತಿತ್ತು. ಆ ರಕ್ತರಂಜಿತ ಬಾಯಿಯಿಂದ ಹೊರಟಿತು:—'ವೋನ್ ವೋಕ್! ವೋನ್ ರೀಕ್! ವೋನ್ ಫುರಾರ್! ಹೈಲ್ ಹಿಟ್ಲರ್'!....ಜತೆಯಲ್ಲೇ—'ಢುಂ!'

ಫ್ರೆಡರಿಕನ ದೇಹ ನಿಧಾನವಾಗಿ ವಾಲುತ್ತಾ ಇಲೋನಾಳ ಪಕ್ಕಕ್ಕೊರಗಿತು. ಅಲ್ಲಿಂದ ಕದಲಲಿಲ್ಲ!

(ಇಂಗ್ಲಿಷ್ ಕಥೆಯೊಂದರ ಆಧಾರದಿಂದ).

೨

ಛಾಯಾ ಸಾಕ್ಷಿ

ನವೋದಯ ಸ್ಟುಡಿಯೋದಲ್ಲಿ 'ಅಡ್ಡ ಹಾದಿ' ಚಿತ್ರದ ಶೂಟಿಂಗ್ ನಡೆಯುತ್ತಿತ್ತು. ಅದರ ಕಥಾ ಸಾರಾಂಶವಿದು:—ವ್ಯಾಪಾರಿಯ ಪತ್ನಿ. ಗಂಡನಿಗಾಗಿ ಪ್ರಾಣ ಬಿಡಲು ಸಿದ್ಧಳಿರುವ ಸಾಧ್ವಿ. ಆ ಸುಮಂಗಲೆಯನ್ನು ಕೈಹಿಡಿದ ಶುಭ ಲಕ್ಷಣವೇನೋ—ವ್ಯಾಪಾರಿಯ ವ್ಯಾಪಾರದಲ್ಲಿ ಭರತವುಂಟಾಯಿತು. ರಾತ್ರಿಹಗಲು ಅಂಗಡಿಯಲ್ಲೇ ಇರಬೇಕಾಗಿ ಬಂತು. ಆಕೆ ನವಯುವತಿ, ಪ್ರಾಯದ ಭರತ. ಆದರೆ ಗಂಡನ ವ್ಯಾಪಾರ ಬೇರೆಯೇ. ಗಂಡನಿಗೆ ದಿನದ ಇಪ್ಪತ್ತನಾಲ್ಕು ಘಂಟೆಗಳಲ್ಲಿ ಐದಾರು ಘಂಟೆಗಳನ್ನಾದರೂ ಉಳಿಸುವ ಯೋಜನೆ ತಯಾರಿಸಿಕೊಟ್ಟಳು; ತನಗೆ ಮೈ ಸೌಖ್ಯವಿಲ್ಲವೆಂಬ ನೆವಹೇಳಿ ಮನೆಯಲ್ಲೇ ನಿಲ್ಲಿಸಿಕೊಳ್ಳುವ ಹಂಚಿಕೆ ಹೂಡಿದಳು, ಯಾವುದೂ ಅವಳ ಇಚ್ಛೆಯನ್ನು ಸಾಕಷ್ಟು ಪೂರೈಸಲಿಲ್ಲ. ಅಂಗಡಿಯ ಗಿರಾಕಿಗಳನ್ನು ಕೂಗಿ ಕರೆಯುವ ಬೇರೆ ಸಾಹುಕಾರರಿರುವಾಗ ಅವರು ತನ್ನನ್ನೇ ಕಾಯುವಂತಿಲ್ಲ—ಎಂದು ಎಲ್ಲಾ ಸಂದರ್ಭಗಳಲ್ಲೂ ವ್ಯಾಪಾರಿಗೆ ಭಯ. ಈಕೆ ಈ ಗಿರಾಕಿ—ತನ್ನ ಹೊರತು ಅನ್ಯರನ್ನು ನೋಡಲು ಉಪಾಯವೇ ಇಲ್ಲವಷ್ಟೆ! ಆದರೆ ಹಾಗಾಗಲಿಲ್ಲ ಅಲ್ಲೇ ಸುತ್ತಿ ಸುಳಿದಾಡುತ್ತಿದ್ದ ನಿರುದ್ಯೋಗೀ ಯುವಕನೊಬ್ಬನಿದ್ದ. ಅಂತ ಜ್ವಾಲೆಯು ಈಕೆಯನ್ನೂ ಅಡ್ಡಹಾದಿ ಹಿಡಿಸಿತು. ಸಾಹುಕಾರನ ಪತ್ನಿ ಯುವಕನ ಬಲೆಗೆ ಬಿದ್ದಳು. ಇಲ್ಲಿಯ ವ್ಯಾಪಾರವೂ ಭರದಿಂದ ಸಾಗಿತು ....

ಮಧುಕರ ನವೋದಯ ಸ್ಟುಡಿಯೋದ ಫೊಟೋಗ್ರಾಫರ್. ಈ ತನಕ ನಟನಟಿಯರ ಚುಂಬನಾಲಿಂಗಗಳ ರೂಪು ಅವನ ಯಂತ್ರದಲ್ಲಷ್ಟೇ ಮೂಡುತ್ತಿತ್ತು; ಆ ಸಂದರ್ಭಗಳಲ್ಲಿ ಹೃದಯದ ಬಾಗಿಲು ಪೂರ್ತಿ ಮುಚ್ಚಿಕೊಳ್ಳುತಿತ್ತು; ಮುಖದಲ್ಲಿ ಮಾತ್ರ ತಿರಸ್ಕಾರದ ನಗೆ ಮಿಂಚುತ್ತಿತ್ತು. ಎಂತಹ ಕೃತಕ ಪ್ರಣಯಗಳಿವು! ನನ್ನ ಮಾಧವಿಯಾದರೆ ಇಂತಹ ಸಂದರ್ಭಗಳಲ್ಲಿ ನನ್ನ ಮೇಲೇನೇ ಪ್ರಾಣಬಿಡುವಂತಿರುತ್ತಾಳೆ! ಅದು

ಹೃದಯದಲ್ಲಿ ನಿಲ್ಲುವ ಪ್ರೇಮಘಟನೆ; ಇದು ಯಂತ್ರದಲ್ಲಿ ಮೂಡುವ ನಟನೆ! ನಮ್ಮದು ಅಮರ ಪ್ರೇಮ—ಇವರದು ಕೆಮರಾ ಪ್ರೇಮ' ಎಂದು ಮಧುಕರ ಹಿಗ್ಗುತಿದ್ದ. ಮಾಧವಿಯ ಕೈಹಿಡಿದ ತನ್ನ ಸೌಭಾಗ್ಯ ವನ್ನು ನೆನಸಿ ಹೆಗ್ಗಳಿಕೆಪಡುವ ಸಂದರ್ಭಗಳು ಆತನ ಉದ್ಯೋಗದಲ್ಲಿ ಎಡೆಬಿಡದೆ ಬರುತಿದ್ದವು.

ಆದರೆ 'ಅಡ್ಡಹಾದಿ' ಚಿತ್ರದ ನಟನೆಗಳು ಅವನ ಕೆಮರಾದಲ್ಲೆಷ್ಟೋ ಅಷ್ಟೇ ಸ್ಪಷ್ಟವಾಗಿ ಹೃದಯದಲ್ಲಿಯೂ ಪ್ರತಿಬಿಂಬಿಸಿದವು. ಇತ್ತೀಚೆಗೆ ಮಾಧವಿಯ ವರ್ತನೆಯ ಕುರಿತು ಹಲವು ವಿಧದ ವಾರ್ತೆಗಳನ್ನವ ಕೇಳಿದ್ದ. ತನ್ನ ಮಿತ್ರ ರಾವ್ ಮತ್ತು ಮಾಧವಿಯರೊಳಗೆ ಪ್ರಣಯ ಸಂಬಂಧವಿದೆ, ಎಂಬುದೇ ಅವೆಲ್ಲವುಗಳ ಅರ್ಥ. ಆದರೆ ಮಾಧವಿ ಮತ್ತು ನಾನೆಂದರೆ ದೇಹವೆರಡು—ಪ್ರಾಣವೊಂದು ಎಂಬುದನ್ನು ಈ ವಾರ್ತಾವಾಹಕರರಿಯರು; ರಾವ್ ನನ್ನ ಮನೆಯೊಳಗೆ ರಾತ್ರಿಹಗಲು ಸುಳಿದಾಡಬಹುದು; ಆದರೆ ಮಾಧವಿಯ ಹೃದಯದಲ್ಲಿ ನನ್ನ ಟೋಪಿ ಗಿದ್ದ ಸ್ಥಾನವೇ ಆತನಿಗಿದ್ದೀತು: ಅಥವಾ ನಾನಿಲ್ಲದ ವೇಳೆ ಪ್ರಮಾದ ವಶಾತ್ ಏನಾದರೂ ನಡೆದಿರಬಹುದೆ? ನನ್ನ ಮಾಧವಿ-ರಾವ್‌ನನ್ನು?.... ಛೆ! ಅಸಾಧ್ಯ! ಊಹೆಗೊಂದು ಮಿತಿಬೇಕು. ಪಾಪದ ಎಲ್ಲೆ ಸೇರುವ ವರೆಗೂ ಅದು ಓಡುವದಲ್ಲ-ಎಂದು ತನ್ನನ್ನು ತಾನೇ ಸಂತೈಸಿಕೊಂಡಿದ್ದ. 'ಅಡ್ಡಹಾದಿ' ಚಿತ್ರ ಅವನನ್ನು ಪುನಃ ಮುಂದೂಡಿತು. ಹೀಗಾಗುವ ದಿದೆಯೆ? ನನಗೂ ತಿಂಗಳ ಹತ್ತಿಪ್ಪತ್ತು ದಿನಗಳಲ್ಲಿ ರಾತ್ರಿಹಗಲು ಸ್ಟುಡಿಯೋದಲ್ಲಿ ಕೆಲಸ. ಮೂರುನಾಲ್ಕು ಘಂಟೆ ವಿರಾಮ ದೊರೆತು ದನ್ನೇ ನಾನು ಬಿಡುವಿನ ದಿನಸವೆನ್ನುವದು. ನನಗೆ ಗೊತ್ತು- ಮಾಧವಿ ಗದು ಸಾಕಾಗುತ್ತಿಲ್ಲ, ಸಾಹುಕಾರನ ಪತ್ನಿಯೂ ಪ್ರಥಮತಃ ಸಾಧ್ವಿಯೇ ಇದ್ದಳು; ಅವನ ಕಾಹಿಲೆಯೊಮ್ಮೆ ಹತೋಟಿ ತಪ್ಪಿದಾಗ ಆಕೆ ವಜ್ರ ನುಂಗಿದುದನ್ನು ನಾನೇ ಚಿತ್ರ ತೆಗೆದೆನಲ್ಲವೆ? ಕೊನೆಗೆ ಅವಳ ಅದೇ ತುಟಿ ಇನ್ನೊಬ್ಬನ ತುಟಿಗೊತ್ತುವ ದೃಶ್ಯವನ್ನು ನನ್ನದೇ ಕೆಮರ ತೆಗಿಯಿತಲ್ಲ? ಹಾಗಾದರೆ ನನ್ನ ಮಾಧವಿ........ಬಲ್ಲೆ, ಆಕೆ ಪ್ರೇಮೋದ್ವೇಗಿ, ಪ್ರಣ ಯೋನ್ಮತ್ತೆ....!! ಮೇಲಾಗಿ, ನನ್ನ ಕಿವಿ ಮುಟ್ಟುವ ವರೆಗೂ ಕುವಾರ್ತೆ

ಹಬ್ಬಿದೆ; ಇದನ್ನು ಪರೀಕ್ಷಿಸಿಯೇ ಸಿದ್ಧ. ಎಲ್ಲವೂ ಸುಳ್ಳಾಗಲಿ; ಸಿನೆಮಾ ಕಥೆಯಂತಹ ಒಂದು ಕಲ್ಪನಾಕಥೆಯೆಂಬುದು ಸಿದ್ಧವಾಗಲಿ. ಆ ಮೇಲೆ ಮಾಧವಿಯೊಡನೆ ಸಂಗತಿಯನ್ನೆಲ್ಲಾ ಮನಬಿಚ್ಚಿ ಹೇಳುತ್ತೇನೆ; ಆವಳ ಕ್ಷಮಾಪಣೆ ಬೇಡುತ್ತೇನೆ, ಅಲ್ಲಲ್ಲ, ಒಂದು ಅಪೂರ್ವ ಚುಂಬನವನ್ನು ಬೆಲೆತೆತ್ತು ಕ್ಷಮೆಯನ್ನು ಪಡೆಯುತ್ತೇನೆ. ಆದರೆ ಹೇಗೆ ಪರೀಕ್ಷಿಸಲಿ?.... ಮಧುಕರನಿಗೊಂದು ಯೋಚನೆ ಹೊಳೆಯಿತು. ಅವ ಸಮಾಧಾನಗೊಂಡ

X X X V X

ಕೈಯಲ್ಲೊಂದು ಕೆಮರಾ ಹಿಡಿದುಕೊಂಡು ಮಧುಕರ ಪ್ರವೇಶಿಸು ವಾಗ, ಮಾಧವಿ ವಿರಾಮಕುರ್ಚಿಯಲ್ಲಿ ಬಿದ್ದುಕೊಂಡಿದ್ದಳು. ಮುಹಿಳೆ ಯಾದವಳು ತನ್ನ ಅಂಗಭಂಗಿಯ ಕಡೆಗೆ ಏನೂ ಲಕ್ಷ್ಯವೀಯದ ಇಂತಹ ಸಂದರ್ಭಗಳು ಬಹು ಅಪರೂಪ. ಮಾಧವಿಯು ಏನೋ ಗಾಢಾಲೋಚನೆ ಯಲ್ಲಿದ್ದವಳು ಹಸನ್ಮುಖಿಯಾಗಿ ಎದ್ದು ಮಧುಕರನನ್ನು ಇದಿರು ಗೊಂಡಳು. ಅವ ಕೆಮರವನ್ನು ಮುಂಭಾಗದ ಕಂಡಿಯಲ್ಲಿಟ್ಟು ನಗುತ್ತಾ ಇದಿರು ಬಂದ.

ಮಾತುಕತೆ, ನಗೆ ನಾಟ್ಯಗಳನ್ನು ಸದ್ಯಕ್ಕೆ ಮರೆತಳು. ಆಕೆ ಒಮ್ಮೆಗೇ ನೆಗೆದು ಅವನನ್ನಾಲಿಂಗಿಸಿ ಗಾಢವಾಗಿ ಚುಂಬಿಸಿದಳು. ಹೌದು, ಮಧುಕರ ಮನೆಗೆ ಬಾರದೆ ಅಂದಿಗೆ ಮೂರು ದಿನ!

ಈ ಬಾರಿಯದು ಕೆಮರಾ ಚುಂಬನಗಳನ್ನು ಅಪಹಾಸ್ಯ ಮಾಡಲಾ ಗುವ ಸ್ವರ್ಗೀಯ ಚುಂಬನ. ಮಧುಕರ ಆ ಮುಹೂರ್ತದಲ್ಲಿ ತನ್ನಾಕೆಯ ಕುರಿತು ತಾನು ಕಟ್ಟಿದ ಕಲ್ಪನೆಗಾಗಿ ಮನಸ್ಸಿನಲ್ಲೇ ನಾಚಿಕೊಂಡ. 'ರಾತ್ರಿ ಹಗಲು ನನ್ನನ್ನೇ ಧ್ಯಾನಿಸುವ ತಪಶ್ಶಕ್ತಿಯಿಂದಲ್ಲದೆ ಆಕೆಯ ಚುಂಬನಕ್ಕಿಂತಹ ಮಾಧುರ್ಯವೆಲ್ಲಿಂದ ಬರಬೇಕು?' ಮಧುಕರನ ಗಂಡು ಹೃದಯ ಪ್ರಶ್ನಿಸಿತು.

ಆದರೆ ಅವ ಮಾಡಿದ ಪ್ರತಿಜ್ಞೆಯಿದೆ. ತನ್ನವಳ ಪವಿತ್ರಾಚರಣೆ ಯನ್ನು ದಾಖಲೆ ಮೂಲಕ ರುಜುಪಡಿಸಿಕೊಳ್ಳಬೇಕು. ಆಗ ಆಕೆ ಮಾಧವಿಯಲ್ಲ – ಅಗ್ನಿ ಪರೀಕ್ಷೆ ಕೊಟ್ಟು ಬಂದ ಸೀತಾದೇವಿಯೇ ಆಗುತ್ತಾಳೆ!

ಮಾರಣೇ ದಿನವೂ ಬಿಡುವು ದೊರಕಿಸಿಕೊಂಡು ಮನೆಗೆ ಬಂದ. ಮಾಧವಿಯ ನಡತೆಯ ಕೊನೆಯ ತೀರ್ಮಾನವನ್ನು ಕೊಟ್ಟು ಬಿಡ ಬೇಕಾಗಿದೆ. ಅದನ್ನು ಅವಮಾನತಿಟ್ಟು ಕಳೆಯುವ ಕ್ಷಣವೂ ಮಧುಕರನ ಪಾಲಿಗೊಂದು ಯುಗ ಅದಕ್ಕಾಗಿ ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡೇ ಬಂದಿದ್ದ ಬಾಗಿಲಲ್ಲೇ 'ಹಲ್ಲೋ' ಎನ್ನುತ್ತಾ ರಾವ್ ಇದಿರು ಬರುತ್ತಾನೆ. ಏನು ಒಳಗಿನಿಂದ ಬಂದನೆ? ಮಾಧವಿ ಒಳಗಿರಬಹುದೆ? ಇಲ್ಲ, ಇಲ್ಲ. ಆಕೆ ಆಚೆ ಕೋಣೆಯಿಂದ ಹೊರಬಂದಳು–ಪತಿ ದೇವನ ಸ್ವಾಗತಕ್ಕೆ. ಮತ್ತೆ, ನನ್ನ ಮಾಧವಿ ರಾವ್‌ನನ್ನು......ಛೇ! ಆ ಯೋಚನೆಯೇ ಅನ್ಯಾಯ!'

"ರಾವ್, ನಮ್ಮ ಮಟ್ಟಿಗೆ ಈ ವಾರದಲ್ಲಿ ಹದಿನೈದು ದಿನಗಳು! ಯಾಕೆ ಗೊತ್ತೆ? ನೋಡು-ನಿನ್ನೆಯೂ ಸಮಯ ಸಿಕ್ಕಿತು, ಇವತ್ತೂ ಬಂದಿದ್ದಾರೆ. ಸ್ಟುಡಿಯೋದಲ್ಲಿ ಶೂಟಿಂಗ್ ನಡೆಯುತ್ತಿರುವದು ನಿನಗೂ ಗೊತ್ತಷ್ಟೆ. ಆದರೂ ಮನೆಗೆ ಬರಲು ಸಮಯ ಸಿಗಬೇಕಾದರೆ ವಾರಕ್ಕೆ ಹದಿನೈದು ದಿನವಿರಬೇಕು ಎಂದೆ ಮನಸ್ಸಿದ್ದರೆ ಸಮಯವೂ ಇದೆ ಎಂಬುದಕ್ಕೆ ಇದೇ ದೃಷ್ಟಾಂತ!"—ಮಾಧವಿ ಮಧುಕರನಿಗೆ ತಾಗಿ ನಿಂತು ಅವನ ಮುಖ ನೋಡುತ್ತಾ ಸರಸ ವಾಕ್ಯಾಡಿದಳು. ನನ್ನಾಕೆಯಂತೆ ಗಂಡ ಬಂದದಿನವೇ ಹಬ್ಬವೆನ್ನುವ ಯುವತಿಯರೆಷ್ಟು ಮಂದಿಯಿದ್ದಾರು ಲೋಕದಲ್ಲಿ?— ಮಧುಕರ ತನ್ನನ್ನು ತಾನೇ ಪ್ರಶ್ನಿಸಿಕೊಂಡ.

"ಆದರೆ ನನಗೀಗಲೇ ಹೋಗಬೇಕಾಗಿದೆ. ಇನ್ನು ನಾಳೆ ರಾತ್ರಿ ಹನ್ನೆರಡು ಘಂಟೆ ವಿನಹ ಸ್ಟುಡಿಯೋವಿನಿಂದ ಕಾಲ್ದೆಗೆವೆನೆಂದರೆ ಬಿಡು ದೊರೆಯದು. ನನ್ನ ಸೂಚನಾಪತ್ರವೊಂದು ಪೆಟ್ಟಿಗೆಯಲ್ಲೇ ಉಳಿದು ಹೋಗಿತ್ತು. ಅದಕ್ಕಾಗಿ ಬಂದೆ. ರಾವ್, ಕುಳಿತುಕೋ"–ಎನ್ನುತ್ತಾ ಮಧುಕರ ಒಳಗೆ ಹೋದ. ಮಾಧವಿ ಚಹಾ ತರಲು ಹೋದಳು. ರಾವ್ ,ತಾನು ಮೊದಲೇ ಹೊರಟವನೆನ್ನುತ್ತಾ ಹೊರಬಿದ್ದ.

ಮಧುಕರ ಕಂಡಿಯಲ್ಲಿದ್ದ ಕೆಮರಾವನ್ನು ತೆಗೆದ. ಅದನ್ಯಾರೂ ಮುಟ್ಟಿದಂತೆ ಕಂಡುಬರಲಿಲ್ಲ. ತೆಗೆದವನೇ ಎಡ ಬಲ ನೋಡಿಕೊಂಡು ಒಳಗಡೆ ರೀಲನ್ನು ತುಂಬಿಸಿದ. ಈಗ ಘಂಟೆಯೆರಡು. ಏನಾದರೂ ನಡೆಯಲಿದ್ದರೆ, ತಾನು ಹೊರಟು ಹೋಗಿ ಒಂದು ಘಂಟೆಯಾದರೂ

ಕಳೆದ ನಂತರ ನಡೆದೀತು. ಆದ್ದರಿಂದ ಮೂರು ಘಂಟೆಯ ನಂತರದ ಚಿತ್ರವೆಲ್ಲಾ ಬರಲಿ,—ಕೆಮರಾವು ಮೂರು ಘಂಟೆಗೆ ಚಾಲಾಗುವಂತೆ ಸಿದ್ಧ ಮಾಡಿಟ್ಟ. ಮಾಧವಿ ಕೊಟ್ಟ ಚಹಾ, ಚುಂಬನಗಳನ್ನು ಪಡೆದು ಸ್ಟುಡಿಯೋವಿಗೆ ಹೊರಟು ಹೋದ. ಪ್ರೇಮವು ಕುರುಡು! ತನ್ನ ಮೇಜಿನ ಮುಂಭಾಗದ ಕಂಡಿಗೊಂದು ಕಣ್ಣು ಬಂದಿದೆ ಎಂಬುದನ್ನು ಮಾಧವಿಯೇನು ಬಲ್ಲಳು?

ಂಂ ಂಂ ಂಂ ಂಂ

ಮರುದಿನ ರಾತ್ರಿ ಹನ್ನೆರಡು ಘಂಟೆಗೆ ಬರುವೆನೆಂದಿದ್ದ ಮಧುಕರ ಮಧ್ಯಾಹ್ನ ಹನ್ನೆರಡು ಘಂಟೆಗೇನೇ ಮನೆಗೆ ಹಾಜರಾದ. ಅವ ಕೆಮರಾ-ಮೇನ್ ಮನೆಯ ಕೆಮರ ಅವನನ್ನು ಕರೆಯಿತು! ಮಾಧವಿ ತುಟಿಯೊಡ್ಡುತ್ತಾ ಮುಂದೆಬಂದಾಗ “ನಿಲ್ಲು,ಅವಸರದ ಮೇಲೆ ಅವಸರದಿಂದ ಬಂದೆ. ಒಳಗಿದ್ದ ಕೆಮರಾದಲ್ಲಿ ಕೆಲಸವಿದೆ. ಅದು ತುಸು ಹಾಳಾಗಿರುವುದರಿಂದ ಪರೀಕ್ಷಿಸಲಿಕ್ಕಿದೆ. ಆ ತನಕ ನನ್ನ ಸುದ್ದಿಗೆ ಬರಬೇಡ; ಏಕಾಗ್ರತೆ ಕೆಡಿಸಬೇಡ” ಎಂದು ಮೊದಲಾಗಿ ಹೇಳಿ ಚುಂಬನ ಕೊಟ್ಟು, ಕಳುಹಿಕೊಟ್ಟ ಕಂಡಿಯ ಕೆಮರವನ್ನೆತ್ತಿಕೊಂಡು ತನ್ನ ಕೋಣೆಯ ಬಾಗಿಲನ್ನು ಭದ್ರವಾಗಿ ಹಾಕಿಕೊಂಡ. ಅದನ್ನು ಬಿಚ್ಚಿ ರೀಲನ್ನು ಹೊರತೆಗೆದ. ರೀಲಿನಲ್ಲಿ ಅಂತೆಯೇ ಮಧುಕರನ ಹೃದಯದಲ್ಲಿ—ಮಬ್ಬು ಕವಿದಿದೆ. ಎರಡರ ಮಬ್ಬೂ ಕೆಂಡ ಮುಚ್ಚಿದ ಬೂದಿ; ಒಳಗಡೆ ಝುಗಝುಗಿಸುತ್ತಿದೆ. ಈಗ ತೊಳೆದು ನೋಡುವ ಕೆಲಸವೊಂದೇ ಬಾಕಿ.

ಆ ಕೆಮರಾದ ಬಳಿ ಹೃದಯಮಾಪಕ ಯಂತ್ರವೊಂದಿರಬೇಕಿತ್ತು; ರೀಲನ್ನು ಕ್ರಮಪ್ರಕಾರ ತೊಳೆಯುತ್ತಾ ಬಂದಂತೆ ಮಧುಕರನ ಹೃದಯದಲ್ಲಾಗುತ್ತಿದ್ದ ಬದಲಾವಣೆಗಳನ್ನು ಅದರಲ್ಲಿ ಕಾಣಬಹುದಿತ್ತು.

ಮೊದಲಿನ ಕೆಲವು ಭಾಗ ಶುದ್ಧವಾಯಿತು; ಮಧುಕರನ ಹೃದಯವೂ ಬೆಳಗಿತು. ಅಲ್ಲಿ ಯಾವ ಚಿತ್ರವೂ ಮೂಡಿಲ್ಲ—ಅದು ಬರಿದು. ‘ನಾನಿಲ್ಲದಾಗ ಆ ಕೋಣೆಯೇ ಮಾಧವಿಗೆ ಮಸಣ ಸದೃಶವಾಗಿ ಕಾಣುತ್ತದೇನೊ! ಅಲ್ಲಿಗಾಕೆಯ ಸುಳಿವಿಲ್ಲ. ಆಕೆಯನ್ನು ಏಕಾಕಿಯಾಗಿ ಬಿಟ್ಟು ನಾನೆಂತಹ ಪಾಪ ಮಾಡಿದೆ! ನನ್ನ ಮಾಧವಿಯ ಮೇಲೂ ಆರೋಪ ಹೊರಿಸುವವರಿದ್ದಾರಲ್ಲಾ—ನರಕದ ಹುಳಗಳು!

ಅವ ಕ್ರಮ ಪ್ರಕಾರ ತೊಳೆಯುತ್ತಾ ಬಂದ; ರೀಲು ಹೊಳೆಯುತ್ತಾ ಬಂತು: — - - - -

"ಹಾಂ! ಒಳಗೆ ಬಂದಳು...ಅದೇನು...ಕೈಯಲ್ಲಿ ಚಹಾ ತಟ್ಟೆ! ಚಹಾ ಕುಡಿಯಲಿಕ್ಕೆ ಬಂದಿರಬೇಕು. ಮುಖದಲ್ಲೊಂದು ಉಲ್ಲಾಸ ವಿದೆ. ಯಾಕಾಗಿ? ಪ್ರಾಯಶಃ ಆ ಚಹಾಕ್ಕಿಂತಲೂ ನನ್ನ ತುಟಿಯೇ ರುಚಿಯೆಂದು ಭಾವಿಸಿಕೊಂಡಳೇನೋ! ಅದೇ ಧ್ಯಾನವೇನೊ! ಕೊನೆಯ ವರೆಗೂ ಹೀಗೇನೇ ಇರಲಿ!"

"ಅವಳೇ - — — ಅವಳೊಬ್ಬಳೇ ಇದ್ದಾಳೆ - - - "

"ಅರರೇ! ಇದು ಯಾರು?...ಯಾರೋ ಬಂದರಲ್ಲಾ?"

"ಹ್ದ!! ರಾವ್? ರಾವ್!......"

"ಘಾತಕಿ! ವಿಶ್ವಾಸ ದ್ರೋಹಿ!! ಅವಳ ಕುರ್ಚಿಯ ಮೇಲೆ ಕೈ ಯಿಟ್ಟು ನಗಾಲುತ್ತಿದ್ದಾನೆ. ಆಕೆಯ ಮೊಗ ಮೇಲಾಗಿದೆ. ರಾಕ್ಷಸೀ! ಅಯ್ಯೋ!"

"ಅಯ್ಯೋ! ನನ್ನ ಕಣ್ಣೇಕೆ ಕಳಚಿಹೋಗಲಾರದು! (ಹಣೆ ಬಡೆದು ಕೊಂಡು) ನಾಲ್ಕು ತುಟಿಗಳೂ ಒಂದಾಗಿವೆ...ರಾಕ್ಷಸಿಯ ಕುರ್ಚಿಯ ಮುಂಭಾಗದ ಕಾಲುಗಳೆದ್ದಿವೆ......ನರ ಭಕ್ಷಕೀ! ನೀನು ನಿನ್ನ ಕಣ್ಣು ಮುಚ್ಚಿಕೊಂಡ ರೀತಿಯೇ! ನನ್ನನ್ನು ಇಷ್ಟು ಸೊಗಸಾಗಿ ನೀನು ಚುಂಬಿ ಸಿದ್ದುಂಟೆ? ನಿನ್ನ ತುಟಿ-ಊಟಿ! ಇದೆಲ್ಲಿ?....ಇದೆಲ್ಲಿ?....ಅವನ ಕೈಯಲ್ಲಿ!! ...(ಎದೆ ತಾಡನ) ಹಾ! ಈ ರೀಲಿಗೆ ಬೆಂಕಿ ಕೊಡಲೆ—? ಮನೆಗೆ ಬೆಂಕಿ ಕೊಡಲೆ? ಪಿಸ್ತೂಲಿಲ್ಲದೆ ಹೋಯಿತಲ್ಲಾ!"

"ಅದೇ!........ಅದೇ!!.........ಅದೇ!!.........ಕಾಳೋರಗಗಳೇ! ಈಗ ಮುಖವೆತ್ತಿದಿರಾ!........ಪರಮೇಶ್ವರಾ! ನಿಮ್ಮ ನಗೆನೋಟಗಳ ಧಾಟಿಯೇ! ತಾಟಕೀ—ನಿನ್ನ ಈ ನೋಟ....ಅಯ್ಯೋ....ನನ್ನ ಕೈಯಲ್ಲಿ ಬೆಯನೆಟ್ ಇಲ್ಲದೆ ಹೋಯಿತೇ! ದೇವಾ......ಎದ್ದರು........ನರ ರಾಕ್ಷಸರೆದ್ದರು! ಯಾವ ಕಡೆ?...... ಹಾಂ!.........ಒಳ ಕೋಣೆಯ ಕಡೆಗೆ......ಭಗವಂತಾ! ಹೌದು......ಒಳ ಕೋಣೆಗೆ...............!! ಯಾರೂ ಇಲ್ಲ... ..ಇನ್ನಿಲ್ಲ......ಇಲ್ಲ!"

ಂ ಂ ಂ ಂ

ರೀಲು ಕೋಣೆ ತುಂಬಾ ಹರಡಿತ್ತು; ಕೆಮರಾ ಅಲ್ಲಿ ಬಿದ್ದಿತ್ತು; ಮಧುಕರನು ತಲೆಗೆ ಕೈಯಿಟ್ಟು ಕುಳಿತುಕೊಂಡಿದ್ದ. ಅರ್ಧ ಘಂಟೆ ಕಳೆಯಿತು. ಈ ಅವಧಿಯಲ್ಲೊಮ್ಮೆ ಬೆಂಕಿ ಕಡ್ಡಿ ಕೀರಿ ರೀಲಿಗೆ ಕೊಡಲು ಹೋಗಿದ್ದ. ಪತ್ನಿಯು ಅನ್ಯರನ್ನು ಚುಂಬಿಸುವದನ್ನು ನೋಡಬೇಕಾಗಿ ಬಂದ ತನ್ನ ಕಣ್ಣುಗಳನ್ನೇ ಕೀಳಬಾರದೇಕೆ ಎಂದು ತಲೆ ತುರಿಸಿಕೊಂಡಿದ್ದ. ಸೀದಾ ಹೋಗಿ ವ್ಯಭಿಚಾರಿಣಿಯ ಎದೆಗೆ ಚೂರಿಯನ್ನು ನೆಡಲೆ? ರಾವ್‌ಗೆ ಹೇಳಿ ಕಳುಹಿಸಿ ಇಬ್ಬರನ್ನೂ ಒಂದೇ ಬಾರಿ ತಿವಿಯಲೆ?... ..ಯೋಚನೆಯಲ್ಲಿ ಇನ್ನೊಂದು ಐದು ಮಿನಿಟು ಕಳೆಯುವಾಗ ಮಧುಕರನು ಪುನರ್ಜನ್ಮದಲ್ಲಿದ್ದವನಂತಾದ. ಅವನಲ್ಲಿ ಮೂಡಿದ ವಿಚಾರದಿಂದ ಮುಖ ಪ್ರಫುಲ್ಲವಾಯಿತು. ರೀಲನ್ನೆಲ್ಲಾ ತುಂಬಿಸಿ ಕೆಮರಕ್ಕೊಂದು ಚುಂಬನ ಕೊಟ್ಟ. ಅದನ್ನೆತ್ತಿಕೊಂಡು ಕೋಣೆಯ ಬಾಗಿಲು ತೆಗೆದು ಹೊರಟ; ಅವನ ಕಣ್ಣು ಹೆಣದ ದೃಷ್ಟಿಯಂತೆ ಮುಂಭಾಗದಲ್ಲೇ ನೆಟ್ಟುದರಿಂದಾಯಿತು—ಪಕ್ಕಕ್ಕೆ ಸರಿದು ಬರುತ್ತಿದ್ದ ಮಾಧವಿಯನ್ನು ನೋಡುತ್ತಿದ್ದರೆ ಏನು ಸಂಭವಿಸುತಿತ್ತೊ!

ಇದಿರುಗೊಳ್ಳಲು ಬಂದ ಮಾಧವಿ ಅವನ ವಿಕಾರ ರೂಪವನ್ನು ಕಂಡು ಬೆಚ್ಚಿ ಹಿಂಜರಿದಳು. ಕೆಮರಾ ಹಾಳಾಯಿತೆಂದು ಈ ಗೊಂದಲವೆ? ಅವಳಲ್ಲಿ ಫಕ್ಕನೊಂದು ಸಂದೇಹ ಮೂಡಿತು. ಆದರೆ ಸಾಧ್ಯವಿಲ್ಲ—ಅವನಿಗೆ ತನ್ನ ವರ್ತನೆಯ ಕಲ್ಪನೆ ಕೂಡ ಬರಲು ಸಾಧ್ಯವಿಲ್ಲ. ಆದ್ದರಿಂದ ಭಯವಿಲ್ಲ.

"ಏನು, ಸ್ಟುಡಿಯೋವಿಗೆ..." ಮೆಲ್ಲಗೆ ಪ್ರಶ್ನಿಯೆತ್ತಿದ ಮಾಧವಿ, ಆತ ಬೇಗ ಬೇಗನೇ ಕಾಲ್ದಿಗೆಯಹತ್ತಿದುದನ್ನು ಕಂಡು ಅಲ್ಲಿಗೇ ತಡೆದಳು. ಒಮ್ಮೆ ಕಂಠ ಸರಿಪಡಿಸಿಕೊಂಡು "ರಾತ್ರಿ ಬರುವಿರಾ?" ಎಂದಳು.

"ಬರುತ್ತದೆ, ನೋಡು!"—ಮಧುಕರನಂದ; ಮಾಧವಿಗೆ ಕೇಳಿಸಿತೋ ಇಲ್ಲವೋ

o o o o

ಬಂತು. ಮೂರೇ ದಿನಗಳಲ್ಲಿ 'ನೀನು ವ್ಯಭಿಚಾರಿಣಿ. ಆದ್ದರಿಂದ ನಿನ್ನೊಡನೆ ವಿವಾಹ ಸಂಬಂಧ ಕಡಿದುಕೊಂಡಿದ್ದೇನೆ' ಎಂದು ಮಧುಕರನ ವಕೀಲ್ ನೋಟೀಸು ಮಾಧವಿಗೆ ಬಂತು. ಮನಸ್ಸಾಕ್ಷಿ ಬೇರೆ, ಕೋರ್ಟು ಸಾಕ್ಷಿ ಬೇರೆ ಎಂಬುದನ್ನರಿತಿದ್ದ ಮಾಧವಿ ತಾನು ನಿರ್ದೋಷಿಯೆಂದು ವ್ಯವಹರಿಸಿದಳು. ಸವಿವರ ಹೇಳಿಕೆಯೊಡನೆ ಮಧುಕರನು ರೀಲನ್ನು ಕೋರ್ಟಿಗೆ ಹಾಜರುಪಡಿಸಿದಾಗ ಮಾಧವಿಗೆ ಮರುಸವಾಲಿಗೆಂತೂ ನಾಲಿಗೆಯಿಲ್ಲ—'ರಾ....ವ್' ಎನ್ನುವಷ್ಟು ಸ್ಮೃತಿ ಕೂಡಾ ಇರಲಿಲ್ಲ.

ವಿವಾಹವಿಚ್ಛೇದದ ತೀರ್ಪಿನಲ್ಲಿ ಜಡ್ಜರೊಂದು ವಾಕ್ಯ ಬರೆದಿದ್ದರು "ಆಧುನಿಕ ಕಾಲಕ್ಕೆ ತಕ್ಕಂತೆ ಅಪರಾಧ ಚಾತುರ್ಯವು ಹೆಚ್ಚುತ್ತಿರುವಂತೆಯೇ ಅದನ್ನು ಪತ್ತೆ ಹಚ್ಚುವ ಹೊಸ ಹೊಸ ಶೋಧಗಳೂ ನಡೆದಿವೆ ಯಾದ್ದರಿಂದ ತಪ್ಪು ತಪ್ಪಿ ಹೋಗುವಂತಾಗಿಲ್ಲವೆಂಬುದು ಸಂತೋಷದ ಸಂಗತಿ".

(ಆಧಾರದಿಂದ).

೩

ಗೌರಿ

— ೧ —

ತಾಯಿಮಗಳಿಬ್ಬರೂ ಊರಿನ ಒಂದು ಕೊನೆಯ ಜೋಪಡಿಯೊಂದರಲ್ಲಿದ್ದರು. ಕೂಲಿ ಮಾಡಿಯೇ ಅವರು ಜೀವಿಸುತ್ತಿದ್ದರು. ತಾಯಿಯು ವಿಧವೆಯಾಗಿದ್ದಳು, ಮಗಳಿಗೆ ಇನ್ನೂ ವಿವಾಹವಾಗಿರಲಿಲ್ಲ. ತಾಯಿಯ ಹೆಸರು ಗಂಗೆ, ಮಗಳ ಹೆಸರು ಗೌರಿ.

ಅನೇಕ ವರ್ಷಗಳಿಂದ ತಾಯಿಗೆ ಮಗಳ ವಿವಾಹದ ಚಿಂತೆ. ಜನರಿಗೆ ಗೌರಿಯು ಇನ್ನೊಬ್ಬರ ಮುಂದೆ ಕೈನೀಡದೆ ನಿಶ್ಚಿಂತೆಯಿಂದ ಜೀವನ ಮಾಡುತ್ತಿದ್ದುದೇ ಒಂದು ರಹಸ್ಯವಾಗಿದ್ದಿತು. ತನ್ನ ಹತ್ತಿರದ ಸಂಬಂಧಿಗಳಲ್ಲಿ ಯಾರೂ ಗೌರಿಯನ್ನು ವಿವಾಹವಾಗಲು ಒಪ್ಪಲಿಲ್ಲ.

ಗೌರಿಯು ಸುಂದರ ಯುವತಿ. ಅವಳು ಯಾವಾಗಲೂ ಯಾರೊಡನೆಯೂ ಕತ್ತೆತ್ತಿ ಮಾತನಾಡಿದವಳಲ್ಲ. ಆದರೆ ಜನರು ಇವಳ ಈ ನಡತೆಯನ್ನೂ ಸಹ ಸಂಶಯ ದೃಷ್ಟಿಯಿಂದಲೇ ನೋಡುತ್ತಿದ್ದರು. ಒಬ್ಬ ಯುವತಿಯು ಇಷ್ಟು ಮೌನದಿಂದಿರುವುದರಲ್ಲಿ ಏನೋ ಗುಟ್ಟು ಇರಬಹುದೆಂದು ಜನರು ಆಡಿಕೊಳ್ಳುತ್ತಿದ್ದರು. ಹೀಗೆಯೇ ದಿನಗಳು ಕಳೆದುವು. ಗಂಗೆಯು ದಿನದಿನಕ್ಕೆ ಮುದುಕಿಯಾದಳು; ಗೌರಿಯು ದಿನದಿನಕ್ಕೆ ಹೆಚ್ಚು ಸುಂದರಿಯಾಗುತ್ತಾ ಬಂದಳು.

— ೨ —

ಒಂದು ದಿನ ಯಾವನೋ ಒಬ್ಬ ಪ್ರಯಾಣಿಕನು ಎಲ್ಲಿಗೋ ಹೋಗುತ್ತ ಆ ಊರಿಗೆ ಬಂದನು. ರಾತ್ರಿಯಾಗಲು, ಇರುವುದಕ್ಕೆ ಎಲ್ಲಿಯಾದರೂ ಸ್ಥಳವನ್ನು ಹುಡುಕುತ್ತ ಗಂಗೆಯ ಮನೆಗೆ ಬಂದನು. ಗಂಗೆಯು ಅವನನ್ನು ಮರ್ಯಾದೆಯಿಂದ ಸತ್ಕರಿಸಿದಳು. ಬಂದವನು ಶೂದ್ರ ಜಾತಿಯವನು, ಹೆಸರು ರಂಗ. ಊಟವಾದ ನಂತರ ಮಾತು ಮಾತಿಗೆ ಗೌರಿಯ ವಿವಾಹದ ಸುದ್ದಿಯೂ ಬಂದಿತು. ಅವನು ಗೌರಿಯ

ರೂಪುಲಾವಣ್ಯಗಳನ್ನು ನೋಡಿ ಮರುಳಾಗಿ, ಆಕೆಯನ್ನು ವಿವಾಹವಾಗಲು ಒಪ್ಪಿ, ತನ್ನ ಊರಿಗೆ ಹಿಂದಿರುಗಿದನು. ತನ್ನ ತಂಗಿಯ ಕೆಲವು ಆಭರಣಗಳನ್ನೂ, ಸ್ವಲ್ಪ ಜವಳಿಯನ್ನೂ ತೆಗೆದುಕೊಂಡು ನಾಲ್ಕಾರು ಬಂಧುಮಿತ್ರರೊಡಗೂಡಿ ಗೌರಿಯ ಊರಿಗೆ ಬಂದನು. ವಿವಾಹವಾಯಿತು. ನಂತರ ಅಳಿಯನು ಗೌರಿಯ ಮನೆಯಲ್ಲೇ ಇರಲಾರಂಭಿಸಿದನು.

ಆದರೆ ಅಳಿಯ ರಂಗನ ಕಿವಿಯಲ್ಲಿ ಜನರು ಏನೇನೋ ಹೇಳಲಾರಂಭಿಸಿದರು, ಎಲ್ಲವನ್ನೂ ಕೇಳಿ ಅವನು ಮನಸ್ಸಿನಲ್ಲೇ "ಅಯ್ಯೋ, ಅನ್ಯಾಯವಾಗಿ ಇಲ್ಲಿ ಬಂದು ಸಿಕ್ಕಿಬಿದ್ದೆನಲ್ಲಾ!" ಎಂದು ಚಿಂತಿಸುತ್ತಿದ್ದನು. ಆದರೂ ಅವನಿಗೆ ಗೌರಿಯನ್ನು ಬಿಟ್ಟು ಹೋಗಲು ಮಾತ್ರ ಮನಸ್ಸಿರಲಿಲ್ಲ.

ಒಂದು ತಿಂಗಳ ನಂತರ ರಂಗನು ತನ್ನ ತಂಗಿಯ ಒಡವೆಗಳನ್ನು ಹಿಂದಿರುಗಿಸುವುದಕ್ಕೆಂದು ಹೊರಟುಬಂದನು. ಊಟದ ಸಮಯದಲ್ಲಿ ಅವನ ತಂಗಿಯ ಗಂಡನು ಅವನೊಡನೆ ಊಟಕ್ಕೆ ಕುಳಿತುಕೊಳ್ಳಲಿಲ್ಲ. ರಂಗನಿಗೆ ಸಂದೇಹವಾಯಿತು. "ಊಟಕ್ಕೇಕೆ ಬರುವುದಿಲ್ಲ ಭಾವ?" ಎಂದು ಭಾವನನ್ನು ಪ್ರಶ್ನಿಸಿದನು.

ಭಾವ— ನೀನು ಊಟ ಮಾಡು; ನಾನು ಆ ಮೇಲೇಳುವೆನು.

ರಂಗ— ಅದೇನು ಹೇಳೋ ಭಾವ, ಊಟಕ್ಕೇಕೆ ಬರೊಲ್ಲೆ?

ಭಾವ— ಪಂಚಾಯ್ತಿ ಆಗೋ ವರೆಗೆ ನಾನು ನಿನ್ನ ಜೊತೇಲಿ ಊಟ ಮಾಡೋದಿಲ್ಲ. ಹತ್ತಿರದ ಬಳಗವನ್ನು ಬಿಟ್ಟು, ಹೇಳಲಿಲ್ಲ, ಕೇಳಲಿಲ್ಲ, ಯಾರ ಮನೆಯಲ್ಲೋ ಹೋಗಿ ಮದುವೆಯಾಗಿದ್ದಾನೆ ಇವನು!

ರಂಗನು ತಕ್ಷಣ ಅಲ್ಲಿಂದ ಹೊರಟು ಅತ್ತೆ ಮನೆಗೆ ಬಂದುಬಿಟ್ಟ. ತಂಗಿಯು ಅಳುತ್ತ ನಿಂತಳು.

ಆ ರಾತ್ರಿಯೇ ಅವನು ಗೌರಿಯನ್ನೂ ಬಿಟ್ಟು, ಯಾರಿಗೂ ಹೇಳದೆ ಎಲ್ಲಿಗೋ ಹೊರಟುಹೋದನು. ಗೌರಿಯು ಗಾಢನಿದ್ರೆಯಲ್ಲಿದ್ದುದರಿಂದ ಪತಿಯು ಹೊರಟುಹೋದುದನ್ನು ತಿಳಿಯಲಾಗಲಿಲ್ಲ.

— ೩ —

ಎಷ್ಟೋ ವರ್ಷಗಳಾಗಿ ಹೋದುವು. ಎಲ್ಲಿಯೂ ರಂಗನ ಪತ್ತೆಯೇ ಇಲ್ಲ. ಒಂದು ಕಾಗದವೂ ಬರಲಿಲ್ಲ. ಆದರೂ ಗೌರಿಯು ಮಾತ್ರ ಸದಾ

ಆನಂದದಿಂದಲೇ ಇರುತ್ತಿದ್ದಳು. ಎಂದಿನಂತೆ ಹಣೆಗೆ ಕುಂಕುಮವನ್ನಿಟ್ಟು ಹೂವನ್ನು ಮುಡಿದುಕೊಳ್ಳುತ್ತಿದ್ದಳು. ತನ್ನ ಪತಿಯು ಬಿಟ್ಟು ಹೋಗಿದ್ದ ಒಂದು ಭಜನಾವಳಿಯಲ್ಲಿನ ಕೆಲವು ಭಜನೆಗಳನ್ನು ಆಗಾಗ್ಗೆ ಹಾಡುತ್ತಿದ್ದಳು.

ಮೊದಲು ಅವಳು ಒಬ್ಬಳೇ ಇರುತ್ತಿದ್ದಳು. ಊರಿನ ಇತರ ಸ್ತ್ರೀಯರೊಡನೆ ಮಾತನಾಡಲು ನಾಚಿಕೆಯಾಗುತಿತ್ತು. ಅವರೆಲ್ಲರಿಗೂ ವಿವಾಹವಾಗಿ ಗಂಡಂದಿರಿರುತ್ತಿದ್ದರು. ಆದರೆ ಈಗ ಇವಳಿಗೂ ಗಂಡ ನಿದ್ದಾನೆ, ಈಗ ಇವಳು ತನ್ನ ಗಂಡನ ವಿಷಯವನ್ನು ಎಲ್ಲರೊಡನೆ ಚರ್ಚಿಸುತ್ತಾಳೆ. ತನ್ನ ಗಂಡನ ಶಕ್ತಿ, ಸಾಹಸ, ಪ್ರೀತಿಗಳನ್ನು ವರ್ಣಿಸುವುದರಲ್ಲಿ ಗೌರಿಗೆ ಬಹಳ ಆನಂದ. ಆಗ ಇತರ ಸ್ತ್ರೀಯರು "ನಿನ್ನ ಗಂಡನು ನಿನ್ನನ್ನು ಬಿಟ್ಟು ಹೋದುದೇಕೆ?" ಎಂದು ಕೇಳುವರು. ಗೌರಿಯು "ಏನು ಮಾಡುವುದು! ಗಂಡಸಾದವನು ಯಾವಾಗಲೂ ಅತ್ತೆ ಮನೆಯಲ್ಲೇ ಇರಲಾಗುವುದೇ? ಅಲ್ಲಿ ಇಲ್ಲಿ ಹೋಗಿ ನಾಲ್ಕು ಕಾಸು ತರುವುದೇ ಅಲ್ಲವೇ ಗಂಡಸರ ಕೆಲಸ" ಎನ್ನುವಳು.

ಒಂದು ದಿನ ಒಬ್ಬ ಗೆಳತಿಯು ಗೌರಿಗೆ– "ಬಿಡೆ ಸುಳ್ಳು ಹೇಳ್ತೀಯಾ. ನಿನ್ನ ಗಂಡ ನಿನ್ಸಂಗಡ ಜಗಳವಾಡಿ ಹೋಗಿದ್ದಾನೆ" ಎಂದಳು. ಅದಕ್ಕೆ ಗೌರಿಯು ನಗುತ್ತ ಹೀಗೆಂದಳು, "ಅಕ್ಕ, ತನ್ನ ದೇವರೊಡನೆ ಯಾರಾದರೂ ಜಗಳವಾಡೋದುಂಟೆ? ಅವರು ನನ್ನ ಯಜಮಾನರು, ಅವರೊಡನೆ ಜಗಳವೇ? ಛೆ, ಹಾಗೇನಾದರೂ ಜಗಳ ವಾಡಬೇಕಾಗಿ ಬಂದ ದಿನ ನಾನು ನೀರಿನಲ್ಲಿ ಮುಳುಗಿ ಸಾಯುವೆನು. ನನ್ನ ಕೂಡೆ ಹೇಳಿ ಅವರು ಹೋಗಲು ಸಾಧ್ಯವೇ? ಎಂದಿಗೂ ಇಲ್ಲ, ಹೇಳಿದ್ದಿದ್ದರೆ ಅವರ ಕೈಕಾಲು ಕಟ್ಟಿಕೊಂಡುಬಿಡ್ತಿದ್ದೆ."

— ೪ —

ಒಂದು ದಿನ ಕಲ್ಕತ್ತೆಯಿಂದ ಯಾವನೋ ಒಬ್ಬನು ಗಂಗೆಯ ಮನೆಗೆ ಬಂದನು. ಕಲ್ಕತ್ತೆಯಲ್ಲಿ ಅವನು ರಂಗನ ನೆರೆಯಲ್ಲಿದ್ದನು. ರಂಗನು ತನ್ನ ಪತ್ನಿಯನ್ನು ಕರೆದುಕೊಂಡು ಬರುವಂತೆ ಇವನಿಗೆ ಹೇಳಿದ್ದನು. ಎರಡು ಸೀರೆಗಳನ್ನು ಮತ್ತು ಪ್ರಯಾಣದ ವೆಚ್ಚವನ್ನು ಸಹ

ಕಳುಹಿಸಿದ್ದನು. ಗೌರಿಯ ಆನಂದಕ್ಕೆ ಪಾರವೇ ಇಲ್ಲ. ವೃದ್ಧ ಬ್ರಾಹ್ಮಣ ನೊಡನೆ ಹೊರಡಲು ಸಿದ್ಧಳಾದಳು. ಗಂಗೆಯು ಸ್ಟೇಷನ್ನಿನ ವರೆಗೂ ಹೋಗಿ ಕಳುಹಿಸಿ ಬಂದಳು.

ದಾರಿಯಲ್ಲಿ ಗೌರಿಯು ಈ ರೀತಿ ಯೋಚಿಸುತ್ತ ಬಂದಳು:-"ಅವರು ಈಗ ಹೇಗಿದ್ದಾರೋ ಕಾಣೆ! ಶರೀರ ದಪ್ಪವಾಗಿರಬಹುದು. ನಾನು ಮೊದಲೆರಡು ದಿನಗಳು ಅವರೊಡನೆ ಮಾತಾಡೋದೇ ಇಲ್ಲ. ನನ್ನನ್ನು ಯಾಕೆ ಬಿಟ್ಟು ಬಂದಿರಿ ಎಂದು ಕೇಳುವೆನು. ಯಾರಾದರೂ ನನ್ನ ವಿಷಯದಲ್ಲಿ ಏನಾದರೂ ಕೆಟ್ಟುದನ್ನು ಹೇಳಿದ್ದರೆ, ನೀವು ಕಣ್ಣಿಂದ ನೋಡದೆ ಏಕೆ ನಂಬಿದಿರಿ ಎಂದು ಕೇಳುವೆನು. ನನ್ನನ್ನು ಇಷ್ಟು ದಿನ ಏಕೆ ಗೋಳಾಡಿಸಿದಿರಿ ಎನ್ನುವೆನು." ದಾರಿಯಲ್ಲಿ ಮುದುಕ ಬ್ರಾಹ್ಮಣನೊ ಡನೆ "ಇನ್ನು ಎಷ್ಟು ದೂರವಿದೆ" ಎನ್ನುವಳು. ಇದೇ ರೀತಿ ಇನ್ನು ಎಷ್ಟೋ ಕನಸನ್ನು ಮನಸಿನಲ್ಲೇ ಕಾಣುತ್ತ ಬಂದಳು.

ಪಾಪ, ಆ ಬಡಪಾಯಿಗೆ ತಾನು ಯೋಚಿಸುವುದೇ ಒಂದಾದರೆ, ಈಶ್ವರನ ಇಚ್ಛೆಯೇ ಬೇರೆ ಎಂಬುದು ಹೇಗೆ ತಾನೆ ಗೊತ್ತಾಗಬೇಕು? ಮುದುಕ ಬ್ರಾಹ್ಮಣನ ವೇಷದಲ್ಲಿ ಪುಂಡರು ತಿರುಗುವರೆಂಬುದು ಪಾಪ ಅವಳಿಗೇನು ಗೊತ್ತು? ಪಾಪ, ಗೌರಿಯು ಮನದ ಮಂಡಿಗೆಯನ್ನು ತಿನ್ನುವುದರಲ್ಲೇ ಮಗ್ನಳಾಗಿದ್ದಳು.

— ೫ —

ಮೂರನೆ ದಿನ ರೈಲು ಕಲ್ಕತ್ತೆಗೆ ಬಂದಿತು. ಗೌರಿಯ ಎದೆಯು ಡಬಡಬಿಸಹತ್ತಿತು. ಅವನು ಇಲ್ಲೇ ಎಲ್ಲೋ ನಿಂತಿರಬಹುದು. ಇನ್ನೇನು, ಬರಬಹುದು ಎಂದು ನೋಡಲಾರಂಭಿಸಿದಳು. ಆದರೆ ರಂಗನ ಸುಳಿವೇ ಇಲ್ಲ ಎಲ್ಲಿಯೂ. ಆಗ ಮುದುಕನು "ರಂಗನು ಎಲ್ಲಿಯೂ ಕಾಣಿಸುವು ದಿಲ್ಲ. ಪ್ರಾಯಶಃ ಎಲ್ಲೋ ಕೆಲಸಕ್ಕೆ ಹೋಗಿರಬಹುದು. ರಜ ಸಿಗ ಲಿಲ್ಲವೋ ಏನೋ? ನಾವು ಇಂತಹ ಗಾಡಿಯಿಂದಲೇ ಬರುತ್ತೇವೆಂದು ಅವನಿಗೇನು ಗೊತ್ತು? ನಡೆ ಹೋಗೋಣ" ಎಂದನು.

ಇಬ್ಬರೂ ಟಾಂಗಾದಲ್ಲಿ ಕುಳಿತರು. ಗೌರಿಯು ಎಂದೂ ಟಾಂಗಾ ದಲ್ಲಿ ಕುಳಿತವಳಲ್ಲ. ಗಾಡಿಯಲ್ಲಿ ಕುಳಿತುಕೊಳ್ಳುವವರೆಲ್ಲ ಸಾಹುಕಾರರೇ

ಎಂದು ತಾನು ತಿಳಿದಿದ್ದುದರಿಂದ, ತಾನೂ ಗಾಡಿಯಲ್ಲಿ ಕುಳಿತಿರುವೆನಲ್ಲ ಎಂದು ಮನಸ್ಸಿನಲ್ಲೇ ಹಿಗ್ಗುತ್ತಿದ್ದಳು.

ಸ್ವಲ್ಪ ಹೊತ್ತಿನಲ್ಲಿ ಗಾಡಿಯು ಒಂದು ಬಂಗಲೆಯ ಬಳಿ ಬಂದು ನಿಂತಿತು. ಸುತ್ತಲೂ ಹೂವಿನ ತೋಟಗಳು. ಮಹಡಿಗೆ ಅಮೃತಶಿಲೆಯ ಮೆಟ್ಟಲುಗಳು. ಗೌರಿಯು ಬ್ರಾಹ್ಮಣನೊಡನೆ ಮಹಡಿಯನ್ನೇರಿದಳು. ಆಶ್ಚರ್ಯ, ಆನಂದ ಮತ್ತು ಆಶೆಗಳೊಡನೆ ಅವಳು ಮೇಲೇರುತ್ತಿದ್ದಳು. "ಈ ಅರಮನೆ ಎಲ್ಲ ಅವರದೇ! ಬಾಡಿಗೆ ಬಹಳಾಂತ ಕಾಣುತ್ತೆ! ಹಣಾಂದ್ರೆ ಅವರಿಗೇನೂ ಲೆಕ್ಕವೇ ಇಲ್ಲವೇನೋ! ಅವರೇನಾದರೂ ಹಾಸಿಗೆಯಲ್ಲಿ ಮಲಗಿದ್ದರೆ ನಾನೇ ಹೋಗಿ ಎಬ್ಬಿಸುವೆನು. ನನ್ನನ್ನು ನೋಡಿದ ಕೂಡಲೆ ಅವರು ಗಡಿಬಿಡಿಯಲ್ಲಿ ಏಳುವರು" ಎನ್ನುತ್ತ ಹತ್ತಿದಳು. ಮೆಟ್ಟಲು ಮುಗಿಯಿತು. ಬ್ರಾಹ್ಮಣನು ಗೌರಿಯನ್ನು ಒಂದು ಕೋಣೆಯಲ್ಲಿ ಕೂರಿಸಿದನು. ಆದರೆ ಅಲ್ಲಿಯೂ ರಂಗನಿರಲಿಲ್ಲ! ಒಂದೇ ಒಂದು ಮಂಚವಿತ್ತು. ಒಂದು ಮೂಲೆಯಲ್ಲಿ ಕೆಲವು ಪಾತ್ರೆಗಳಿದ್ದುವು. ಒಂದು ಗಡಿಗೆಯಲ್ಲಿ ನೀರಿತ್ತು. ಗೌರಿಗೆ ತುಂಬಾ ಬಾಯಾರಿಕೆಯಾದುದರಿಂದ ಅವಳು ನೀರನ್ನು ಕುಡಿದಳು. ಮೂಲೆಯಲ್ಲಿ ಒಂದು ಕಸ ಪೊರಕೆ ಇತ್ತು. ಗೌರಿಗೆ ಮಾರ್ಗಾಯಾಸವಾಗಿದ್ದರೂ ಪ್ರೇಮದ ಆವೇಶದಲ್ಲಿ ಅದನ್ನು ಮರೆತು, ಕೋಣೆಯನ್ನು ಗುಡಿಸಿದಳು! ಪಾತ್ರೆಗಳನ್ನೆಲ್ಲಾ ತೊಳೆದು ಒಂದು ಕಡೆ ಇಟ್ಟಳು. ಕೋಣೆಯ ಪ್ರತಿಯೊಂದು ವಸ್ತುವಿನಲ್ಲಿಯೂ ಅವಳಿಗೆ ಪ್ರೇಮವೇ ಕಂಡುಬರುತ್ತಿತ್ತು. ತನ್ನ ಜೀವನದ 15 ವರ್ಷಗಳನ್ನು ಕಳೆದ, ತನ್ನ ಸ್ವಂತ ಮನೆಯಲ್ಲಿ ಕೂಡ ಅವಳಿಗೆ ಈ ಸೌಖ್ಯವು ಪ್ರಾಪ್ತವಾಗಿರಲಿಲ್ಲವೆನ್ನಬಹುದು.

ಆದರೂ ಸಂಜೆಯಾದರೂ ರಂಗನು ಬರಲೇ ಇಲ್ಲ. ಸಂಜೆಗೆ ಎಲ್ಲೆಲ್ಲಿಯೂ ಬಿಡುವಾಗುವದೆಂದೂ, ಇನ್ನೇನು ನನ್ನ ಪತಿಯು ಬರಬಹುದೆಂದೂ ಆತುರತೆಯಿಂದ ಹಾದಿಯನ್ನು ಕಾಯುತ್ತ ಕುಳಿತಿದ್ದಳು.

ರಾತ್ರಿಯಾಯಿತು. ಕೋಣೆಯಲ್ಲಿ ದೀಪವಿರಲಿಲ್ಲ. ಗೌರಿಯು ಬಾಗಿಲಲ್ಲಿ ನಿಂತು ರಂಗನು ಬರುವುದನ್ನು ನೋಡುತ್ತ ನಿಂತಳು. ಯಾರೂ ಬರಲಿಲ್ಲ. ರಾತ್ರಿ 9 ಗಂಟೆಗೆ ಮುದುಕನು ಬಂದನು. ರಂಗನೇ ಬಂದ

ನೆಂದು ಗೌರಿಯ ಭಾವನೆ. ಬ್ರಾಹ್ಮಣನೇ ಬರಲು "ಅವರೆಲ್ಲಿ?" ಎಂದು ಕೇಳಿದಳು.

ಮುದುಕ—ನಿನ್ನ ಗಂಡನಿಗೆ ಇಲ್ಲಿಂದ ವರ್ಗವಾಯಿತಂತೆ. ಆಫೀಸಿನಲ್ಲಿ ಕೇಳಿದೆ. ರಂಗನು 10 ದಿನ ರಜ ಪಡೆದು ಊರಿಗೆ ಹೋದನಂತೆ ಯಾರಾದರೂ ತನ್ನವರು ಬಂದರೆ ತಾನಿರುವ ಕಡೆ ಕಳುಹಿಸುವಂತೆ ತನ್ನ ಸ್ನೇಹಿತರಿಗೆ ಹೇಳಿ, ವಿಳಾಸವನ್ನೂ ಸಹ ಕೊಟ್ಟು ಹೋಗಿದ್ದಾನೆ. ನಾನು ನಾಳೆ ನಿನ್ನನ್ನು ಹಡಗಿನಲ್ಲಿ ಕೂರಿಸುವೆನು. ಹಡಗಿನಲ್ಲಿ ನಮ್ಮ ಊರಿಗೆ ಇನ್ನೂ ಅನೇಕರಿರುವರು. ಆದುದರಿಂದ ದಾರಿಯಲ್ಲಿ ತೊಂದರೆ ಏನೂ ಆಗುವುದಿಲ್ಲ.

ಗೌರಿ—ಹಡಗು ಎಷ್ಟು ದಿನದಲ್ಲಿ ಮುಟ್ಟುವುದು?

ಮುದುಕ—8—10 ದಿನಕ್ಕಿಂತ ಕಡಿಮೆಯಾಗುವುದಿಲ್ಲ. ಆದರೆ ಚಿಂತೆ ಮಾಡಬೇಡ. ನಿನಗೆ ಯಾವ ತೊಂದರೆಯೂ ಆಗುವುದಿಲ್ಲ.

— ೬ —

ಇದು ವರೆಗೆ ಗೌರಿಗೆ ತನ್ನ ಊರಿಗೆ ಹಿಂತಿರುಗಬಹುದೆಂಬ ಆಸೆ ಇತ್ತು. ಆದರೆ ಹಡಗಿನಲ್ಲಿ ಕುಳಿತ ಮೇಲೆ ಅವಳಿಗೆ ಭಯವಾಯಿತು. ತನ್ನ ಊರಿಗೆ ತಾನು ಹಿಂದಿರುಗುವೆನೆಂಬ ಭರವಸೆ ಇಲ್ಲದಂತಾಯಿತು. ಹಡಗನ್ನೂ ಸಮುದ್ರವನ್ನೂ ನೋಡಿ ಅವಳಿಗೆ ಬಹಳ ಭಯವಾಯಿತು.

ರಾತ್ರಿಯಾಯಿತು. ಗೌರಿಗೆ ಏಕೋ ಏನೋ ಬಹಳ ಭಯವಾಯಿತು. ಹಡಗಿನಲ್ಲಿ ಎಷ್ಟೋ ಜನರಿದ್ದರು. ಅನೇಕ ಮಂದಿ ಸ್ತ್ರೀಯರೂ ಇದ್ದರು. ಅವರು ಪರಸ್ಪರ ಬಹಳ ತುಚ್ಛವಾಗಿ ಬೈದಾಡುತ್ತಿದ್ದರು. ಒಬ್ಬಳು ಮಾತ್ರ ಬಹಳ ಚಿಂತೆ ಮಾಡುತ್ತಾ ಕುಳಿತಿದ್ದಳು. ಅವಳನ್ನು ನೋಡಿದರೆ ದೊಡ್ಡವರ ಮನೆ ಹೆಣ್ಣು ಮಗಳೆಂದು ತೋರುತ್ತಿತ್ತು. ಗೌರಿಯು ಅವಳನ್ನು "ಅಕ್ಕ, ಎಲ್ಲಿಗೆ ಹೋಗುತ್ತಿರುವೆ?" ಎಂದು ಕೇಳಿದಳು.

ಸ್ತ್ರೀ—ಏನು ಹೇಳಲಿ ತಂಗಿ, ಎಲ್ಲಿಗೆ ಕನಸಿನಲ್ಲಿ ಸಹ ಹೋಗಬಹುದೆಂದು ಊಹಿಸಿರಲಿಲ್ಲವೋ ಅಲ್ಲಿಗೆ ಹೋಗುತ್ತಿದ್ದೇನೆ. ನೀನೆಲ್ಲಿಗೆ ಹೋಗುತ್ತಿದ್ದೀಯೆ?

ಗೌರಿ—ನಾನಂತೂ ನನ್ನ ಗಂಡನ ಬಳಿ ಹೋಗುತ್ತಿದ್ದೇನೆ. ಈ ಹಡಗೆಲ್ಲಿ ನಿಲ್ಲುವುದೋ, ಅಲ್ಲೇ ಅವರು ಕೆಲಸಮಾಡುತ್ತಿರುವುದು. ನಾನು ನಿನ್ನೆಯೇ ಬಂದಿದ್ದರೆ ಕಲ್ಕತ್ತೆಯಲ್ಲೇ ಅವರನ್ನು ಕಾಣಬಹುದಾಗಿತ್ತು. ಏನು ಮಾಡಲಿ, ತಡವಾಯಿತು.

ಸ್ತ್ರೀ ಅಯ್ಯೋ ತಂಗಿ, ನೀನು ಮನೆಯಿಂದ ಯಾರೊಡನೆ ಬಂದೆ?

ಗೌರಿ—ನನ್ನ ಯಜಮಾನರು ಕಲ್ಕತ್ತೆಯಿಂದ ಯಾರೋ ಒಬ್ಬ ಮುದುಕನನ್ನು ಕಳುಹಿಸಿ ನನ್ನನ್ನು ಬರಹೇಳಿದ್ದರು.

ಸ್ತ್ರೀ—ಅವನ ಪರಿಚಯವು ನಿನಗಿತ್ತೇ?

ಗೌರಿ - ಇಲ್ಲ, ಆ ಕಡೆಯವನೇ ಒಬ್ಬ ಮುದುಕ.

ಸ್ತ್ರೀ—ಅದೇ ಆ ಎತ್ತರವಾದ ಮುದುಕ, ಒಂದು ಕಣ್ಣಲ್ಲಿ ಹೂ ಇದೆಯಲ್ಲ, ಅವನೇ ತಾನೇ?

ಗೌರಿ ಹೌದ್ಹಾದು, ಅವನೇ, ನಿನಗೆ ಆವನು ಗೊತ್ತೆ?

ಸ್ತ್ರೀ—ಆ ಪಾಪಿಯೇ ನನ್ನನ್ನೂ ಹಾಳುಮಾಡಿದ್ದಾನೆ. ಅವನ ವಂಶವೆಲ್ಲ ನರಕಕ್ಕೆ ಹೋಗಲಿ, ಅವನ ವಂಶ ಹಾಳಾಗಲಿ, ಅವನಿಗೆ ಕುಷ್ಟ ರೋಗ ಹತ್ತಲಿ! ನಾನು ನನ್ನ ಕತೆಯನ್ನು ಹೇಳಿದರೆ ನೀನು ನಂಬಲಾರೆ. ಅವನಿಂದಾಗಿ ನಾನು ಯಾರಿಗೂ ಮುಖವನ್ನೇ ತೋರಿಸದಂತಾದೆನು. ಮಾರತ್ತಿಗೆ ಹೋಗಿ ಕೂಲಿ ಮಾಡಿ ಜೀವಿಸೋಣವೆಂದು ಹೊರಟಿದ್ದೇನೆ.

ಗೌರಿಗೆ ಪ್ರಾಣವೇ ಹೋದಂತಾಯಿತು. ಹಡಗು ಆಳವಾದ ನೀರಿನಲ್ಲಿ ಮುಳುಗುತ್ತಿರುವಂತೆ ತೋರಿತು. ಮುದುಕನು ಮೋಸ ಮಾಡಿದನೆಂದು ತಿಳಿದಳು. "ಅಯ್ಯೋ, ದೇವರೇ! ನನ್ನ ಯಾವ ತಪ್ಪಿಗಾಗಿ, ನೀನು ನನಗೆ ಈ ಶಿಕ್ಷೆ ಕೊಟ್ಟೆ" ಎಂದುಕೊಂಡು "ಅಕ್ಕ ಈ ಜನರೆಲ್ಲರನ್ನೂ ಈ ರೀತಿ ಏಕೆ ಕಳುಹಿಸುತ್ತಿರುವರು?" ಎಂದು ಕೇಳಿದಳು.

ಸ್ತ್ರೀ ಹಣಕ್ಕಾಗಿ, ಮತ್ತಿನ್ನೇಕೆ?

ಗೌರಿ—ಅಲ್ಲಿ ನಾವೇನು ಮಾಡಬೇಕಾಗುವುದು?

ಸ್ತ್ರೀ—ಕೂಲಿ.

ಗೌರಿಯ ಆಶಾನೌಕೆಯು ಮುಳುಗಿ ಹೋಯಿತು. ತನ್ನ ತಾಯಿ, ಊರು, ಗೆಳತಿಯರೆಲ್ಲ ಅವಳ ನೆನಪಿಗೆ ಬಂದರು.

ಸ್ತ್ರೀ—ಕೂಲಿಮಾಡುವುದೇನೂ ಕೆಟ್ಟದಲ್ಲ. ಆದರೆ ಯಾವ ಪಾಪಿಯಾದರೂ ಕೆಟ್ಟದೃಷ್ಟಿ ಇಟ್ಟರೇನು ಮಾಡುವುದು? ಈ ರೀತಿ ಏನಾದರೂ ಆದರೆ ನಾನಂತೂ ಅವನನ್ನು ಕೊಂದು ನಾನೂ ಸಾಯಬೇಕೆಂದೇ ನಿಶ್ಚಯಿಸಿದ್ದೇನೆ.

ಗೌರಿಯು ಅವಳ ಧೈರ್ಯವನ್ನು ಕಂಡು ಚಕಿತಳಾದಳು. "ಅಕ್ಕಾ, ನಾನೂ ನೀನೂ ಒಟ್ಟಿಗೇ ಇರೋಣ. ನನಗೆ ನಿನ್ನದೇ ಭರವಸೆ."

ಸ್ತ್ರೀ— ದೇವರನ್ನು ನಂಬು, ಮರಣಕ್ಕೆ ಅಂಜದಿರು.

ಹಡಗಿನಿಂದಿಳಿದ ಕೂಡಲೆ, ಒಬ್ಬನು ಬಂದು ಪ್ರಯಾಣಿಕರ ಹೆಸರನ್ನು ಬರೆಯಲಾರಂಭಿಸಿದನು. ಅವನ ಉಡುಪು ಆಂಗ್ಲ ರೀತಿಯಲ್ಲಿದ್ದರೂ ಮಾತಿನಲ್ಲಿ ಭಾರತೀಯನಂತೆ ತೋರುತ್ತಿದ್ದನು. ಗೌರಿಯು ಅವನ ಸ್ವರವನ್ನು ಕೇಳಿ ಚಕಿತಳಾದಳು. ಅವಳು ಅವನನ್ನು ಕಣ್ಣು ತುಂಬ ನೋಡಿದಳು. ಅವಳ ದೇಹದಲ್ಲಿ ರೋಮಾಂಚನವಾಯಿತು. ಎದೆಯು ಗಟ್ಟಿಯಾಗಿ ಹೊಡೆದುಕೊಳ್ಳಹತ್ತಿತು ಅವಳಿಗೆ ತನ್ನ ಕಣ್ಣನ್ನು ನಂಬುವದು ಅಸಾಧ್ಯವಾಯಿತು. ಯಾರು ತನ್ನ ಹೃದಯದಲ್ಲಿದ್ದನೋ, ಅವನೇ ಎದುರಿನಲ್ಲಿ ನಿಂತಿದ್ದನು. ಯಾರನ್ನು ತನ್ನ ಜೀವನದಲ್ಲಿ ಪುನಃ ನೋಡುವ ಆಸೆಯು ಗೌರಿಗೆ ಇರಲಿಲ್ಲವೋ. ಆ ರಂಗನೇ ತನ್ನ ಎದುರಿನಲ್ಲಿ ನಿಂತಿದ್ದನು. ಅದರಲ್ಲಿ ಏನೇನೂ ಸಂಶಯವಿಲ್ಲ. ಆದರೆ ಮುಖವಂತೂ ಬದಲಾಯಿಸಲ್ಪಟ್ಟಿತು. ಹಿಂದಿನ ಯೌವನವಿರಲಿಲ್ಲ; ಮಾತಿನ ಆ ಮಾಧುರ್ಯವೂ ಇರಲಿಲ್ಲ: ತಲೆ ಎಲ್ಲ ಬೆಳ್ಳಗಾಗಿ ಹೋಗಿತ್ತು. ಮುಖದಲ್ಲಿ ಕ್ರೌರ್ಯವೂ ಎದ್ದು ಮೂಡಿತ್ತು, ಆದರೆ ಅವನು ರಂಗನೇ ಆಗಿದ್ದನು. ಗೌರಿಯು ಪತಿಯ ಚರಣಗಳನ್ನು ಹಿಡಿಯಬೇಕೆಂದು ಮನಸ್ಸು ಮಾಡಿದಳು. ಆದರೆ ಲಜ್ಜೆಯಿಂದ ಸುಮ್ಮನಾದಳು. ಮುದುಕ ಬ್ರಾಹ್ಮಣನು ಮಾಡಿದ್ದು ಸರಿಯಾದುದೇ ಎಂದುಕೊಂಡು, ಆ ಸ್ತ್ರೀಯ ಕಿವಿಯಲ್ಲಿ ಹೀಗೆಂದಳು; — "ಅಕ್ಕ, ನೀನು ಆ ಮುದುಕನನ್ನು ಅನ್ಯಾಯವಾಗಿ ಬೈಯುತ್ತಿದೆ. ಇವರೇ ನಮ್ಮವರು."

ಸ್ತ್ರೀ—ನಿಜವೇ, ಗುರುತಿಸಬಲ್ಲೆಯಾ?

ಗೌರಿ—ಏನಕ್ಕ, ಇನ್ನೂ ನಂಬಲಾರೆನೆ?

ಸ್ತ್ರೀ - ಹಾಗಾದರೆ ನೀನೆ ಭಾಗ್ಯಶಾಲಿ, ನನ್ನ ಯೋಗಕ್ಷೇಮವನ್ನೊ ಸ್ವಲ್ಪ ನೋಡಿಕೊಳ್ಳುವಿಯಾ?

ಗೌರಿ— ಇದೇನಕ್ಕ, ಇಲ್ಲಿ ನಿನ್ನ ಕೈಬಿಡುವೆನೆ?

ರಂಗನು ಪ್ರಯಾಣಿಕರೊಡನೆ ಮಾತುಮಾತಿಗೂ ರೇಗುತ್ತಿದ್ದನು; ಅವರನ್ನು ಬೈಯುತ್ತಿದ್ದನು; ಅನೇಕರನ್ನು ಒದ್ದನು. ತಮ್ಮ ಜಿಲ್ಲೆಯ ಹೆಸರನ್ನು ಹೇಳಲಿಲ್ಲವೆಂದು ಕೆಲವರನ್ನು ನೂಕಿ ಕೆಳಗೆ ಉರುಳಿಸಿದನು. ಕೊನೆಗೆ ಅವರ ಸರದಿಯೂ ಬರಲು "ನಿನ್ನ ಹೆಸರೇನು?" ಎಂದು ಕೇಳಿದನು.

ಗೌರಿ – ಗೌರಿ.

ರಂಗ —(ಆಶ್ಚರ್ಯದಿಂದ) ಊರ್ಯಾವುದು?

ಗೌರಿಯು "ಬನಾರಸ್ ಜಿಲ್ಲೆಯ ಮದನಪುರ" ಎನ್ನುವಾಗ ಅವಳಿಗೆ ನಗು ಬಂದುಬಿಟ್ಟಿತು. ರಂಗನು ಅವಳನ್ನು ಚೆನ್ನಾಗಿ ನೋಡಿ ಅವಳ ಕೈ ಹಿಡಿದುಬಿಟ್ಟ. "ಗೌರಿ, ಇದೇನು, ನೀನು ಇಲ್ಲಿಗೇಕೆ ಬಂದೆ? ಎಂದು ಕೇಳಿದನು.

ಗೌರಿಯು ಅಳುತ್ತ ನಿಂತಳು. ರಂಗನು ಪುನಃ "ನೀನು ಇಲ್ಲಿಗೆ ಹೇಗೆ ಬಂದೆ?" ಎಂದನು. ಗೌರಿಯು ಕಣ್ಣನ್ನು ಒರಸಿಕೊಳ್ಳುತ್ತ "ನೀವೇ ಕರೆಸಿಕೊಂಡಿದ್ದೀರಲ್ಲ!" ಎಂದಳು.

ರಂಗ— ನಾನೇ! ನಾನು ಇಲ್ಲಿ ಏಳು ವರ್ಷದಿಂದ ಇದ್ದೇನೆ.

ಗೌರಿ – ನೀವು ಮುದುಕ ಬ್ರಾಹ್ಮಣನೊಡನೆ ನನ್ನನ್ನು ಕರೆದು ತರುವಂತೆ ಹೇಳಲಿಲ್ಲವೆ?

ರಂಗ— 7 ವರ್ಷದಿಂದ ಇಲ್ಲೇ ಇದ್ದೀನೀ ಅಂತಾ ಹೇಳ್ತಾ ಇದ್ದೀನೀ, ನಿನ್ನನ್ನು ಹೇಗೆ ಕರೆಸಲಿ!

ಗೌರಿಗೆ ಈ ರೀತಿ ಉತ್ತರ ದೊರೆಯುವ ನಿರೀಕ್ಷಣೆ ಇರಲಿಲ್ಲ. "ಅವರು ಒಂದುವೇಳೆ ಬರಹೇಳದಿದ್ದರೂ ನನ್ನನ್ನು ಈ ರೀತಿ ಅವಮಾನಗೊಳಿಸಬೇಕೆ? ನಾನು ಹೊಟ್ಟೆಗಿಲ್ಲದೆ ಬಂದವಳೇ" ಎಂದು ಯೋಚಿಸಿ ಕತ್ತೆತ್ತಿ—"ನಿಮಗೆ ಮನಸ್ಸಿಲ್ಲದಿದ್ದರೆ ಈಗಲೂ ಹಿಂದಿರುಗಲು ಸಿದ್ಧಳೇ ಇದ್ದೇನೆ"- ಎಂದಳು.

ರಂಗ (ನಾಚಿಕೆಯಿಂದ) ಇಲ್ಲಿಂದ ಇನ್ನು ಐದು ವರ್ಷಗಳ ಮುಂಚೆ ನೀನು ಹೊರಡಲಾರೆ.

ಗೌರಿ—ಏನು ಬಲವಂತವೇ?

ರಂಗ—ಹೌದು, ಇಲ್ಲಿಯ ನಿಯಮವೇ ಹಾಗಿದೆ.

ಗೌರಿ—ಹಾಗಾದರೆ ನಾನೇ ಬೇರೆ ಕೂಲಿ ಮಾಡಿ ಜೀವನ ಮಾಡುವೆನು.

ರಂಗ—(ಕಣ್ಣಿನಲ್ಲಿ ನೀರನ್ನು ತಂದು) ನಾನು ಜೀವಿಸಿರುವ ತನಕ ನಿನ್ನನ್ನು ಬಿಟ್ಟಿರಲಾರೆನು.

ಗೌರಿ—ನಿಮಗೆ ಹೊರೆಯಾಗಿರಲಾರೆನು.

ರಂಗ—ನೀನು ನನಗೆ ಹೊರೆಯೇ ಗೌರಿ! ಆದರೆ ಈ ಜಾಗವು ನಿನ್ನಂತಹ ಸತಿಯರಿರಲು ಯೋಗ್ಯವಾದುದಲ್ಲ. ಇಲ್ಲವಾದರೆ ನಾನು ನಿನ್ನನ್ನು ಇದುವರೆಗೆ ಬರಮಾಡಿಕೊಳ್ಳದೇ ಇರತ್ತಿದ್ದೆನೆ? ನಿನ್ನನ್ನು ಕರೆದು ತಂದ ಮುದುಕನೇ ನನ್ನನ್ನೂ ಮೋಸಗೊಳಿಸಿ ಇಲ್ಲಿಗೆ ಕಳುಹಿಸಿದನು. ನಡೆ, ಮನೆಗೆ ಹೋಗೋಣ. ಈ ಹೆಂಗಸ್ಯಾರು?

ಗೌರಿ—ಇವಳು ನನ್ನ ಗೆಳತಿ. ಇವಳನ್ನೂ ಆ ಮುದುಕನೇ ಮೋಸಪಡಿಸಿದ್ದಾನೆ.

ರಂಗ - ಎಲ್ಲರನ್ನೂ ಇಲ್ಲಿ ಹಿಂಗಡಿಸಲಾಗುವುದು.

ಗೌರಿ—ಇವಳು ನನ್ನೊಡನೆ ಇರಬೇಕೆಂದಿದ್ದಾಳೆ.

ರಂಗ—ಒಳ್ಳೇದು, ಕರೆದುಕೊಂಡು ಬಾ.

ಮೂವರೂ ಮನೆಗೆ ಹೊರಟರು. ರಂಗನು ಮಾತ್ರ ತಲೆಯನ್ನು ತಗ್ಗಿಸಿ, ಸಂಶಯಮನಸ್ಕನಾಗಿ ನಡೆಯುತ್ತಿದ್ದನು. ಎದುರಿನಲ್ಲಿ ಇಬ್ಬರು ಬರುತ್ತಿದ್ದರು. ಒಬ್ಬನು ನಗುತ್ತಾ ರಂಗನೊಡನೆ "ಇವರ ಪೈಕಿ ಒಬ್ಬಳು ನನಗೆ" ಎಂದನು. ಇನ್ನೊಬ್ಬನು "ಇನ್ನೊಬ್ಬಳು ನನಗೆ" ಎಂದನು. ರಂಗನಿಗೆ ಕೋಪನೇರಿತು. ಕಂಪಿತ ಧ್ವನಿಯಲ್ಲಿ "ಇವರಿಬ್ಬರೂ ನನ್ನ ಮನೆಯವರು" ಎಂದನು. ಅದಕ್ಕೆ ಇಬ್ಬರೂ ನಕ್ಕರು. ಒಬ್ಬನು ಬಂದು ಗೌರಿಯ ಕೈಯನ್ನು ಹಿಡಿಯಲೆತ್ನಿಸುತ್ತಾ—"ಇವಳು ಯಾರೇ ಆಗಿರಲಿ, ನನಗೆ ಬೇಕು" ಎಂದನು.

ರಂಗ—ಖಾಸಿಂ, ಬೇಡ, ಸುಮ್ಮನಿರು. ನನ್ನ ಮನೆಯವರು ಎಂದು ನಾನು ಹೇಳಲಿಲ್ಲವೇ?

ಇಬ್ಬರೂ "ನೋಡೋಣ" ಎಂದು ಮುಂದೆ ಸಾಗಿದರು.

ಗೌರಿ—ಈ ಇಬ್ಬರೂ ಬಹಳ ಪೋಲಿಗಳಂತ ಕಾಣುತ್ತೆ.

ರಂಗ—ಅದಕ್ಕೆ ತಾನೇ ನಾನು ಈ ಸ್ಥಳ ನಿನ್ನಂತಹ ಸ್ತ್ರೀಯರಿಗೆ ಯೋಗ್ಯವಲ್ಲ ಎಂದು ಹೇಳಿದುದು.

ಅಷ್ಟರಲ್ಲಿ ಒಬ್ಬ ಬಿಳಿಯ ಅಧಿಕಾರಿಯು ಕುದುರೆ ಮೇಲೆ ಬಂದನು. ಅವನು ರಂಗನನ್ನು ನೋಡಿ "ವೆಲ್, ಜಮದಾರ್, ಈ ಹೆಂಗ್ಸರು ನನ್ನ ರೂಂ (ಕೋಣೆ) ನಲ್ಲಿರ್ಲಿ. ಈಗ ನನಗೆ ಯಾರೂ ಇಲ್ಲ."

ರಂಗ—ಸಾಬ್, ಇವರಿಬ್ಬರೂ ನನ್ನ ಮನೆಯವರೇ.

ಸಾಹೇಬ್—ಓಹೋ, ಸುಳ್ಳುಗಾರ! ನನ್ನಲ್ಲಿ ಒಬ್ಬ ಹೆಂಗಸೂ ಇಲ್ಲದಿರುವಾಗ ನಿನಗೆ ಇಬ್ಬರು ಬೇಕೇ? (ಗೌರಿಯನ್ನು ತೋರಿಸುತ್ತಾ) ಇವಳನ್ನು ರೂಂಗೆ ಕಳಿಸಿಬಿಡು.

ರಂಗ—ಸಾಧ್ಯವಿಲ್ಲ.

ಆದರೆ ರಂಗನ ಮಾತು ಸಾಹೇಬನ ಕಿವಿಯ ಮೇಲೆ ಬೀಳುವ ಮೊದಲೇ ಅವನು ಹೊರಟುಹೋಗಿದ್ದನು ಸಾಹೇಬನ ಮಾತಿನಂತೆ ನಡೆಯುವುದು ಇವನ ಕರ್ತವ್ಯವಾಗಿತ್ತು.

— ೭ —

ರಂಗನು ತನ್ನ ಮನೆ ಬಾಗಿಲಲ್ಲಿ ರೈತನು ಹೊಲವನ್ನು ಕಾಯುವಂತೆ ಕಾಯುತ್ತಿದ್ದನು. ಒಳಗೆ ಇಬ್ಬರು ಹೆಂಗಸರು ತಮ್ಮ ಭಾಗ್ಯವನ್ನು ನಿಂದಿಸುತ್ತ ಕುಳಿತಿದ್ದಾರೆ. ರಾತ್ರಿ 10ರ ಸಮಯಕ್ಕೆ ಒಬ್ಬ ಸಿಪಾಯಿಯು ಬಂದು "ರಂಗ, ಸಾಹೇಬರು ನಿನ್ನನ್ನು ಕರೆಯುತ್ತಾರೆ" ಎಂದನು.

ರಂಗ—ನಬೀಸಾಬ್, ನೋಡು, ನೀನೂ ನನ್ನ ದೇಶದವನು. ಸಮಯ ಬಂದರೆ ನನಗೆ ಸಹಾಯಮಾಡಬೇಕು. ರಂಗ ಎಲ್ಲಿಗೋ ಹೋಗಿದ್ದಾನೆಂದು ಸಾಹೇಬರಿಗೆ ಹೇಳಿಬಿಡು. ಬಹಳಾಂದ್ರೆ ಜುಲ್ಮಾನೆ ಯಾದೀತು.

ನಬಿ—ಕುಡಿದಿದ್ದಾರೋ ಏನೋ! ಬಹಳ ಸಿಟ್ಟಾಗಿದ್ರು.

ರಂಗ—ಒಳ್ಳೇದು, ಬರೋದಿಲ್ಲ ಎಂದೇ ಹೇಳುಬಿಡು.

ನಬಿ—ನನಗೇನಂತೆ, ಏನ್ಬೇಕಾದ್ರೂ ಹೇಳ್ತೀನಿ. ಆದರೆ ನಿಂಗತಿ?

ರಂಗನು ಯೋಚಿಸಿ, ನಬಿಯೊಡನೆ ಹೊರಟನು. ಹೋಗಿ ಸಾಹೇಬರ ಮುಂದೆ ನಿಂತನು. ಸಾಹೇಬನು ದೂರದಿಂದಲೇ "ಎಲ್ಲಿ ಆ ಹೆಂಗ್ಸು ನೀನ್ಯಾಕಿಟ್ಕೊಂಡೆ ಅವಳ್ನ" ಎಂದು ಕೂಗಿದನು.

ರಂಗ—ಸಾಬ್, ಅವಳು ನಾನು ಮದುವೆಯಾದ ಹೆಂಡತಿ.

ಸಾಹೇಬ್—ಇನ್ನೊಬ್ಳು?

ರಂಗ – ನನ್ನ ಸ್ವಂತ ತಂಗಿ.

ಸಾಹೇಬ್—ಅದೆಲ್ಲ ನಂಗೊತ್ತಿಲ್ಲ. ಯಾರಾದರೂ ಒಬ್ಳು ನಂಗೆ ಬೇಕೇಬೇಕು.

ರಂಗನು ಸಾಹೇಬನ ಕಾಲಿನ ಮೇಲೆ ಬಿದ್ದನು. ಆದರೂ ಏನೂ ಲಾಭವಾಗಲಿಲ್ಲ. "ಸ್ವಾಮಿ, ಅವರು ಇತರರಂತಲ್ಲ. ಇಲ್ಲಿಗೆ ಒಂದು ವೇಳೆ ಬಂದರೂ ಪ್ರಾಣ ಕಳೆದುಕೊಳ್ಳುವರು".

ಸಾಹೇಬ್—ಓಹೋ! ಪರಾಣ ಬಿಡೋದು ಸುಲಬಾ ಆಲ್ಲ.

ನಬಿ—ರಂಗ, ಏಕೆ ಅಳುವೆ ನನ್ನ ಮನೆಗೆ ಬಂದಿರಲಿಲ್ಲವೇ?

ಸಾಹೇಬ್—ಬೇಗ ಹೋಗಿ ಕರೆದುಕೊಂಡು ಬಾ ಇಲ್ದಿದ್ರೆ ....!

ರಂಗ— ಸಾಬ್, ಎಷ್ಟು ಬೇಕಾದರೂ ಹೊಡೀರಿ. ನನ್ನಿಂದ ಆ ಕೆಲಸ ಸಾಧ್ಯವಿಲ್ಲ.

ಕುಡಿದಿದ್ದ ಸಾಹೇಬನು ರಂಗನಿಗೆ ಬಹಳವಾಗಿ ಏಟು ಕೊಟ್ಟನು.

ರಾತ್ರಿ 10 ಗಂಟೆಯಾಗಿದೆ. ಎಲ್ಲೆಲ್ಲಿಯೂ ಕತ್ತಲು. ರಂಗನ ಕೂಗನ್ನು ಯಾರೂ ಕೇಳುವವರೇ ಇಲ್ಲ. ತನ್ನ ಪತ್ನಿಯ ಸಖಿಯ ಮಾನರಕ್ಷಣೆಗಾಗಿ ಅವನು ತನ್ನ ಪ್ರಾಣವನ್ನೇ ಕೊಡುವುದಕ್ಕೆ ಸಿದ್ಧನಾಗಿದ್ದಾನೆ.

oo oo oo

ಗೌರಿಯ ಸಖಿಗೆ ನಿದ್ರೆ ಬಂದಿದೆ. ಗೌರಿಯು ಮಾತ್ರ ಪತಿಗಾಗಿ ಕಾದಿದ್ದಾಳೆ. ತಾನು ಪತಿಯೊಡನೆ 7 ವರ್ಷಗಳ ಕತೆಯನ್ನು ಹೇಳಿ,

ಕೇಳಬೇಕಾಗಿದೆ. ರಾತ್ರಿಯೇ ಅದಕ್ಕೆ ಸರಿಯಾದ ಸಮಯ. ಈ ಹಾಳು ಹೆಂಗಸೆಲ್ಲಿ ಗುಂಟುಬಿದ್ದಳಪ್ಪ ಎಂದು ಮನಸ್ಸಿನಲ್ಲೇ ಕೊರಗುತ್ತಿದ್ದಾಳೆ. ಎಲ್ಲಿಂದಲೋ ಅಳುವ ಶಬ್ದ ಕೇಳಿಸಿತು. ಹೊರಗೆ ಬಂದು ಕೇಳಿದಳು. ಗಂಡನ ಶಬ್ದವೇ! ಎದೆ ನಡುಗಿತು. ಯಾರೋ ರಂಗನನ್ನು ಹೊಡೆಯುತ್ತಿದ್ದಾರೆ! ತಕ್ಷಣ ಅಲ್ಲಿಗೆ ಓಡಿದಳು. ಬಂಗಲೆಯ ಹೊರಗೆ ರಂಗನು ಬೆತ್ತಲೆ ನಿಂತಿದ್ದಾನೆ. ಸಾಹೇಬನು ಹಂಟರಿನಿಂದ ಹೊಡೆಯುತ್ತಿದ್ದಾನೆ. ಮಿಂಚಿನಂತೆ ಅವಳು ಸಾಹೇಬನ ಎದುರಿಗೆ ನಿಂತು, "ಸರ್ಕಾರ್, ದಯ ವಿಡಿ. ಅವರಿಗೆ ಬದಲಾಗಿ ನನ್ನನ್ನು ಎಷ್ಟು ಬೇಕಾದರೂ ಹೊಡೆಯಿರಿ" ಎಂದಳು.

ಸಾಹೇಬನು ಸುಮ್ಮನಾಗಿ, "ನಾನು ಇವನನ್ನು ಬಿಟ್ಟರೆ ನೀನು ಇಲ್ಲಿ ಬರ್ತೀಯಾ" ಎಂದನು. ರಂಗನ ಕೋಪವು ಮೀರಿತು. ಯಾವ ಬೆಲೆಬಾಳುವ ರತ್ನವನ್ನು ಕಾಪಾಡಲು, ಅವನು ಇಷ್ಟು ತೊಂದರೆಯನ್ನು ಅನುಭವಿಸಿದನೋ, ಅದೇ ಅವನ ಕೈಗೆ ಸಿಕ್ಕಿ ಬೀಳುವುದರಲ್ಲಿದೆ. ಸಾಹೇಬನ ಕತ್ತನ್ನು ಹಿಸುಕಿ ಬಿಡೋಣವೆಂದೆದ್ದನು. ಆದರೆ 4—6 ಮಂದಿ ಬಂದು ಅವನ ಕೈಕಾಲುಗಳನ್ನು ಕಟ್ಟಬಿಗಿದರು. ಗೌರಿಯು ಪುನಃ ಸಾಹೇಬನನ್ನು ಪ್ರಾರ್ಥಿಸಲು, ಅವನು "ನೀನಿಲ್ಲಿರ್ತೀಯಾ ಹೇಳ್, ಬಿಡ್ತೀನಿ" ಎಂದ. ಗೌರಿಯು "ಆಗಲಿ" ಎಂದಳು.

— ೮ —

ರಂಗನು ಹೊರಗಡೆ ಬಿದ್ದಿದ್ದಾನೆ. ಶರೀರದಲ್ಲೆಲ್ಲಾ ವಿಪರೀತ ನೋವು. ಒಳಗೆ ಸಹಿಸಬಾರದ ಅನ್ಯಾಯ ನಡೆಯುತ್ತಿರುವುದಲ್ಲ ಎಂದು ಅವನು ಕುದಿಯುತ್ತಿದ್ದಾನೆ. ಶೃಂಗರಿಸಲ್ಪಟ್ಟ ಸಾಹೇಬನ ಕೋಣೆಯಲ್ಲಿ ಗೌರಿಯು ಕುಳಿತಿದ್ದಾಳೆ. ಅವಳ ದೃಷ್ಟಿಯು ಒಂದು ಚಿತ್ರದ ಮೇಲೆ ಬಿತ್ತು. ಅದರಲ್ಲಿ ಒಬ್ಬ ತಾಯಿಯು ಕುಳಿತಿದ್ದಳು. ಗೌರಿಯು "ನಿಮ್ಮ ತಾಯಿ ಇರುವರೇ?" ಎಂದು ಸಾಹೇಬನನ್ನು ಕೇಳಿದಳು.

ಸಾಹೇಬ್—ಅವ್ರು ಸತ್ತು ಹೋಗಿದ್ದಾಳೆ. ನಾನು ನೋಡೇ ಇರ್ಲಿಲ್ಲ.

ಗೌರಿ—ಆದಕ್ಕೇ ನಿಮ್ಮ ಮನಸ್ಸು ಹೀಗೆ ಕಠಿಣವಾಗಿರುವುದು.

ಸಾಹೇಬ್—ಇಲ್ಲ, ಇಲ್ಲ. ಅಂತಹ ಹೆಂಗ್ಸು ಲೋಕದೊಳ್ಗೆ ಇಲ್ಲ. ಬಾಳ ಚಲೋ ಹೆಂಗಸು.

ಗೌರಿ—ಅಂತವಳ ಮಗ ಹೀಗಾಗಬಹುದೆ?

ಗೌರಿಯು, ಹೇಗೂ ಪ್ರಾಣದ ಮೇಲೆ ಆಸೆ ಇರಲಿಲ್ಲವಾದುದರಿಂದ ನಿರ್ಭಯಳಾಗಿ ಮಾತಾಡುತ್ತಿದ್ದಳು. ಅವಳು ಜಾಣೆಯಲ್ಲವಾದರೂ, ಎಂತಹವನೇ ಆಗಲಿ, ತಾಯಿಯನ್ನು ಪ್ರೀತಿಸುವನೆಂಬುದನ್ನು ತಿಳಿದಿದ್ದಳು.

ಗೌರಿ—ಸಾಹೇಬ್, ನಿಮ್ಮ ತಾಯಿ ಜೀವಿಸಿದ್ದಲ್ಲಿ, ಈಗ ಸುಮ್ಮನೆ ಕುಳಿತಿರುತ್ತಿದ್ದರೆ? ಒಂದು ವೇಳೆ ಬದುಕಿದ್ದಿದ್ದರೆ, ಅವರು ಈಗ ವಿಷವನ್ನು ಕುಡಿದು ಪ್ರಾಣಬಿಡುತ್ತಿದ್ದರು!

ಸಾಹೇಬನ ಕಣ್ತೆರೆಯಿತು. ಅವನು ಗಟ್ಟಿಯಾಗಿ ಅಳಲಾರಂಭಿಸಿದನು. ಚಿತ್ರದ ಬಳಿ ಅಳುತ್ತ ನಿಂತನು—ಕ್ಷಮೆ ಬೇಡುವವನಂತೆ! ತಕ್ಷಣ ಗೌರಿಯ ಬಳಿಗೆ ಬಂದು, ರಂಗನನ್ನು ಆಸ್ಪತ್ರೆಗೆ ಕಳುಹಿಸುವೆನೆಂದು ಹೇಳಿದನು.

— ೯ —

ರಾತ್ರಿಯೇ ರಂಗನನ್ನು ಆಸ್ಪತ್ರೆಗೆ ಸಾಗಿಸಿದರು, ರಂಗನು 3 ದಿನ ಕಣ್ಣುಬಿಡಲಿಲ್ಲ. ಗೌರಿಯು ಅಲ್ಲೇ ಇದ್ದಳು. ನಾಲ್ಕನೇ ದಿನ ಅವನ ಕಣ್ಣುಬಿಟ್ಟನು. ಎದುರಿಗೆ ಗೌರಿ ಕುಳಿತಿದ್ದಾಳೆ. "ಹೇಗಿದ್ದೀರಿ?" ಎಂದು ಕೇಳಿದಳು.

ರಂಗ—ನೀನು ಇಲ್ಲಿಗೆ ಯಾವಾಗ ಬಂದೆ?

ಗೌರಿ—ಮೊದಲಿನಿಂದಲೂ ಇಲ್ಲೇ ಇದ್ದೇನೆ.

ರಂಗ—ಸಾಹೇಬನ ಮನೆಯಲ್ಲಿ ಜಾಗವಿರಲಿಲ್ಲವೇ?

ಗೌರಿ—ಬಂಗಲೆಯಲ್ಲಿ ಜಾಗವಿದ್ದಿದ್ದರೆ, ಸಮುದ್ರಗಳನ್ನು ದಾಟಿ ಬರುತ್ತಿದ್ದೆನೆ?

ರಂಗ—ಬಂದು ನನಗೇನು ಸುಖವಾಯಿತು? ನೀನು ಹೀಗೆ ಮಾಡಬೇಕೆಂದಿದ್ದರೆ, ನಾನು ಸಾಯುವುದೇ ಒಳ್ಳೇದಾಗುತ್ತಿತ್ತಲ್ಲ!

ಗೌರಿ—ಈ ರೀತಿ ಮಾತನಾಡಿ ನನ್ನ ಶರೀರಕ್ಕೆ ಬೆಂಕಿ ಹತ್ತಿಸಬೇಡಿ.

ರಂಗನು ಮಾತನಾಡಲು ಇಷ್ಟವಿಲ್ಲದೆ ಮುಖವನ್ನು ತಿರುಗಿಸಿ ಬಿಟ್ಟನು. ಈ ಸಂದೇಹಪೂರ್ಣವಾದ ಅವಮಾನವನ್ನು ಗೌರಿಯು ಸಹಿಸಲಾರದೆ ಹೋದಳು ತನ್ನ ದೇವತೆಯೇ ಹೀಗೆ ಮಾಡಿದರೆ........?

ಮಧ್ಯರಾತ್ರಿಯ ಸಮಯ. ರಂಗನಿಗೆ ನಿದ್ದೆ ಬಂದಿದೆ. ಗೌರಿಯು ಅವನ ಕಾಲ ಮೇಲೆ ತನ್ನ ತಲೆಯನ್ನಿಟ್ಟು, ಆಸ್ಪತ್ರೆಯಿಂದ ಹೊರಟಳು.

ಹತ್ತಿರದಲ್ಲಿ ನದಿಯಿತ್ತು. ಗೌರಿಯು ಅಲ್ಲಿ ಬಂದು ಕುಳಿತಳು. ಅವಳಿಗೆ ತನ್ನ ಊರು, ತಾಯಿ, ಸ್ನೇಹಿತರು ಎಲ್ಲ ನೆನಪಾಯಿತು. "ಸಾಹೇಬನ ಮನೆಯಲ್ಲಿ ನಿನಗೆ ಜಾಗವಿರಲಿಲ್ಲವೇ?" ಎಂಬ ರಂಗನ ಮಾತು ಅವಳಿಗೆ ಶೂಲಪ್ರಾಯವಾಗಿತ್ತು. ಎಲ್ಲ ತನ್ನಿಂದಲೇ ಅಲ್ಲವೇ, ತಾನಿಲ್ಲದಿದ್ದರೆ ಅವರು ಸುಖವಾಗಿರುತ್ತಿದ್ದರು ಎಂದುಕೊಂಡಳು ಕೂಡಲೆ ಅವಳ ಸಖಿಯು ನೆನಪಾಯಿತು. ಸಾಹೇಬನ ಬಳಿಹೋಗಿ ಅವಳನ್ನು ಊರಿಗೆ ಹಿಂದಿರುಗಿಸೆಂದು ಹೇಳಬೇಕೆಂದು ಮನಸ್ಸು ಮಾಡುವಷ್ಟರಲ್ಲಿ ಯಾರೋ ಹಿಂದಿನಿಂದ "ಗೌರಿ' ಎಂದು ಕೂಗಿದರು. ರಂಗನ ಶಬ್ದ. "ಗೌರಿ, ಇಲ್ಲೇಕೆ ಬಂದೆ? ದೇವರಾಣೆ..."

ಗೌರಿಗೆ ಇನ್ನೇನೂ ಕೇಳಿಸಲಿಲ್ಲ. ಅವಳು ದಢಂ ಎಂದು ನೀರಿಗೆ ಬಿದ್ದಳು. ತನ್ನ ಜೀವನವನ್ನು ಕೊನೆಗಾಣಿಸದೆ ತನ್ನ ಗಂಡನ ತೊಂದರೆಯನ್ನು ಕೊನೆಗಾಣಿಸಲಾರೆನೆಂದು ಅವಳು ನಿಶ್ಚಯಿಸಿದ್ದಳು.

ದಢಂ ಎಂಬ ಶಬ್ದವನ್ನು ಕೇಳಿದ ಕೂಡಲೆ, ರಂಗನೂ ನದಿಗೆ ಧುಮುಕಿದನು. ಅವನಿಗೆ ಈಜುವುದು ಚೆನ್ನಾಗಿ ಬರುತ್ತಿತ್ತು. ಆದರೆ ಎಷ್ಟು ಹುಡುಕಿದರೂ ಗೌರಿ ದೊರೆಯಲಿಲ್ಲ.

ಮಾರನೇ ದಿನ ಇಬ್ಬರ ದೇಹಗಳೂ ಒಟ್ಟಿಗೆ ನದಿಯಲ್ಲಿ ತೇಲುತ್ತಿದ್ದುವು.

(ಉರ್ದುವಿನಿಂದ)

೪

ಎಂತಹ ಕೊಲೆ

ಆ ಸುಂದರಿ ಯುವತಿ ದೊಗ್ಗಾಲೂರಿ ಪ್ರಾಣದಾನಕ್ಕಾಗಿ ಅಂಗಲಾಚುತ್ತಿದ್ದಳು. ಅವಳ ಕಣ್ಣುಗಳು ಮರಣ ಭೀತಿಯಿಂದ ಮಂಕಾಗಿದ್ದವು. ಮುಂಭಾಗದಲ್ಲಿ, ಹುಲ್ಲೆಯ ಮೇಲೆ ಬೀಳುವ ತೋಳನಂತೆ ಸಿಗಿಯಲು ನಿಂತಿದ್ದ ಆ ದೃಢಕಾಯದ ವ್ಯಕ್ತಿಯೊಂದನ್ನುಳಿದು, ಬೇರಾರಾದರೂ ಆ ಕಾಲದಲ್ಲಿ ಈಕೆಯ ಮುಖ ನೋಡುತ್ತಿದ್ದರೆ ಅವರ ಎದೆ ಬಿರಿದು ಹೋಗುವದು ಖಂಡಿತ. ಆದರೆ ಆ ವ್ಯಕ್ತಿ? ಅವನ ಕಣ್ಣುಗಳಲ್ಲಿ ಕೊಲೆಗಡುಕ ಪ್ರಕಾಶ! ಮುಖದಲ್ಲಿ ಮರುಕ್ಷಣದ ಮೃತ್ಯುಕಾರ್ಯಕ್ಕೆ ಅಣಿಯಾಗುವ ಉದ್ವೇಗ!

“ನೀನು ಪಿಶಾಚಿ!” ಅವನು ಔಡುಗಚ್ಚಿದ. ಆ ಗಂಡು ಶರೀರೀ ಯುವಕನ ತೋಳುಗಳ ಸ್ನಾಯುಗಳು ಉಬ್ಬಿ ಬಂದುವು—ಎರಡೂ ಕೈಗಳು ಯುವತಿಯ ಕಂಠದ ಸರಿಸಕ್ಕೆ ಮುಂದಾದುವು. ಇನ್ನೇನು? ಈ ಕ್ಷಣದಲ್ಲೇ ಆ ಯಮ ಬಾಹುಗಳು ಆಕೆಯ ಕಂಠ ಹಿಸುಕಿ ನೆಲಕ್ಕೊಗೆಯಲಿವೆ. ಆದರೆ ಫಕ್ಕನೆ ಅವನ ಮುಖದ ಛಾಯೆ ಬೇರಾಯಿತು.

“ನಿನ್ನನ್ನು ಕೊಂದು ಫಲವಿಲ್ಲ”— ಆತನ ಕಂಠದಿಂದ ಹೊರಟಿತು.

ಕೋಣೆಯ ಹೊರಗೆ ಕಿಟಕಿಯೆಡೆಯಿಂದ ಇಷ್ಟನ್ನೂ ಇಣುಕುತಿದ್ದ ವ್ಯಕ್ತಿಯು ಆ ಮುಹೂರ್ತದಲ್ಲಿ ಹತ್ಯೋದ್ಯೋಗಿಯ ಮಸ್ತಕಕ್ಕೆ ನೇರಾಗಿ ಪಿಸ್ತೂಲು ಹಿಡಿದಿತ್ತು. ‘ನೀನು ಕೊಲೆಗರ್ಹಳಲ್ಲ!’ ಎಂದು ಒಳಗಿನ ಮನುಷ್ಯ ಶಾಂತನಾದಾಗಲೇ ಆ ಪಿಸ್ತೂಲು ತಗ್ಗಿತು; ಪಿಸ್ತೂಲುಧಾರಿಯೊಮ್ಮೆ ವಿಕಟವಾಗಿ ನಕ್ಕ. “ನೀನೂ ಈಗ ಕೊಲೆಗರ್ಹನಲ್ಲ; ಒಂದು ದಿನ ನಿನ್ನ ಅದೃಷ್ಟ ನಿಶ್ಚಯಿಸಿಯೇ ಸಿದ್ಧ!” ಎನ್ನುತ್ತಾ ಆ ವ್ಯಕ್ತಿ ಪಿಸ್ತೂಲನ್ನು ಜೇಬಿನೊಳಗೆ ತುರುಕಿಸಿ ನಿಧಾನವಾಗಿ ಮಾಯವಾಯಿತು. ತುಸು ಹೊತ್ತಿನಲ್ಲೇ ಆ ಮನೆಯ ದೀಪಗಳು ನಂದಿಸಲ್ಪಟ್ಟವು.

oo oo oo

ಮರುದಿನ ಮುಂಜಾನೆ ಇಪ್ಪತ್ತು ವರುಷದ ತರುಣಿ ಸೋಫಿಯಾ

ಮತ್ತು ಅವಳ ಗಂಡ ನೇಟ್ ಹಾಸಿಗೆ ಬಿಡುವಾಗ ಇಬ್ಬರ ಕಣ್ಣುಗಳಲ್ಲೂ ಸುಖಸ್ಮರಣೆಯು ಚಿಹ್ನೆ ಹೊರತು ಬೇರೇನೂ ಇರಲಿಲ್ಲ. ಬೆಳಗ್ಗಿನ ಫಲಾಹಾರದ ಮೇಜಿನ ಸುತ್ತಲೂ ನೇಟ್, ಸೋಫಿಯಾ, ಸೋಫಿಯಾನ ತಮ್ಮ ನಿಕ್ಕ್ ರೋಮಾಕ್ ಮತ್ತು ಅವರ ತಾಯಿ ಮತ್ತು ತಂದೆ ಮಿಸೆಸ್ ಜೋನ್ ಮತ್ತು ಮಿಸ್ಟರ್ ಜೋನ್ ರೋಮಾಕರು ಕುಳಿತಿದ್ದರು.

ನೇಟ್ ಮತ್ತು ಸೋಫಿಯಾರೆಬ್ಬಿಸುತ್ತಿದ್ದ ಪ್ರೇಮಪೂರ್ಣ ನಗೆಗಳಿಂದ ತಿಂಡಿಗಳ ರುಚಿಯೇರುತ್ತಿತ್ತು.

ನಿಕ್ಕ್ ರೋಮಾಕನು ತನ್ನ ಅಕ್ಕನ ಮುಖವನ್ನೇ ತುಸು ಹೊತ್ತು ನೋಡಿದ. "ಮದುವೆಯಾದ ಮೇಲೆ ನನ್ನ ಅಕ್ಕನ ನಗೆಯೇ ನಗೆ! ಏನಕ್ಕ, ವೈವಾಹಿಕ ಜೀವನವು ನಿನಗೆ ಬಹಳವಾಗಿ ಒಗ್ಗುವಂತೆ ತೋರುತ್ತದೆ!"

ಸೋಫಿಯಾ ಓರೆಗಣ್ಣಿನಿಂದ ಗಂಡನ ಮುಖ ನೋಡಿದಳು. ಅದನ್ನುತ್ತರಿಸತಕ್ಕವನು ಅವನೇ ಅಲ್ಲವೆ?

"ಹುಡುಗಾ! ಓ ಹುಡುಗಾ!"—ತರುಣ ಮದುಮಗ ಹುರುಪುಗೊಂಡು ಹೇಳಿದ: "ಪ್ರೇಮಕ್ಕಿಂತ ಹೆಚ್ಚಿನದಾವುದೂ ಇಲ್ಲ-ಬಲ್ಲೆಯಾ?"

ತಂದೆ-ತಾಯಿಗಳು ತಿಂಡಿ ಬಾಯಲ್ಲಿದ್ದಂತೆಯೇ ನಗೆಯಾಡಿದರು.

"ಹಾಗಲ್ಲ, ಎಂದು ನೀನೇ ಹೇಳುವ ಕಾಲ ಬರಬಹುದು" ಎಂದ ಜೋನ್ ರೋಮಕ್. "ಈಗ ನೋಡು; ನಿನಗೆ ಮದುವೆಯಾಗಿ ಕೆಲವು ತಿಂಗಳುಗಳಾಗಿವೆ ಮಾತ್ರ. ನೀನಿನ್ನೂ ಮದುಮಗ. ನನ್ನಂತೆ ಇಪ್ಪತ್ತೆರಡು ವರುಷಗಳ ವೈವಾಹಿಕ ಜೀವನದ ಅನುಭವ ದೊರೆತ ಮೇಲೂ ಹೀಗೇನೇ ಹೇಳಬಲ್ಲೆಯಾ ನೋಡಿಕೋ!"

ಜೋನ್ ರೋಮಾಕ್ ಹಾಗನ್ನಲು ಕಾರಣವಿತ್ತು. ಅವ ಅಮೇರಿಗದ ಆರ್ಕೇಡಿಯಾ ನಗರದ ರಸ್ತೇ ಬದಿಯೊಂದರಲ್ಲಿ ಮಧ್ಯಮ ತರಗತಿಯ ಜೀವನ ನಡಿಸಿ ಅನುಭವ ಹೊಂದಿದ್ದ ರೈತ. ಸೋಫಿಯಾ ಮತ್ತು ನಿಕ್ ಇಬ್ಬರೇ ಮಕ್ಕಳು. ಸಂಸಾರವನ್ನೊಂದು ಕಾಡುಬನವಾಗಿ ಬೆಳೆಯಲು ಬಿಡುವಂತಹ ಬಡತನವು ಜೋನನದಲ್ಲ; ಹಾಗೆಂದು ಅದನ್ನೊಂದು ನಂದನವನವಾಗಿ ಬೆಳೆಯಿಸುವ ಶ್ರೀಮಂತಿಕೆಯೂ ಅವನಿಗಿರ

ಲಿಲ್ಲ. ಏಕಮಾತ್ರ ಪುತ್ರಿ ಸೋಫಿಯಾಳಿಗೆ ಐದಾರು ತಿಂಗಳ ಮೊದಲೇ ವಿವಾಹವಾಗಿತ್ತು. ನೇಟ್ ಮನೆಯಳಿಯನಾಗಿ ನಿಂತಿದ್ದ. ಆ ಸಂಸಾರವು ಬಟಾಟೆ ಬೇಸಾಯದಿಂದ ಸಾಗುತ್ತಿತ್ತು.

ಫಲಾಹಾರ ಮುಗಿಯಿತು; ಗಂಡಸರು ಮೂವರೂ ಎದ್ದು ನಿಂತರು. ಅವರ ಹೊಟ್ಟೆ ತಣಿದಂತೆಯೇ ಮನಸ್ಸೂ ತಣಿದಿತ್ತು. "ನಿಕ್ಕ್" ತಂದೆ ಕರೆದು ಹೇಳಿದ: "ನೀನು ಇವತ್ತು ತೆಂಕುಗಡೆಯ ಬಟಾಟೆ ತೋಟಕ್ಕೆ ಹೋಗು; ನೇಟ್ ಬಡಗು ತೋಟಕ್ಕೆ ಹೋಗುತ್ತಾನೆ. ಮಧ್ಯಾಹ್ನದ ನಂತರ ಪೇಟೆಗೆ ಹೋಗಲು ಅನುಕೂಲವಾಗುತ್ತದೆ."

ನೇಟ್—ದೀರ್ಘ ದೇಹಿ, ದೃಢಕಾಯದ ತರುಣ, ಹೊಲದ ಕಡೆಗೆ ಸಾಗುತ್ತಿದ್ದ. ಸೋಫಿಯಾ ಇಪ್ಪತ್ತರ ಕೋಮಲೆ, ದಾಂಪತ್ಯದ ಮೊದಲ ಸವಿಯಲ್ಲಿರುವ ಮದುಮಗಳು, ಅವನ ಹ್ಯಾಟಿನ ಮೂಲೆ ಕಾಣುವ ವರೆಗೂ ನಿಂತು ನೋಡುತ್ತಿದ್ದಳು. "ನೆಟ್ಟಗೆ ಬಾಣದ ಹಾಗೆ! ಅಲ್ಲವೇ ಅಮ್ಮಾ" ಎನ್ನುತ್ತಾ ತಾಯಿಯ ಮುಖ ನೋಡಿದಳು.

"ಹೌದು ಮಗೂ. ನೀನು ಭಾಗ್ಯಶಾಲಿ ಸೋಫಿಯಾ. ನೇಟ್ ನಿನಗೆ ಹೇಳಿಸಿದ ಜತೆ!" ಎಂದಳು ಮಾತೆ. ಅವಳ ಹೃದಯವು 'ಧನ್ಯ ಧನ್ಯ' ಎನ್ನುತಿತ್ತು. ಇಬ್ಬರು ಹೆಂಗಸರೂ ತಮ್ಮ ಮನೇಗೆಲಸಕ್ಕೆ ತೊಡಗಿದರು.

o o o

ನೇಟ್ ಉತ್ಸಾಹದಿಂದ ಬಟಾಟೇ ಕ್ಷೇತ್ರದೊಳಗೆ ಕಾಲಿಟ್ಟ. ಹುಲುಸಾಗಿ ಬೆಳೆದ ತೋಟ; ತಂಪಾಗಿ ಬೀಸುತ್ತಿದ್ದ ಗಾಳಿ; ಮತ್ತೆ ನೇಟ್‌ನ ಹೃದಯವಾದರೂ ಆ ಕಾಲದಲ್ಲಿ ಬಂಜರುಕ್ಷೇತ್ರವಲ್ಲ—ಅಲ್ಲಿ ಕಳದ ರಾತ್ರಿಯ ಸುಖಸ್ಮರಣೆ ನಿಂತಿದೆ; ಅದೂ ಹುಲುಸಾಗಿಯೇ ಇದೆ! ಅವನು ಎತ್ತರಕ್ಕೆ ಬೆಳೆದ ಗಿಡಗಳನ್ನು ಹಾದು ಮುಂದೊತ್ತಿದ. ನೇಟಿನ ಹಿಂಬದಿಯಲ್ಲಿ 'ದರಬರ' ಸದ್ದಾದಂತಾಯಿತು. ಆ ತೋಟದಲ್ಲಿ ಗಾಳಿಯು ಮನ ಸೇಚ್ಛೆ ಆಟ ನಡಿಸಬಹುದಷ್ಟೆ ಎಂದುಕೊಂಡ ನೇಟ್. ಆದರೆ ಅವನು ಹಾದುಬಂದ ಗಿಡಗಳನ್ನು ಭೇದಿಸಿಕೊಂಡೇ ಎರಡು ಭುಜ, ಒಂದು ತಲೆ ಮುಂದೆ ಬರುತ್ತಿತ್ತು. ಇದ್ದಕ್ಕಿದ್ದಂತೆ ನೇಟ್‌ನ ಹಿಂಗಡೆಯಿಂದ 'ಢಂ'

ಪಿಸ್ತೂಲು ಹಾರಿತು! ಭುಜಕ್ಕೆ ಬಂದು ಬಿದ್ದ ಗುಂಡಿನೇಟಿನಿಂದ ನೇಟ್ ದಬಕ್ಕನೆ ಹಾರಿದ. ಸರ್ವಶಕ್ತಿಯಿಂದ ತಿರುಗಿ ಬಿದ್ದು, ಗುಂಡು ಬಂದ ದಿಕ್ಕಿಗೆ ನೋಡಿದ. ಗುಂಡು ಹೊಡೆದ ವ್ಯಕ್ತಿಯ ಮುಖ ನೋಡಿದಾಗ ನೇಟ್‌ನ ವದನದಲ್ಲಿ ಮೂಡಿದ್ದ ಆಶ್ಚರ್ಯ ಮತ್ತು ಮರುಕದ ಚಿಹ್ನೆಯು ಆ ಮುಖ ಮಣ್ಣುಗೂಡುವ ವರೆಗೂ ಮಾಸಿರಲಿಲ್ಲ! ಅವನ ಅಂತಿಮ ನೋಟದಲ್ಲಿ ಪ್ರಾಣಭಯ ಮಾತ್ರವಲ್ಲ—ಒಂದು ಕರುಳುವೇದನೆಯೂ ನಿಂತಿತ್ತು!

ಆ ಭಾವನೆಯೊಡನೆ ಅವನು ಹೇಗೋ ಮಾಡಿ ಕೆಲವು ಹೆಜ್ಜೆ ಮುಂದಿಟ್ಟ. ಢಂ ಢಂ ಢಂ—ಮೇಲಿಂದ ಮೇಲೆ ಪಿಸ್ತೂಲು ಹಾರಿತು. ಆ ಮದುಮಗ ವೈರಕ್ತದೋಕುಳಿಯಾಡುತ್ತಾ ನೆಲಕ್ಕೆ ಬಿದ್ದ.

ಕೊಲೆಗಾರನೀಗ ಪಿಸ್ತೂಲನ್ನು ಬಿಟ್ಟು ಹೆಣದ ಕೈಹಿಡಿದ; ಅದನ್ನು ಸತ್ತ ನಾಯಿ ಮರಿಯನ್ನೆಳೆಯುವಂತೆ ಎಳೆಯುತ್ತಾ—ಹೊರಗೆ ತೋರದಂತೆ ಎತ್ತರ ಗಿಡಗಳ ಮರೆಯಲ್ಲೇ ಸಾಗುತ್ತಾ—ಹತ್ತಿರದ ಕಾಡಿಗೆ ತಂದ. ಇಲ್ಲಿ ಅವನಿಗಾರ ಭಯವೂ ಇಲ್ಲ. ಸ್ವತಃ ಕೊಲೆಗಡುಕ ಭೀಕರತೆಯನ್ನಾಂತಿರುವ ಆ ದಟ್ಟಾರಣ್ಯವು ಅವನ ಸಹಪಾಠಿ. ಅಲ್ಲಿ ಜನ ಸುಳಿದಾಟವಿಲ್ಲ. ಕೊಲೆಗಡುಕನು ಸಿದ್ಧನಾಗಿಯೇ ಬಂದಿದ್ದುದರಿಂದ ಕೆಲವೇ ಮಿನಿಟುಗಳಲ್ಲಿ ಅಲ್ಲಿಯೊಂದು ಹೊಂಡ ತಯಾರಾಯಿತು; ಅದರಲ್ಲಿ ಹೆಣವು ಮುಚ್ಚಲ್ಪಟ್ಟು ಮೇಲ್ಗಡೆಗೆ ಮಣ್ಣು ಮತ್ತು ಗೆಲ್ಲು ಸೊಪ್ಪು ಸದೆಗಳ ಆಚ್ಛಾದನವೂ ಆಯಿತು. ಆ ಮೇಲೆ ಹಿಂದಿರುಗಿ ನೋಡದೆ ಕೊಲೆಗಾರ ವ್ಯಕ್ತಿ ಆ ದಟ್ಟಾರಣ್ಯದಲ್ಲಿ ಮಾಯವಾಯಿತು.

o o o

ಜೋನ್ ರೋಮುಕ್, ಮಿಸೆಸ್ ರೋಮುಕ್, ನಿಕ್, ಸೋಫಿಯಾ ಮಧ್ಯಾಹ್ನದೂಟಕ್ಕೆಂದು ಕುಳಿತಿದ್ದಾರೆ ಮಾತ್ರ. ಸೋಫಿಯಾ ಬಡಗು ದಿಕ್ಕನ್ನೇ ನೋಡುತಿದ್ದವಳು "ಅವನೇನು ಬರಲಿಲ್ಲ?" ಎಂದಳು. "ಅವನೀ ಹೊತ್ತಿನಲ್ಲಿ ಬಹಳ ಹಸಿದಿರಬೇಕು; ಇನ್ನೂ ಬರಲಿಲ್ಲವೇನು?" —ಪುನಃ ಆಕೆಯ ಪ್ರಶ್ನೆ.

ತಂದೆಯು ಆತುರಗೊಂಡು ಪತ್ನಿಯ ಮುಖ ನೋಡಿದ "ಹೌದು,

ನೀನು ಹೋಗಿ ಬಾ ಜೋನ್. ಅವನೇನಾದರೂ ತೊಂದರೆಗೊಳಗಾಗಿರಬೇಕು. ಗುದ್ದಲಿ ತಾಗಿತೋ ಏನೋ"—ಎಂದಳು ಲೇಡಿ ಜೋನ್. "ಏನಾದರೂ ಆಗಿರಲೇ ಬೇಕು" ನಿಕ್ಕ್ ಕೂಡಾ ಹೇಳಿದ.

ತಂದೆ ಮತ್ತು ಮಗ ಊಟದ ತಟ್ಟೆಯನ್ನು ಮುಟ್ಟದೇನೇ ಎದ್ದರು. ಬಟಾಟೆ ತೋಟದ ಕಡೆಗೆ ಧಾವಿಸಿದರು. ತೋಟದಲ್ಲೆಲ್ಲಾ ಶೋಧಿಸಿದರೂ ನೇಟ್‌ನ ಪತ್ತೆಯಿಲ್ಲ. ಅಪರಾಹ್ನ 2ಘಂಟೆಯ ನಂತರವೂ ನೇಟ್ ಬಾರದ್ದರಿಂದ ಇನ್ನವರಿಗೆ ಸಹಿಸಲಾಗಲಿಲ್ಲ.

ಜೋನ್ ಅಮೇರಿಕದ ಪತ್ತೇದಾರಿ ಕಾರ್ಯಾಲಯಕ್ಕೆ ಫೋನ್ ಮಾಡಿದ: "ನನ್ನ ಅಳಿಯ ಕಾಣೆಯಾಗಿದ್ದಾನೆ."

ಒಂದು ಘಂಟೆಯೊಳಗೆ ಸಾರ್ಜೆಂಟ್ ಹೆರ್ರಿ ಜೆ. ಸೇಂಡರ್ಸನ್, ಸಾರ್ಜೆಂಟ್ ವಿಲಿಯಮ್ ಎಮ್. ಸ್ಟೆವೆನ್ಸನ್, ಮತ್ತು ಸೋಮರ್, ದಡ್ಡಿನ್, ಡೊನೊವನ್, ಫೋಗರ್ಟ್, ಜೋಸೆಫ್ ಸ್ಟೀಲೆ–ಇಷ್ಟು ಮಂದಿ ಆಫೀಸರರು ಜೋನನ ಮನೆ ಹೊಕ್ಕರು.

ಸೋಫಿಯಾ ಅಪಸ್ಮಾರ ಬಡಿದಂತಾಗಿದ್ದಳು. "ಅವ ಸತ್ತನೇನೋ! ಅಯ್ಯೋ! ನಾನು ಬಲ್ಲೆ, ಅವ ಸತ್ತೇ ಹೋಗಿರಬೇಕು!" ಎಂದು ಅಳುತ್ತಿದ್ದಳು.

ಬಂದ ಅಧಿಕಾರಿಗಳು ಜೋನ್ ಮತ್ತು ನಿಕ್ಕ್‌ನನ್ನು ಒಳಗೆ ಕರೆದರು. ಅಡುಗೇ ಕೋಣೆಯಲ್ಲಿ ಕಿವಿಮಾತುಗಳು ನಡೆದವು. "ಅವ ಈ ದಿನ ಮುಂಜಾನೆ ಆರು ಘಂಟೆಗೆ ತೋಟಕ್ಕೆ ಹೋಗಿದ್ದ. ಅಷ್ಟೇ ಗೊತ್ತು!"

ಪತ್ತೇದಾರರ ನಾಯಕ ಸಾರ್ಜೆಂಟ್ ಸೇಂಡರ್ಸನ್ ತನ್ನ ಜನರಿಗಾಜ್ಞೆಯಿತ್ತ: "ಆ ತೋಟದ ಮತ್ತು ಆಸುಪಾಸಿನ ಸ್ಥಳವನ್ನೆಲ್ಲಾ ಶೋಧಿಸಿ ಬನ್ನಿ."

ಹುಡುಕಾಟ ನಡೆಯಿತು. ಜೋನ್ ತಂದೆ—ಮಗ ಹುಡುಕಿದ್ದ ಸ್ಥಳದಲ್ಲೇ ಇವರೂ ಶೋಧಿಸಿದುದು. ಆದರೆ ಕಣ್ಣಿಗೆ ಕಾಣದುದು ಕನ್ನಡಕಕ್ಕೆ ಕಾಣುತ್ತದೆಂಬ ಗಾದೆಯುಂಟಷ್ಟೆ?

"ನಿಲ್ಲಿ; ಓ, ಇಲ್ಲಿ ಬನ್ನಿ. ನನಗೆ ಈ ಕಡೆಯಲ್ಲೇನೋ ದೊರೆತಂತೆ

ಕಾಣುತ್ತದೆ"–ಗುಪ್ತಚಾರ ಸೋಮರ್ ವಿಕ್ಕವರನ್ನು ಕರೆದ. ಅವನ ಕೈಯು ಆಗತಾನೇ ಹಸನಾದಂತಿದ್ದ ಒಂದು ನೆಲಭಾಗವನ್ನು ತೋರಿಸುತ್ತಿತ್ತು. "ಇತ್ತೀಚೆಗೆ ಈ ಸ್ಥಳದಲ್ಲೇನನ್ನೋ ಹುಗಿದಂತಿದೆ

ನೇಟ್‌ನ ಮಾವ ಮತ್ತು ಭಾವನಿಗೆ ತೋಟಕ್ಕೆ ಕರೆಬಂತು. ಸಾರ್ಜೆಂಟನೂ ಅತ್ತ ಧಾವಿಸಿದ. "ನೀವೀ ಸ್ಥಳವನ್ನು ಇತ್ತೀಚೆಗೆ ಅಗೆದದ್ದಿದೆಯೇ?"—ಸೋಮರ್ ಅವರನ್ನು ಪ್ರಶ್ನಿಸಿದ.

"ಇಲ್ಲ."

"ಅಗೆಯಿರಿ ಆ ಸ್ಥಳವನ್ನು"—ಸಾರ್ಜೆಂಟ್ ಸೇಂಡರ್ಸನ್ ಆಜ್ಞೆಯಿತ್ತ.

ಸ್ವತಃ ಪತ್ತೇದಾರಿಗಳೇ ಹಾರೆ ಗುದ್ದಲಿ ತರಿಸಿ ಅಗೆಯಹತ್ತಿದರು. ಆ ಮೃದು ನೆಲವು ಬ್ರಿಟಿಷ್ ಸೇನೆಯಂತೆ ಹಾದಿ ಬಿಟ್ಟುಕೊಡುತ್ತಿತ್ತು! ಕೆಲವು ಮಿನಿಟುಗಳಲ್ಲಿ ಕೈಸೋತ ಆಯಾಸ ಪರಿಹಾರಕ್ಕಾಗಿ ನಿಂತವನೊಬ್ಬ ಹೇಳಿದ: "ಇಲ್ಲಿ ಏನೋ ಐಂದ್ರಜಾಲವಿರಲೇ ಬೇಕು ನೋಡಿ-ಈ ಅಡೀಮಣ್ಣಿನ ಹುಲ್ಲು ಕೂಡಾ ಹಸಿಯಾಗಿಯೇ ಇದೆ!"

"ಕೆಲಸ ಸಾಗಲಿ!" ಸಾರ್ಜೆಂಟನ ಅನುಜ್ಞೆಯಾಯಿತು. ಗಜಗಜಕ್ಕೆಂದು ಪುನಃ ಗುದ್ದಲಿಗಳಾಟ.

'ನನ್ನದಕ್ಕೇನೋ ಕಟಕ್ಕನೆ ತಾಗಿದಂತಾಯಿತು. ಒಳಗಾವುದೇ ಇರಲಿ, ನನ್ನ ಗುದ್ದಲಿಯನ್ನು ಸ್ಪರ್ಶಿಸಿಯಾಯಿತು!"—ಎಂದನೊಬ್ಬ.

ಅವರೆಲ್ಲರೂ ಜಾಗ್ರತೆಯಿಂದ ಕುಳಿಯ ಕೆಸರು ಮಣ್ಣನ್ನೆಲ್ಲಾ ಎತ್ತಿ ಹಾಕಿದರು. ಮಣ್ಣನ್ನು ತೆಗೆಯುತ್ತಾ ಬಂದಂತೆ, ತಲೆ, ಭುಜ, ಕೊನೆಗೆ ಅಂಗಾತ ಮಲಗಿದ್ದ ಇಡೀ ದೇಹ ಕಾಣಿಸಿತು.

ಪಿಟ್ಟೆಂಬ ಶಬ್ದವಿಲ್ಲದೆ ಪತ್ತೇದಾರರು ಅದನ್ನೆತ್ತಿ ಬರೀ ನೆಲದಲ್ಲಿ ಮಲಗಿಸಿದರು.

"ಓ ದೇವಾ! ಅದು ನಮ್ಮ ನೇಟ್!" ಸಿಡಿಲು ಬಡಿದಂತಾದ ಜೋನ್ ಮತ್ತು ನಿಕ್ ಕಿರಿಚಿಕೊಂಡರು

ಪತ್ತೇದಾರರು ಲಕ್ಷ್ಯ ಪೂರ್ವಕವಾಗಿ ಹೆಣದ ಮೈಮೇಲಿನ ವಸ್ತ್ರ

ವನ್ನೆಲ್ಲಾ ಶೋಧಿಸಿದರು. ಆ ಮೇಲೆ ಹೆಣವನ್ನು ಠಾಣ್ಯಕ್ಕೆ ಸಾಗಿಸಲಾಯಿತು.

ಆಫೀಸರರು ಮರಳಿ ರೋಮಾಕ್ ಗೃಹಕ್ಕೆ ಬಂದು ಮನೆಯವರನ್ನು ಪ್ರಶ್ನಿಸುತ್ತಿದ್ದರು. ಹೊರಗಡೆ ಕಾರು ಬಂದು ನಿಂತ ಸದ್ದಾಯಿತು. ಒಬ್ಬ ಪತ್ತೇದಾರನು ಬಾಗಿಲ ಬಳಿ ಬಂದ. "ನೇಟ್‌ನ ತಮ್ಮ ಮತ್ತು ತಾಯಿ ಬಂದರು"—ನೋಡಿ ಬಂದು ನಿಕ್ಕ್ ಹೇಳಿದ.

ಮೃತನ ತಾಯಿ, ಸಹೋದರನು ಒಳಗಿರುವ ಆಫೀಸರರನ್ನು ಕಂಡು ದಂಗುಬಡೆದರು. ಅವರ ನೋಟದಲ್ಲಿ "ಇದೇನು?" ಎಂಬ ಪ್ರಶ್ನೆಯಿತ್ತು. ಆಫೀಸರರ ಮುಖಛಾಯೆ ಮತ್ತು ಅರೆಜೀವವಾಗಿದ್ದ ಸೋಫಿಯಾಳನ್ನು ಕಂಡಾಗ ಅವರಿಗೆಲ್ಲಾ ಸಂಗತಿ ಹೊಳೆದುಹೋಯಿತು!

"ಓ ನನ್ನ ಮಗೂ! ಅಯ್ಯಯ್ಯೋ, ನನ್ನ ಮಗುವೆಲ್ಲಿ!' ತಾಯಿ ಅಳಲಾರಂಭಿಸಿದಳು. ಜೋನ್ ಮತ್ತು ನಿಕ್ಕ್ ರೋಮಾಕರು ಆಕೆಯನ್ನು ಸಂತೈಸಿದರು.

"ನನ್ನ ಅಣ್ಣನಿಗಾದುದೇನು?"—ನೇಟ್‌ನ ಸಹೋದರ ಕಂಪಿತ ಸ್ವರದಿಂದ ಕೇಳಿದ.

"ಅವನನ್ನು ಗುಂಡು ಹೊಡೆದು ಕೊಂದರು. ಇವರು ಕೊಲೆಗಾರರ ಪತ್ತೆಹಚ್ಚುವ ಪ್ರಯತ್ನದಲ್ಲಿದ್ದಾರೆ"—ಆಫೀಸರರನ್ನು ತೋರಿಸುತ್ತಾ ನಿಕ್ಕ್ ಹೇಳಿದ

"ಶ್ರೀಮತಿ ಕೊಸ್ಲೋವ್‌ಸ್ಕಿ! ನಿಮ್ಮ ಮಗನಿಗಾರಾದರೂ ವೈರಿಗಳಿದ್ದರೆ?" ಒಬ್ಬ ಆಫೀಸರನ ಪ್ರಶ್ನೆ. ಮಾತೆಯ ಕಣ್ಣುಗಳು ತುಂಬಿಬಂದುವು; ಎದೆಯ ಏರಿಳಿತ ತೋರಿಬರುತ್ತಿತ್ತು; ತುಟಿಗಳ ನಡುಕದಿಂದ ಆಕೆಗೆ ಮಾತಾಡಲಾಗಲಿಲ್ಲ ಮಾತೆಯ ಪರವಾಗಿ ಮಗ ಉತ್ತರ ಕೊಟ್ಟ. "ಯಾರೂ ಇರಲಿಲ್ಲ". ಎಂದವನೇ ತನ್ನ ಅತ್ತಿಗೆಯ ಕಡೆಗೊಮ್ಮೆ ತೀಕ್ಷ್ಣ ನೋಟ ಬೀರಿ "ಯಾರೂ ಇಲ್ಲ. ಅವನ ಮೇಲೆ ಮತ್ಸರಪಡುವ ಪ್ರತಿಸ್ಪರ್ಧಿಗಳಿರಬಹುದು ಹೊರತು ಬೇರೆ ವೈರಿಗಳಿಲ್ಲ!"

ತಲೆಯಡಿಗಿಟ್ಟು ಕುಳಿತಿದ್ದ ಸೋಫಿಯಾ ಗಲ್ಲದಿಂದ ಕೈತೆಗೆದಳು ಅವಳ ಕಣ್ಣುಗಳು ಝಳಕಗೊಂಡು ಮೈದುನನ ಕಡೆಗೊಮ್ಮೆ ಹೊರ

ಳಿದವು. "ನಾನು ನಿನ್ನ ಸ್ಥಾನದಲ್ಲಿರುತ್ತಿದ್ದರೆ ನಿನ್ನಂತೆ ಪ್ರತಿಸ್ಪರ್ಧಿಗಳ ಪ್ರಸ್ತಾಪವೆತ್ತುತ್ತಿರಲಿಲ್ಲ." ಇದೊಂದು ವಾಗ್ಬಾಣವನ್ನು ಹೊಡೆದ ಪ್ರಯಾಸದಿಂದ ಆಕೆಯ ಅಳು ಉಕ್ಕಿ ಬಂತು.

ಆಫೀಸರರು ಮೌನವಾಗಿ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಅಲ್ಲಿಂದ ಹೊರಬಿದ್ದರು.

o o o

ಪತ್ತೇದಾರರ ಮೇಜು, ಪತ್ರಿಕಾ ಮೆನೇಜರನ ಮೇಜಿನಂತಾಗಿದೆ. ಅಲ್ಲಿ ಹೆಸರು, ವಿಳಾಸಗಳ ಪಟ್ಟಿಯಿದೆ ಸೋಫಿಯಾ ಅವಿವಾಹಿತೆಯಾಗಿರುವಾಗ ಅವಳೊಡನೆ ಸ್ನೇಹಾಚಾರದಿಂದಿದ್ದ ಎಲ್ಲರ ಹೆಸರೂ ಅದರಲ್ಲಿದೆ. ಎಲ್ಲರ ಮೇಲೂ ಗುಪ್ತಚಾರರ ದೃಷ್ಟಿಬಿತ್ತು; ಪತ್ತೇದಾರರು ಅತ್ಯಂತ ಚಾತುರ್ಯದಿಂದ ಕ್ರಮಪ್ರಕಾರ ಪ್ರತಿಯೊಬ್ಬನ ಮೂಲವನ್ನೂ ಶೋಧಿಸಹತ್ತಿದರು. ಪ್ರಥಮತಃ ಬ್ರೆನ್ ಎಂಬವನ ಪರಿಚಯವನ್ನೆಲ್ಲಾ ಕೇಳಿ ನೇಟ್‌ನ ಕೊಲೆಯ ವಾರ್ತೆ ತಿಳಿಸಿದಾಗ ಆ ಬಾಯಿಬಡುಕ ಕಣ್ಣು ಬಾಯಿ ಬಿಟ್ಟ. "ಅಯ್ಯೋ! ನಾನು ಸೋಫಿಯಾಳನ್ನು ಬಲ್ಲೆ; ಆಕೆಯ ಕುಟುಂಬದ ಪರಿಚಯವೂ ಇದೆ. ಆದರೆ ನೇಟ್ ಸತ್ತನೆ? ಆ!".... ಎಂದುಬಿಟ್ಟ ಈ ಮನುಷ್ಯನನ್ನು ಮಾತಾಡಿಸಿದರೆ ನಗಾರಿ ಮೇಲೆ ಕೈಯಾಡಿಸಿದಷ್ಟೇ ಫಲ ದೊರೆತೀತೆಂದು ಪತ್ತೇದಾರಿಗಳು ಕೂಡಲೇ, ತಿಳಿದು, ಹೊರಡುವದರಲ್ಲಿದ್ದರು. "ನಿಲ್ಲಿ, ನಿನ್ನೆ ರಾತ್ರಿ ನಾವು ಕಾರಿನಲ್ಲಿ ಜೋನ್ ರೋಮಾಕನ ಮನೇ ಹಾದಿಯಾಗಿ ಬರುತ್ತಿದ್ದಾಗ ಒಬ್ಬ ಮನುಷ್ಯ ಕುಡಿದು ರಸ್ತೆಯಲ್ಲಿ ಬಿದ್ದುಕೊಂಡಿದ್ದ. ಅವ "ಸೋಫಿಯಾ, ಸೋಫಿಯಾ!" ಎಂದು ನರಳುತ್ತಿದ್ದ. ನಾವವನನ್ನು ಕಾರಿಗೆತ್ತಿ ಹಾಕಿ ಅವನ ಮನೆ ಹಿಡಿಸಿದ್ದೇವೆ. ಬೇಕಾದರೆ ಅವನ ಮನೆ ತೋರಿಸಬಲ್ಲೆ"— ಎಂದ ಬ್ರೆನ್. ಆ ಕುಡಿಕ ಮನುಷ್ಯನ ಮನೆಗೆ ಹೋಗಿ ವಿಚಾರಿಸುವಾಗ ಆ ರಾತ್ರಿ ನಡೆದ ಸಂಗತಿಯೆಲ್ಲಾ ನಿಜ. ಸೋಫಿಯಾ ಅವಿವಾಹಿತೆಯಾಗಿದ್ದಾಗ ಆ ಮನುಷ್ಯ ಅವಳೊಡನೆ ನರ್ತನಮಾಡಿದ್ದ; ಕುಡಿದು ಕೆರಳಿದ ತಲೆಯಲ್ಲಿ ಆ ಸುಖಸ್ಮರಣೆ ಬಂತು—ಅವ ಸೋಫಿಯಾಳನ್ನು ಕನವರಿಸಿದ ಹೊರತು ಬೇರಾವುದೂ ಆ ಪಾಪದವನಿಗರಿಯದು.

ಪತ್ತೇದಾರರು ದೊಡ್ಡ ಸಮಸ್ಯೆಯಲ್ಲಿ ಬಿದ್ದರು. ದಿನಗಳು ಕಳೆದವು. ಒಂದು ದಿನ ಪತ್ತೇದಾರರ ಕಾರ್ಯಾಲಯಕ್ಕೊಂದು ಚೀಟಿ ಬಂತು:—"ದಯವಿಟ್ಟು ನಿಮ್ಮ ಪೈಕಿ ಯಾರಾದರೂ ಇತ್ತ ಬರೋಣಾಗಲಿ. ನನಗೊಂದು ಪ್ರಾಮುಖ್ಯ ವಾರ್ತೆ ದೊರೆತಿದೆ—ನಿಮ್ಮವನಾದ ಜೋನ್ ಕೊಸ್ಲೋವ್‌ಸ್ಕಿ".

ಕಾಗದ ಮೃತ ನೇಟ್‌ನ ತಮ್ಮ ಜೋನನದು. ಕೂಡಲೇ ಪತ್ತೇದಾರಿಗಳು ಅತ್ತ ಧಾವಿಸಿದರು. ಬಾಗಿಲಲ್ಲಿ ನಿಂತಿದ್ದ ಜೋನ್, ಅವರು ಪ್ರಶ್ನಿಸುವ ಮೊದಲೇ "ಇಲ್ಲಿ ನೋಡಿ, ಇದು ನನಗೆ ಸಿಕ್ಕಿತು" ಎನ್ನುತ್ತಾ ಒಂದು ಬಿಳಿಯ ಕಾಗದದ ತುಂಡನ್ನು ಆಫೀಸರರ ಮುಂದೆ ಹಿಡಿದ; ಅದರಲ್ಲಿತ್ತು —'ಈ ಕೆಳಗೆ ವಿವರಿಸಿರುವ ಕಾರಿನ ಬಾಬ್ತು ನಿಕ್ ರೋಮಾಕನಿಂದ ಈ ದಿನ ಬಂದ ಪೌಂಡು 100......' ರಶೀದಿಯು ಕೆಳಭಾಗದಲ್ಲಿ ಸ್ಪಷ್ಟಾಕ್ಷರಗಳಲ್ಲಿ ಮೃತ ನೇಟ್‌ನ ಸಹಿಯಿತ್ತು, ಪತ್ತೇದಾರನೊಬ್ಬನು ಜಿಗುಪ್ಸೆಗೊಂಡವನಂತೆ ಜೋನನನ್ನೇ ನೋಡುತ್ತಾ ಹೇಳಿದ: "ಇದಕ್ಕಿಷ್ಟು ಗೊಂದಲವೇಕೆ? ನೇಟ್ ನಿಕ್ಕ್‌ಗೆ ಕೊಟ್ಟ ರಶೀದಿಯಿಂದ ನಮಗೇನು ದೊರೆಯಿತು?"

"ಏನೂ ಇಲ್ಲ. ಆದರೆ ಆ ಹಣವೆಲ್ಲಿದೆ?" ಜೋನ್ ಪ್ರಶ್ನಿಸಿದ.

○○ ○○ ○○

ವಿಧವೆ ಸೋಫಿಯಾಳಿಗೆ ಪುನಃ ಪತ್ತೇದಾರಿಗಳು ತಮಲ್ಲಿಗೆ ಬಂದುದನ್ನು ನೋಡಿ ಆಶ್ಚರ್ಯವಾಯಿತು. ಅವರು ಅವಳ ಗಂಡನ ಬರೆಹನಿಶಿ ರಶೀದಿಯನ್ನು ತೋರಿಸಿ "ನೇಟ್ ತನ್ನ ಕಾರನ್ನು ಮಾರಿದುದನ್ನು ನೀನು ಬಲ್ಲೆಯಾ?" ಎಂದಾಗ ಅವಳಿಗೆ ಮತ್ತಷ್ಟು ಕೌತುಕವೆನ್ನಿಸಿತು. ರಶೀದಿಯನ್ನು ನೋಡುತ್ತಾ ಅವಳೆಂದಳು:—"ಇದರಲ್ಲೇನು ಸತ್ಯವಿರುವಂತೆ ತೋರುವುದಿಲ್ಲ. ಅದರ ತಾರೀಕನ್ನು ನೋಡಿರಿ ಅವ ಕೊಲೆಯಾದ ಮುಂಚಿನ ದಿನದ ತಾರೀಕಿದೆ. ಇದು ಸತ್ಯವಾಗಿದ್ದರೆ ಅವ ನನ್ನೊಡನೆ ಹೇಳದಿರಲು ಕಾರಣವೇ ಇಲ್ಲ".

"ಅದು ಹಾಗಿರಲಿ, ನಿನ್ನ ತಮ್ಮನೆಲ್ಲಿದ್ದಾನೆ?"

"ಅವ ಮನೆಯೊಳಗಿದ್ದಾನೆ" ಎನ್ನುತ್ತಲೇ ಸೋಫಿಯಾ ಆತುರ

ಗೊಂಡಳು. ಅವಳು ಏನನ್ನೋ ಪ್ರಾರ್ಥಿಸಿಕೊಳ್ಳುವವಳಂತೆ ಆಫೀಸರರ ಮುಖವನ್ನೇ ನೋಡಿದಳು.

"ಅವನನ್ಯಾಕೆ ಕೇಳಿದಿರಿ? ನೀವು ಅವನ ವಿಷಯವಾಗಿ........"

ಅಷ್ಟರಲ್ಲಿಯೇ ಬಾಗಿಲನ್ನು ದೂಡಿ ಒಳಹೋಗುತ್ತಿದ್ದ ಪತ್ತೇದಾರರು "ಇಲ್ಲ, ಇಲ್ಲ. ನಾವು ಅವನನ್ನು ಕಂಡು ಎರಡು ಮಾತಾಡಲಿಕ್ಕಿದ್ದೇವೆ ಮಾತ್ರ"—ಆ ವಾಕ್ಯದ ಕೊನೆಯ ಶಬ್ದ ಮನೆಯೊಳಗಿಂದ ಬಂತು. ಅವರು ನಿಕ್ಕ್‌ನ ಕೋಣೆಯೊಳಗೆ ಹೊಕ್ಕಾಗ ನಿಕ್ಕ್ ಅಲ್ಲಿರಲಿಲ್ಲ. ಪತ್ತೇದಾರನೊಬ್ಬನು ಕಿಟಕಿಯಿಂದ ಹೊರಗಿಣುಕುತ್ತಾನೆ—ದೂರದ ತೋಟದಲ್ಲಿ ದಮ್ಮುಕಟ್ಟಿ ಓಡುತ್ತಿರುವ ಮನುಷ್ಯ ರೂಪವೊಂದು ಕಿರಿದಾಗಿ ತೋರಿಬಂತು. ಒಬ್ಬ ಪತ್ತೇದಾರನು ಮನೆಯಿಂದ ಹೊರಬಿದ್ದು ಅವನ ಬೆನ್ನಟ್ಟಿ ಮರಳಿಬಂದು ಉಬ್ಬಸ ಬಿಡುತ್ತಾ ಹೇಳಿದ—"ಅವ ಕಾಡಿನೊಳ ಹೊಕ್ಕು ಪರಾರಿಯಾಗಿ ಬಿಟ್ಟ".

ಅಷ್ಟರೊಳಗೆ ಉಳಿದ ಪತ್ತೇದಾರಿಗಳು ನಿಕ್ಕ್‌ನ ಕೋಣೆಯನ್ನೆಲ್ಲಾ ಶೋಧಿಸಿದ್ದರು. ಒಂದು ಹಳೇ ಚಲ್ಲಾಣದಲ್ಲಿ ಏಳು ಗುಂಡಿನ ರಿವೋಲ್ವರೊಂದಿತ್ತು. ಒಂದು ಸೆಲ್ಫಿನ ಮೇಲ್ಗಡೆಯಲ್ಲಿ ಮತ್ತೊಂದು ಹಳೇ ರಿವೋಲ್ವರ್! ಪೆಟ್ಟಿಗೆಯೊಳಗೆ ಹಳೇ ವಯೊಲಿನ್—ಅದಕ್ಕೆ ಬಂಗಾರದ ಕಟ್ಟುಗಳು. ಅದನ್ನೇ ನೋಡುತ್ತಿದ್ದ ಒಬ್ಬ ಆಫೀಸರ್ ಇನ್ನೊಬ್ಬನ ಭುಜತಟ್ಟಿ ಎಚ್ಚರಿಸಿದ: "ಹೇ, ಇಲ್ಲಿ ನೋಡು. ಈ ವಯೊಲಿನಿನ ಲೇಬಲನ್ನು ನೋಡಿದೆಯಾ? 'ಜೋಸೆಫ್, ಗ್ವಾರ್ನೆರಸ್, ಕ್ರೆಮೊನಾಯೀ ಎನ್ನೋ 1735' ಎಂದಿದೆ!"

"ಹೋ ಹೌದು. ಇದಾವ ವಯೊಲಿನ್ ಗೊತ್ತೆ? ಕಳದ ವರುಷ ಫ್ರಾನ್ಸ್‌ವರ್ದಿನ ಬಳಿ ನಡೆದ ದರೋಡೆಯ ನೆನಪಿದೆಯಷ್ಟೆ?"– ಎಂದು ಮತ್ತೊಬ್ಬ ಗುರುತು ಹಚ್ಚಿದ

"ನಿಜ. ಅಲ್ಲಿ ಕಳವಾದ ಹೆಸರು ಹೋದ ವಯೊಲಿನ್ ಇದೇ!"

ಕೆಲವೇ ಮಿನಿಟುಗಳೊಳಗೆ ನಿಕ್ಕ್ ರೋಮಾಕನ ರೂಪರೇಖೆಯನ್ನು ತಿಳಿಸಿ, ಆ ಆಸಾಮಿಯನು ದೊರೆತೊಡನೆ ದಸ್ತಗಿರಿ ಮಾಡಬೇಕೆಂಬ

ಸೂಚನೆ ದೇಶದ ಮೂಲೆಮೂಲೆಗೂ ಹೋಯಿತು. ರೋಮಾಕ್ ಗೃಹದಲ್ಲೂ ರಸ್ತೆಗಳಲ್ಲೂ ಪೋಲೀಸು ಕಾವಲುಬಿತ್ತು.

o o o o

ವಿಲಿಯಮ್‌ಸನ್-ನ್ಯೂಯೋರ್ಕ್ ರಸ್ತೇಬದಿಯಲ್ಲಿ ಜನದಟ್ಟಣಿಯಿರದ ಒಂದು ಸ್ಥಳ. ರಾತ್ರಿ. ಅಲ್ಲಿಯ ಹೊಟಿಲೊಂದರಲ್ಲಿ ವಿದ್ಯುದ್ದೀಪಗಳು ಪ್ರಕಾಶಿಸುತ್ತಿದ್ದವು. ಒಂದು ಮೂಲೆಯ ಮೇಜಿನ ಮುಂದೆ ಕೆದರಿದ ಕೂದಲಿನ ಯುವಕನೊಬ್ಬ ಕುಳಿತಿದ್ದ. ಅವನ ಮುಖ ತುಂಬ ನುಸಿ ಕಡಿತದ ಚಿಹ್ನೆಗಳಿವೆ. ಸಾರ್ಜೆಂಟ್ ಸೆಂಡರ್ಸನ್ ಕೆಲಮಂದಿ ಪತ್ತೇದಾರರೊಂದಿಗೆ ಒಮ್ಮೆಗೇ ಒಳನುಗ್ಗಿದಾಗ ಆ ಯುವಕನೇನೂ ದಿಗಿಲು ಸೂಚಿಸಲಿಲ್ಲ

"ನಿಕ್ ರೋಮಾಕ್! ನೀನೀಗ ಸಿಕ್ಕಿಬಿದ್ದಿ."

ನಿರುತ್ತರ.

"ಫ್ರಾನ್ಸ್‌ವರ್ದ್ ದರೋಡೆಯ ವಯೊಲಿನ್ ನಿನ್ನ ಕೋಣೆಯಲ್ಲಿ ಸಿಕ್ಕಿತು. ನಿನ್ನನ್ನು ದಸ್ತಗಿರಿಮಾಡಲಾಗಿದೆ!"

ಯುವಕನಿಗೆ 'ಅಯ್ಯಬ್ಬ' ಎಂದಂತಾಗಿ ಅವ ಸಮಾಧಾನದ ಉಸಿರೊಂದನ್ನು ಬಿಟ್ಟ.

"ನೀನು ಅದನ್ನು ಯಾಕಾಗಿ ಕಳವುಮಾಡಿದೆ?"

"ಆಟಕ್ಕಾಗಿ!"-ಯುವಕನ ಉತ್ತರ.

"ಆಟ? ಕೊಲೆಯೂ ಒಂದು ಆಟವೆ?!"

ಈಗ ಯುವಕನ ಮುಖ ಪೂರ್ತಿ ನಿಸ್ತೇಜವಾಯಿತು. ಅವನ ಬಾಯಿಂದ ಒಂದುಬಿಟ್ಟಿತು: "ಹಾಗಾದರೆ ನಿಮಗೆ ಗೊತ್ತಾಯಿತ್ತೇನು?"

"ಗೊತ್ತಾಗಿದೆ ನಿಕ್! ನಮಗೆಲ್ಲಾ ಸಂಗತಿ ತಿಳಿದುಹೋಗಿದೆ".

"ನಾನು ಕೊಲೆಮಾಡಿಲ್ಲ"— ಎಂದ ನಿಕ್.

ನೇಟ್‌ಸ ಸ್ವಹಸ್ತಾಕ್ಷರ ರಶೀದಿಯನ್ನು ಮುಂದಿಟ್ಟು "ನೀನವನನ್ನು ಕೊಂದದ್ದೂ ಹೌದು; ಆ ಮೇಲೆ ಅವನ ಹಣವನ್ನೆಲ್ಲಾ ಲುಟಾಯಿಸಿದ್ದೂ ನಿಜ-ಇನ್ನದನ್ನು ಅಲ್ಲಗಳೆದು ಫಲವಿಲ್ಲ"-ಸೇಂಡರ್ಸನ್ ಕಂಠೋಕ್ತವಾಗಿ ಹೇಳಿದ. ನಿಕ್ ತುಸುಹೊತ್ತು ಮೌನವ್ರತದಲ್ಲಿದ್ದ. ಅವನ

ಮುಖದ ಮೇಲೆ ವಿವಿಧ ವರ್ಣಗಳು ಮೂಡಿ ಮಾಯವಾದವು. ಕೊನೆಗೆ ಬಾಯಿಬಿಟ್ಟ: "ನಿಜ. ನಾನೇ ನೇಟ್‌ನನ್ನು ಕೊಂದೆ! ಆದರೆ ಹಣಕ್ಕಾಗಿಯಲ್ಲ—ಬೇರಾವುದಕ್ಕೂ ಅಲ್ಲ—ಅವ ಕೆಟ್ಟ ಮನುಷ್ಯ. ಅವ ನನ್ನ ಅಕ್ಕನನ್ನು ಕೊಲ್ಲಲು ಮನಸ್ಸುಮಾಡಿದುದನ್ನು ನಾನು ಕಂಡಿದ್ದೆ. ಆದಕ್ಕೆ ಮೊದಲೇ ಆತನನ್ನು ಕೊಂದುಬಿಡಬೇಕೆಂದು ನನ್ನ ಶಪಥವಿತ್ತು"

ಸೇಂಡರ್ಸನ್ ತಲೆಯಲ್ಲಾಡಿಸಿದ: "ಇದು ಶುದ್ಧ ಸುಳ್ಳು! ಅವನೆಂದಿಗೂ ನಿನ್ನ ಅಕ್ಕನನ್ನು ಕೊಲ್ಲುವ ಮನಸ್ಸುಮಾಡಿದುದಿಲ್ಲ ನಾವು ಸೋಫಿಯಾನನ್ನು ಮಾತಾಡಿಸಿ ತಿಳಿದಿದ್ದೇವೆ!'

"ಅವ ಖಂಡಿತವಾಗಿಯೂ ಕೊಲ್ಲುವುದರಲ್ಲಿದ್ದ" ನಿಕ್ ವಾದಿಸಿದ.

ಸೋಫಿಯಾನನ್ನು ಅಲ್ಲಿಗೆ ತರಲಾಯಿತು.

"ಓ ನಿಕ್! ನೀನು ಯಾಕೆ ಹಾಗೆ ಮಾಡಿದಿ?"—ಸೋಫಿಯಾ ತಮ್ಮನ ಕಂಠ ತಬ್ಬಿಕೊಂಡಳು. ನಿಕ್‌ನಿಗೆ ಸಿಡಿಲು ಬಡಿದಂತಾಗಿ ಅಂಗಾಂಗ ನಡುಗಿತು.

"ಅಕ್ಕಾ! ಆ ದಿನ ರಾತ್ರಿ ನಾನು ನಿನ್ನ ಮಲಗುವ ಕೋಣೆಯ ಕಿಟಕಿಯಿಂದ ಎಲ್ಲವನ್ನೂ ನೋಡುತ್ತಿದ್ದೆ. ನೀನು ಅಂಗಾತ ಹಿಂದೆ ಬಿದ್ದಿದ್ದಿ. ನೇಟ್ ಕೊಲೆಮಾಡುವೆನೆಂದು ನಿನ್ನ ಮೈಮೇಲೇರಿ ಬಂದಿದ್ದ. ಅವನ ಮುಖದಲ್ಲಿ ಕೊಲೆಗಡುಕ ಛಾಯೆಯಿತ್ತು!"

ಆ ಸುಂದರಿ ವಿಧವೆ ಒಂದೇ ಬಾರಿ ಎದೆಬಡಕೊಂಡು ಅಳಲಾರಂಭಿಸಿದಳು. "ಅಯ್ಯೋ ನಿಕ್! ಓ ನಿಕ್!!"—ಅವಳು ಮುಖ ತಿರುಗಿಸಿ ಪತ್ತೇದಾರರನ್ನು ನೋಡುತ್ತಾ "ಆ ದಿನ ರಾತ್ರಿ............" ಸಂಕಟ ಹೆಚ್ಚಿತು, ಮಾತು ಹೊರಡಲಿಲ್ಲ; ಧೊಪ್ಪನೆ ಕುಳಿತಳು. "ನಾವಿಬ್ಬರೂ ಸಿನೆಮಾ ನೋಡಿ ಬಂದವರು. ನಾನೂ ಅವನೂ ನಟಿ, ನಟರಂತೆ ಆಟ ಮಾಡಿದೆವು. ನಮಗಿಬ್ಬರಿಗೂ ಸಿನೆಮಾ ನಟನೆಯೆಂದರೆ ಅಷ್ಟು ಹುಚ್ಚು! ನಾನು ದೂಷಿತ ಸ್ತ್ರೀಯಾದೆ; ನನ್ನ ನೇಟ್ ವಿಲ್ಲಿಯನ್ ಆದ—ಅಂದಿನ ಚಿತ್ರದಲ್ಲಿದ್ದಂತೆ ಅವ ನನ್ನನ್ನು ಕೊಲ್ಲುವ ನಟನೆ ಮಾಡಿ ತೋರಿಸಿದ...
..............."

ನಿಕ್‌ನ ಮುಖದಲ್ಲಿದ್ದ ರಕ್ತಛಾಯೆಯೆಲ್ಲಾ ಆರಿಹೋಯಿತು;

ಆವ ಗೊಂಬೆಯಂತೆ ನಿಂತಿದ್ದ, ಅವನ ಕಣ್ಣುಗಳು ತುಂಬಿಬಂದು ಧಾರಾಕಾರವಾಗಿ ನೀರಿಳಿಯುತ್ತಿತ್ತು. ಸೋಫಿಯಾ ಮುಂದುವರಿಸುತ್ತಿದ್ದಳು:—

"........ಆ ಮೇಲೆ "ನೀನೊಬ್ಬ ಆಶ್ಚರ್ಯಕರ ನಟಿಯೇ ಸರಿ" ಎಂದ ನನ್ನ ನೇಟ್. "ನೀನಿನ್ನು ಹೋಲಿವುಡ್ಡಿಗೆ ಸೇರುವದುತ್ತಮ" ಎಂದೆ ನಾನು! ಓ ನಿಕ್! ಓ ನನ್ನ ತಮ್ಮಾ! ಅಯ್ಯೋ ಮಗು! ನೀನು ಒಂದೇ ಒಂದು ಮಿನಿಟು ಕಾಯುತ್ತಿದ್ದರೆ... ..!"

oo oo oo

ತಾ. 9-3-1937ರಲ್ಲಿ ಜಜ್ಜ್ ಗಿಲ್ಬರ್ಟರಿಂದ ನಿಕ್ಕ್‌ನ ವಿಚಾರಣೆ ನಡೆದು, ಅವನಿಗೆ 20 ವರುಷಗಳ ಶಿಕ್ಷೆ ವಿಧಿಸಲ್ಪಟ್ಟಿತು. ನೀವಿದನ್ನು ಓದುತ್ತಿರುವ ಹೊತ್ತಿನಲ್ಲಿ, ನಿಕ್ ಅಮೇರಿಕದ ಜೈಲೊಂದರಲ್ಲಿ ಕುಳಿತು ಕೊಂಡು ತನ್ನ ಭಾವನ ಕೊನೆಗಾಲದ ಮರುಕಪೂರ್ಣ ನೋಟವನ್ನು ಜ್ಞಾಪಿಸುತ್ತಿದ್ದಾನೇನೋ!

(ನಡೆದ ಕಥೆ—ಆಧಾರದಿಂದ).

೫

ಪ್ರೇಮ ಪ್ರವಾಹ

ಅಕ್ಕತಂಗಿಯರಿಬ್ಬರು ಮಾತಾಡುತ್ತಿದ್ದರು.

‘ಶಾಲಿ, ನೀನಿಂಥಾ ರಾಕ್ಷಸ ಕೃತ್ಯವನ್ನು ಮಾಡುತ್ತಿರುವೆಯೆಂಬು ದನ್ನರಿಯೆ. ನಿನ್ನ ಒಡಹುಟ್ಟಿದವಳ ಮೇಲೆ ಅತ್ಯಾಚಾರ ಮಾಡುತ್ತಿ ರುವೆ. ಅದು ನಿನಗೆ ನ್ಯಾಯವೆಂದು ತೋರುತ್ತಿದೆಯೆ? ಕೇಳು ಶಾಲಿ, ದಯಮಾಡಿ, ನನಗಾಗಿ ಆ ಹಂಬಲ ಬಿಟ್ಟುಬಿಡು. ನನ್ನ ಮೇಲೆ ನಿನ್ನ ದೊಡ್ಡ ಉಪಕಾರವಾಗುವುದು. ನಾನು ಚಿರಋಣಿಯಾಗುವೆನು. ಅದರ ಬದಲಿಗೆ ನಿನಗೆ ಬೇರೆ ಯಾವ ರೀತಿಯಿಂದಲಾದರೂ ಉಪಕಾರ ಮಾಡ ಬಲ್ಲೆನು.........’ ಅಕ್ಕನು ನುಡಿಯುತ್ತಿದ್ದಳು. ಅಷ್ಟರಲ್ಲೇ ಅವಳ ಮಾತನ್ನು ಅಡ್ಡಗಟ್ಟಿ ಶಾಲಿಯು ವಿನಯದಿಂದ ಕೇಳಿದಳು: ‘ವೀಣಾ, ನಿಶ್ಚಯವಾಗಿಯೂ ನೀನು ನನಗೆ ಉಪಕಾರ ಮಾಡುವೆಯಾ?”

‘ನಿನ್ನಾಣೆ, ಶಾಲಿ, ನಿನ್ನನ್ನು ಹೇಗೆ ನಂಬಿಸಲಿ? ಬೇಕಾದರೆ ಬರೆದು ಕೊಡಲೆ.’

‘ಹಾಗಾದರೆ ಇನ್ನು ಮುಂದೆ ಈ ವಿಷಯದಲ್ಲಿ ಯಾವ ಪ್ರಸ್ತಾಪ ವನ್ನೂ ಎತ್ತಲಾಗದು. ನಾನು ನಿನ್ನಲ್ಲಿ ಕೇಳುವುದಿಷ್ಟೆ; ಮತ್ತಾವ ವಿಷ ಯದಲ್ಲೂ ನನಗೆ ಕೊರತೆಯಿಲ್ಲ’.

‘ನೀನು ರಾಕ್ಷಸೀ’.

‘ಆಗಲಿ’.

‘ದ್ರೋಹಿ’.

‘ಅದು ನಿನಗೂ ಸಲ್ಲುವುದು’.

‘ಛಿ!’

‘ಅಕ್ಕಾ, ನೀನು ಅದೇಕೆ ಅಷ್ಟು ಸ್ವಾರ್ಥಳಾಗಿರುವೆ?’

‘ನನ್ನ ವಸ್ತುವು ನನಗೇ ಸಿಗಬೇಕೆಂದು ನಾನು ಇಚ್ಛಿಸಿದರೆ, ಅದು ಸ್ವಾರ್ಥತೆಯೇ?’

'ಅಲ್ಲದೆ ಮತ್ತೇನು? ಉತ್ತಮವಾದ ವಸ್ತುವಾವುದಾದರೂ ಇದ್ದರೆ, ಯಾವಾಗಲೂ ನೀನು ಮುಂದೆ ಬಂದು ನಿನ್ನದೆಂದು ಹಟಹಿಡಿದು ಪಡೆಯಲು ಪ್ರಯತ್ನಿಸುವೆ. ಅದು ನಿನ್ನ ಸ್ವಾರ್ಥತೆಯಲ್ಲವೆ? ಎಲ್ಲ ವಿಷಯದಲ್ಲೂ ನಿನಗೆ ಪರಿತೃಪ್ತಿಯುಂಟಾಗಬೇಕು, ನಾನದನ್ನು ನೋಡುತ್ತಿರಬೇಕು, ಇದೆಲ್ಲಿಯ ನ್ಯಾಯ? ಆದರೂ ಇಷ್ಟರ ವರೆಗೆ ಯಾವ ವಿಚಾರದಲ್ಲೂ ನಿನಗೆ ಅಡ್ಡಿ ಬರಲಿಲ್ಲ. ಇದೀಗ ನೀನು ಕೇಳುತ್ತಿರುವುದು ನನ್ನ ಜೀವನ ಮರಣಕ್ಕೆ ಸಂಬಂಧಪಟ್ಟುದು—ಇಲ್ಲ, ನಿಜವಾಗಿಯೂ ಈ ವಿಷಯದಲ್ಲಿ ನಾನು ನನ್ನ ಮನಸ್ಸನ್ನು ತಿರುಗಿಸಲಾರೆ. ಶಕ್ತಳೂ ಅಲ್ಲ. ಅಕ್ಕಾ, ಕೇಳು ಇಂದಿನಿಂದ ಈ ವಿಷಯದ ಸಂಭಾಷಣೆಗೆ ದೀರ್ಘವಾದ ಪೂರ್ಣ ವಿರಾಮವನ್ನು ಕೊಟ್ಟು ಬಿಡೋಣ, ತಿಳಿಯಿತೆ?'

'ಅಹ, ಶಾಲಿ, ಪ್ರೇಮ ರಹಸ್ಯವನ್ನು ನೀನು ಬಲ್ಲವಳಾಗಿದ್ದರೆ, ನನ್ನ ಹೃದಯವು ಹೇಗೆ ಜೀಯುತ್ತಿದೆಯೆಂಬುದರ ಕಲ್ಪನೆಯು ನಿನಗಾಗುತ್ತಿತ್ತು. ನಿನ್ನ ಅಕ್ಕನಿಗಾಗಿ ವಿಶಾಲ ಹೃದಯವುಳ್ಳ ನೀನೇಕೆ ನಿನ್ನ ಈ ಅಭಿಲಾಷೆಯನ್ನು ಕೆತ್ತೊಗೆಯಬಾರದು ಶಾಲಿ? ನಿನ್ನೊಂದು ಮಾತಿನಿಂದ—ಆಶ್ವಾಸನೆಯಿಂದ—ನನ್ನೀ ಬಡ ಹೃದಯಕ್ಕೆ ಎಷ್ಟೊಂದು ಶಾಂತಿಯು ಸಿಕ್ಕೀತೆಂದು ನಿನಗೆ ಕಲ್ಪನೆಯಿದೆಯೆ? ಶಾಲಿ, ನಿನ್ನ ಮನಸ್ಸು ತಿರುಗಿದರೆ, ನೀನು ಇಷ್ಟಪಟ್ಟರೆ ಎಲ್ಲವೂ ಆಗುವುದು. ನಾನು ನಿನ್ನ ಅಕ್ಕನಾದರೂ ಸೆರಗೊಡ್ಡಿ ಬೇಡುತ್ತಿರುವೆನು. ವೀಣೆಯು ಶಾಲಿಯಲ್ಲಿ ಯಾಚಿಸುತ್ತಿರುವಳು. ಶಾಲಿ, ದಯೆಯುಂಟಾದೀತೆ?'

'ಅಕ್ಕಾ, ನೀನು ಹೇಳುವ ಮತ್ತು ಅನುಭವಿಸುವ ಭಾವನೆಗಳೆಲ್ಲವೂ ಈ ಶಾಲಿಗೂ ಇವೆ. ಆದುದರಿಂದ, ದಯವಿಟ್ಟು ನೀನೇ ನಿನ್ನ ಮನಸ್ಸನ್ನು ತಿರುಗಿಸಿಕೊಳ್ಳಲಾರೆಯಾ? ನೀನೇ ನಿನ್ನ ಚಿಕ್ಕ ತಂಗಿಯಲ್ಲಿ ಕರುಣೆಯುಳ್ಳವಳಾಗಬೇಕಲ್ಲವೆ? ನಾನೆಷ್ಟಾದರೂ ಚಂಚಲೆ; ನಿನ್ನ ಮನಸ್ಸೇಕೆ ದೃಢತೆಯನ್ನು ಹೊಂದಿಲ್ಲವಕ್ಕಾ? ಅಕ್ಕಾ, ನಿನ್ನ ದಮ್ಮಯ್ಯ. ಇನ್ನು ಈ ವಿಷಯದಲ್ಲಿ ನನ್ನನ್ನು ಎಂದಿಗೂ ಪೀಡಿಸದಿರು. ನಿನ್ನ ಕಾಲು ಹಿಡಿಯುತ್ತೇನೆ; ಪ್ರತಿ ಆಜ್ಞೆಗಳನ್ನೂ ಪಾಲಿಸುತ್ತೇನೆ. ಆದರೆ......'

'ಸಾಕುಮಾಡು, ಶಾಲಿ! ಪ್ರಪಂಚದ ಎಲ್ಲಾ ಕಾರ್ಯವೂ

ಅಹಂಕಾರವೂ ಒಂದುಗೂಡಿ ಶಾಲಿಯ ರೂಪವನ್ನು ಹೊಂದಿರುತ್ತದೆಂದು ನನಗೆ ತಿಳಿದು ಹೋಯಿತು. ಹಂಸದ್ದೆಂದೊಡೆದ ಮೊಟ್ಟೆ ಹಾವಿನದಾಯಿತು. ಈ ರೀತಿ ಸ್ಪರ್ಧೆಗೆ ನಿಲ್ಲಲು ನಿನ್ನನ್ನು ಇಷ್ಟೊಂದು ಪಾಡುಪಟ್ಟು ನಾನು ಸಾಕಿದ್ದೆನಲ್ಲವೆ? ಎಂಥಾ ಅನ್ಯಾಯ! ಮಾತೃಸ್ಥಾನದಲ್ಲಿರುವ ನನ್ನ ಮೇಲೆಯೇ ನಿನ್ನ ಧಾಳಿಯೆ?'

'ಅಕ್ಕಾ—ಮನಸ್ಸೊಂದಿದೆಯಲ್ಲ, ತಡೆಯಿಲ್ಲದ ನೀರಿನ ಪ್ರವಾಹದಂತಹುದು. ನಿನ್ನ ಬಯಕೆಯು ಅಂತಿದ್ದಿದ್ದರೆ, ಅಂದೇ ನೀನು ನನ್ನ ಮನಸ್ಸಿಗೆ ತಡೆಗಟ್ಟಬೇಕಿದ್ದಿತು. ಇದೀಗ ಅದು ಗುರಿಮುಟ್ಟಿಯಾಗಿದೆ. ಆದರಲ್ಲಿ ನನ್ನ ತಪ್ಪೇನಕ್ಕಾ? ಇನ್ನು ವ್ಯರ್ಥವಾಗಿ ವಾದವಿವಾದ ಮಾಡುವುದರಲ್ಲಿ ಪ್ರಯೋಜನವಿಲ್ಲ. ನಿನ್ನ ಅಭಿಲಾಷೆಯೇ ಇದ್ದರೆ, ಅಡ್ಡಿಯಿಲ್ಲದೆ ಅವರನ್ನು ಮದುವೆಯಾಗು. ತಡೆಯುವ ಸಾಮರ್ಥ್ಯವು ನನ್ನಲ್ಲಿ ಸ್ವಲ್ಪವೇ ಇದೆ! ಅದು ಬಿಟ್ಟು ನನ್ನ ಹೃದಯವನ್ನೇ ಹಿಸುಕಿ ಹಾಕು ಎನ್ನುವುದರಲ್ಲಿ ಅರ್ಥವೇನಿದೆ?'

'ಹೌದು, ನಾನು ಮದುವೆಯಾಗಬಲ್ಲೆ! ಆ ಧೈರ್ಯವು ನನಗಿದೆ. ಆದರೆ, ನೀನು ನನ್ನ ಹೃದಯೇಶ್ವರನನ್ನು ನಿನ್ನ ಹೃದಯದೊಳಕ್ಕಿಟ್ಟು ಎದುರೆದುರು ಪೂಜಿಸುತ್ತಿರುವುದನನ್ನು ನೋಡಿ ನನ್ನಿಂದ ಸಹಿಸಲಾಗದು. ಅದಕ್ಕಾಗಿಯೇ ನಿನ್ನ ಮನಸ್ಸನ್ನು ತಿರುಗಿಸಲು ಪ್ರಯತ್ನಿಸಿದೆ. ಅದು ಸಾಧ್ಯವಾಗದ ಮೇಲೆ, ಶಾಲಿ, ನನ್ನ ದಾಂಪತ್ಯದಲ್ಲಿ ನೀನು ತಡೆಯಾಗಿರುವೆ. ನಮ್ಮ ನಿರ್ವಾಹವು ಇನ್ನು ಹೇಗೆ ಒಂದೇ ಮನೆಯಲ್ಲಾಗಬಲ್ಲದು? ನೀನೇ ವಿಚಾರಿಸು; ನಿನ್ನಂತೆಯೆ ನನ್ನ ಹೃದ್ಭಾವನೆಗಳು ಕೂಡ! ಜನ್ಮತಃ ನಾನೇ ಹೆಚ್ಚಿನ ಅಧಿಕಾರ ಬಾಧ್ಯತೆಯುಳ್ಳವಳು. ಆದಕಾರಣ, ನೀನು ಇನ್ನು ಮೇಲೆ ಈ ಮನೆಯಲ್ಲಿರಬಾರದು. ನಿನ್ನ ಪಾಲಿನ ಬೇರೆ ಮನೆಗಳಿವೆ; ಬೇಕಾದ ಸಾಧನಗಳನ್ನೊದಗಿಸಿಕೊಳ್ಳುವ ಅನುಕೂಲವಿದೆ. ನಿನ್ನ ಅದೃಷ್ಟವನ್ನು ಪರೀಕ್ಷಿಸು, ಹೋಗು! ನಾವಿಬ್ಬರು ಅಕ್ಕತಂಗಿಯರಾದರೂ, ಇದೊಂದು ವಿಷಯದಲ್ಲಿ ಆ ಜನ್ಮ ಶತ್ರುಗಳೆಂದು ತಿಳಿ! ಶಾಲಿ, ನೀನು ಕೂಡ ಇಲ್ಲಿರಲು ಬಯಸಲಾರೆ. ಹಾಗೆ ನಾನು ನಂಬುತ್ತೇನೆ!'

'ಹೌದು, ಆವರಣವೇ ಹೊಲವನ್ನು ಮೇಯುತ್ತಿರುವಲ್ಲಿ ಮತ್ತೇನುಳಿಯಿತು? ನನ್ನ ಪ್ರೇಮದ ಪ್ರಥಮಾಹುತಿಯೆಂದು, ನನ್ನ ತಂದೆಯ ಪವಿತ್ರಸ್ಥಾನವನ್ನು ಸಂಪೂರ್ಣ ನಿನಗೆ ಬಿಟ್ಟುಕೊಡುತ್ತೇನೆ. ಅಕ್ಕಾ, ಇನ್ನೆಂದಿಗೂ ಈ ಮನೆಯಲ್ಲಿ ಶಾಲಿಯು ನಿನ್ನ ಕಣ್ಣಿಗೆ ಬೀಳಲಾರಳು.'

ಶೈಲಜೆ—ಶಾಲಿಯು ತನ್ನ ಕೋಣೆಗೆ ಹೊರಟುಹೋದಳು.

೨

ಶೈಲಜೆಯು ಹುಟ್ಟುವಾಗಲೇ ದೌರ್ಭಾಗ್ಯವನ್ನು ಕರೆದುಕೊಂಡು ಬಂದಿದ್ದಳು. ಅವಳ ಜನನವಾಗಿ ಕೆಲವೇ ತಿಂಗಳುಗಳಲ್ಲಿ ತಾಯನ್ನು ಕಳೆದುಕೊಂಡಿದ್ದಳು. ವೀಣೆಯಾಗ ಮೂರು ವರ್ಷದವಳಾಗಿದ್ದಳು. ಈ ಎರಡು ಅನಾಥ ಶಿಶುವನ್ನು ಅವುಗಳ ತಂದೆ, ಹರಿಹರಯ್ಯನವರು ಬಹಳ ಶ್ರಮಪಟ್ಟು ಸಾಕಿದ್ದರು. ಹರಿಹರಯ್ಯನವರೊಬ್ಬ ಸದ್ಗೃಹಸ್ಥರು. ಹರೆಯದಲ್ಲೇ ಪತ್ನಿಯನ್ನು ಕಳೆದುಕೊಂಡರು. ಬೇಕಾದ ಅನುಕೂಲಗಳಿದ್ದರೂ, 'ಮಕ್ಕಳಿಗಾಗಿ' ಎಂದು ಕೆಲವರು ಎರಡನೆಯ ಸಂಬಂಧ ಮಾಡಿಕೊಳ್ಳುವಂತೆ, ಅವರು 'ಮಕ್ಕಳಿಗಾಗಿ'ಯೇ ಎರಡನೆಯ ಮದುವೆಯನ್ನು ಮಾಡಿಕೊಳ್ಳದೆ, ಹಾಲುಳ್ಳ ದಾದಿಯನ್ನಿಟ್ಟು ಆ ಅಕ್ಕತಂಗಿಯರನ್ನು ಎರಡು ಕಣ್ಣುಗಳಂತೆ ಕಾಪಾಡಿ, ಯೋಗ್ಯ ವಯಸ್ಸಿನಲ್ಲಿ ಶಿಕ್ಷಣವನ್ನು ಕೊಟ್ಟು, ವಿಧಿನಿಯಮದಂತೆ ಕಾಲವಶರಾದಂದು ತಮ್ಮ ಅತುಲ ಸಂಪತ್ತಿಯನ್ನು ವಿಭಾಗಿಸುವಾಗ, ಮಕ್ಕಳಿಬ್ಬರಿಗೆ ಸಮಪಾಲನ್ನು ಬಿಟ್ಟು ಹೋಗಿದ್ದರು. ತಾರುಣ್ಯಾಭರದಲ್ಲೇ ಅಕ್ಕ ತಂಗಿಯರಿಗೆ ಸಂಪತ್ತೂ ಸ್ವಾತಂತ್ರ್ಯವೂ ಸಿಕ್ಕಿಬಿಟ್ಟಿತ್ತು.

ವೀಣೆ ಮತ್ತು ಶೈಲಜೆಯರು ಒಡಹುಟ್ಟಿದವರಾಗಿದ್ದರೂ ಅವರ ಮನೋವೃತ್ತಿಗಳು ಎರಡು ಸಮಾನಾಂತರ ರೇಖೆಗಳಂತಿದ್ದುವು. ವೀಣೆಯು ಅತ್ಯಂತ ಸುಂದರಿ. ಸ್ವಭಾವತಃ ಮಹತ್ವಾಕಾಂಕ್ಷೆಯುಳ್ಳವಳೂ, ಹಟವಾದಿಯೂ ಆಗಿದ್ದಳು. ಶೈಲಜೆಯೋ, ಸಾಧಾರಣ ಚೆಲುವಿನವಳು. ಮಹಾ ಶಾಂತ ಪ್ರಕೃತಿಯವಳೂ, ಸಾತ್ವಿಕಳೂ ಆಗಿದ್ದಳು. ಇಂತಹ ವಿರುದ್ಧ ಸ್ವಭಾವವಿದ್ದರೂ ಇಂದಿನ ತನಕ ವೈಮನಸ್ಸಿಲ್ಲದೆ ಅವರು ತಾರುಣ್ಯದ ಮೆಟ್ಟಲುಗಳನ್ನು ಜತೆಗೆ ಏರಿಕೊಂಡರು. ಕೊನೆಯ

ಸೋಪಾನವನ್ನಡರುವಾಗ ಅವರ ಪಥದಲ್ಲಿ ಕಾರ್ಮೋಡವೊಂದು ಕವಿದು ಕೊಂಡಿತು.

ಮುರಲಿಯು ಹರಿಹರಯ್ಯನವರ ಕಾರ್ಯದರ್ಶಿಯಾಗಿದ್ದನು. ಚಿಕ್ಕಂದಿನಲ್ಲೇ ಹರಿಹರಯ್ಯನವರ ಮನೆಸೇರಿ, ತನ್ನ ಅಸಾಧಾರಣ ಬುದ್ಧಿ ಚಾತುರ್ಯದಿಂದಲೂ, ಮೋಹಕ ರೂಪದಿಂದಲೂ ಅಯ್ಯನವರ ಸಂಪೂರ್ಣ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದನು. ಗಂಡು ಸಂತಾನ ವಿಲ್ಲದ ಅಯ್ಯನವರಿಗೆ ಮುರಲಿಯೆಂದರೆ ಒಂದು ಬಾಯಿ. ಅಂದು, ಕೆಲಸ ಕ್ಕಾಗಿಬಂದ ಸೀತಮ್ಮ, ಮುರಲಿಯ ತಾಯಿ, ಮುರಲಿಯನ್ನು ಅಮ್ಮನವರ ಪಾದಕ್ಕೆ ಹಾಕಿ, ಕಣ್ಣೀರಿಳಿಸಿದುದನ್ನು ಅಯ್ಯನವರಿಗೆ ಆಕೆ, ಹೃದ್ರಾವಕ ವಾಗಿ ವಿವರಿಸಿದ್ದರು. ಸೀತಮ್ಮನ ವಿಷಯ ವಿವರಿಸುವುದೆಂದರೆ,ಅದೊಂದು ಕತೆ. ಆಕೆ ಅನಾಥೆ, ಮುರಲಿಯ ಪಾಲನೆಗಾಗಿ ಕೆಲಸವನ್ನು ಹುಡುಕಿ ಅಮ್ಮನವರ ಬಳಿಗೆ ಬಂದುದೆಂದಿಷ್ಟೇ ತಿಳಿದರೆ ಸಾಕಾದುದು. ಅಮ್ಮನವ ರಾದರೂ ಮುರಲಿಯನ್ನು ನೋಡಿಯೇ ಸೀತಮ್ಮನಿಗೆ ವೀಣೆಯನ್ನು ನೋಡಿ ಕೊಳ್ಳುವ ಕೆಲಸ ಕೊಟ್ಟಿದ್ದರು.

ಕಾಲಚಕ್ರವು ಉರುಳಿತು. ಆದರಡಿಯಲ್ಲಿ ಸಿಕ್ಕಿ ಅಳಿದುಳಿದವ ರೆಂದರೆ, ವೀಣಾ, ಶೈಲಜೆ ಮತ್ತು ಮುರಲಿ. ಮುರಲಿಯು ಆ ಎರಡು ಹಕ್ಕಿಗಳ ವಿಶ್ರಾಂತಿ ಸ್ಥಲವಾಗಿದ್ದನು. ಅವನ ಸಹವಾಸವು ಅವರಿಬ್ಬರಿಗೂ ಆನಂದದಾಯಕವಾಗಿತ್ತು. ಅವನಾದರೋ ಅತ್ಯಂತ ರಸಿಕ. ಅವರಿಬ್ಬರ ಮನೋಭಾವನೆಗಳಿಗನುಸಾರವಾಗಿ,ಅವರ ಮನಸ್ಸನ್ನು ರಂಜಿಸುತ್ತಿದ್ದನು. ಬಾಲ್ಯಕಾಲದಲ್ಲಿ ಯಾವ ಮನೋವಿಕಾರಗಳೂಇಲ್ಲದೆ ಅವರುಮೂವರೂ ಜತೆಕೂಡಿ, ಕಲಿತು ಕೆಲೆಯುತ್ತಿದ್ದರು. ಅದೊಂದು ಕಾಲವೊದಗಿತು. ಆಗ ಮೂವರ ಪ್ರಕೃತಿಯಲ್ಲೂ ಬಹಳ ಮಾರ್ಪಾಟುಂಟಾಯಿತು. ಆ ಕೂಟವು ಕಡಿಮೆಯಾಯಿತು. ಮಕ್ಕಳಾಟಿಕೆಯ ಕೆಲೆತವು ಹಿಡಿತಕ್ಕೆ ಬಂದಿತು. ಮುಖ ಮುಖ ನೋಡಿ ಮಾತಾಡಲು ಮುವ್ವರಿಗೂ ಅದೇಕೋ ಸಂಕೋಚ. ಆಗ, ಮನೆಯ ಸ್ಥಿತಿಗತಿಗಳೇ ಬದಲಾದುವು. ಮನೆಯ ವ್ಯವಸ್ಥೆಗಳು ಯಂತ್ರದಂತೆ ನಡೆಯುತ್ತಿದ್ದವು. ಮುರಲಿಯೇ ಮೇಲ್ವಿಚಾರವನ್ನು ತೆಗೆದುಕೊಳ್ಳುತ್ತಿದ್ದನು. ಈಗ,ಮೆಲ್ಲಮೆಲ್ಲಗೆ ವೀಣೆಯು

ಗೃಹಕಾರ್ಯದಲ್ಲಿ ತಲೆಯಿಡತೊಡಗಿದಳು. ಅನೇಕ ವಿಷಯಗಳನ್ನು ಮುರಲಿಯೊಂದಿಗೆ ಏಕಾಂತದಲ್ಲಿ ಚರ್ಚಿಸುತ್ತಿರುವಾಗ ಅವಳಿಗೆ ಅವನ ಸಾನ್ನಿಧ್ಯವು ಹೇಗೆಹೇಗೋ ಎನಿಸುತಿತ್ತು. ತ್ವರ್ಯದಲ್ಲೇ ಅವಳು ಅರಿತುಕೊಂಡಳು—ಮುರಲಿಯು ತನ್ನ ಹೃದಯವನ್ನು ಆಕ್ರಮಿಸಿರುವ ನೆಂದು! ಕಾರಣವಿತ್ತು. ಮುರಲಿಯು ಕಾವ್ಯಮಯ ಸೌಂದರ್ಯವನ್ನು ಪಡೆದಿದ್ದನು. ಬಡವೆಯ ಮಗನಾಗಿದ್ದರೂ ಘನ ಕುಟುಂಬದಲ್ಲಿ ಬೆಳೆ ದುದರಿಂದ, ಅವನ ದೇಹಾದ್ಯಂತದಲ್ಲೂ ಸಲ್ಲಕ್ಷಣಗಳೇ ಕೂಡಿಕೊಂಡಿ ದ್ದುವು.

ಶೈಲಜೆಯೊ? 'ಮುರಲಿಯು ನಿನ್ನ ಗಂಡನೆಂದು ಅಕ್ಕನ ಬಾಯಿಂದಲೇ ಎಷ್ಟು ಸಲ ಹೇಳಿಸಿಕೊಂಡಿರಲಿಲ್ಲ? ಪರಿಹಾಸ್ಯಕ್ಕಾದರೂ ಎಳೆಗಿಡದಲ್ಲಿ ನೆಟ್ಟ ಆಣಿಯಲ್ಲವೆ? ತಾಯಿಯಿಲ್ಲದ ತಬ್ಬಲಿ, ಶೈಲಜೆ, ವೀಣೆಯಲ್ಲೇ ತಾಯನ್ನು ಕಂಡಿದ್ದಳು. ತನೆಗೆ ಬೇಕಾದುದನ್ನೊದಗಿಸುವ ವಳು ವೀಣೆ, ಆದುದರಿಂದ ಮುರಲಿಯೇ ತನ್ನ ಗಂಡನೆಂದು ಅಕ್ಕನು ನಿಶ್ಚಯಿಸಲು ಸಮರ್ಥಳು; ತೀರ ಚಿಕ್ಕಂದಿನಲ್ಲಿ 'ಗಂಡ'ನ ಅರ್ಥವಾಗದಿ ದ್ದರೂ ಮುರಲಿಗೂ ತನಗೂ ಏನೋ ಆಗುವದಿರಬೇಕೆಂದು ಪರಿಹಾಸ್ಯ ಮಾಡಿದಾಗಲೆಲ್ಲಾ ಕಲ್ಪಿಳಿಸಿದ್ದಳು. ಬುದ್ಧಿಯು ತಿಳಿದಾಗ, 'ಗಂಡ' ನೆಂದರೇನೆಂದವಳು ತಿಳಿದಳು. ಮುರಲಿಯನ್ನು ಹೃದಯದಲ್ಲಿ ಆರಾಧಿಸ ತೊಡಗಿದಳು. ವೀಣೆಗದು ತಿಳಿದಿತ್ತು.

ವೀಣೆಗೆ ಮೊದಲು ಮುರಲಿಯ ವಿಷಯದಲ್ಲಿ ಯಾವ ಚಿಂತನೆಯೂ ಇರಲಿಲ್ಲ. ಆದರೆ, ತಾರುಣ್ಯದ ಸೀಮಾಂತ್ಯದಲ್ಲಿ ಸರ್ವಾಂಗ ಸುಂದರ ನಾದ ಆ ತರುಣನನ್ನು ಕಂಡು, ಅವಳಿಗರಿಯದಂತೆ ಅವಳ ಮನಸ್ಸು ಆತನಿಗೆ ಬಲಿಬಿದ್ದಿತು.

ಪಾಪ, ಮುರಲಿಗೆ ಈ ಹುಡುಗಿಯರ ಆಂತರಿಕ ಭಾವನೆಗಳೊಂದೂ ತಿಳಿದಿರಲಿಲ್ಲ. ದಿನದಿನಕ್ಕೆ ಬದಲಾವಣೆ ಹೊಂದುತ್ತಿದ್ದ ಅವರ ನಡತೆಯು ಅವನಿಗೆ ಆಶ್ಚರ್ಯವುಂಟುಮಾಡುತ್ತಿತ್ತು. ಅವನ ಮನಸ್ಸು ನಿಷ್ಕಳಂಕ ವಾಗಿದ್ದುದರಿಂದ ಇದಾವ ಸಮಸ್ಯೆಯೆಂದವನಿಗೆ ಬಗೆಹರಿಯಲಿಲ್ಲ. ಹಾಗೆಂದು ಅವರನ್ನು ಪ್ರಶ್ನಿಸುವ ಧೈರ್ಯವೂ ಅವನಲ್ಲಿರಲಿಲ್ಲ. ಮನೆಯ

ಆಶ್ರಿತನಾದ ಅವನು ತನ್ನ ಕಾರ್ಯದಲ್ಲಿ ಚ್ಯುತಿಬಾರದಂತೆ ಬಹಳ ದಕ್ಷತೆಯಿಂದ ನಡೆದುಕೊಳ್ಳುತ್ತಿದ್ದನು.

೩

ಅಕ್ಕ ತಂಗಿಯರಲ್ಲಿ ನಾಲ್ಕು ಮಾತುಗಳಾಗಿ, ಮನೆಬಿಟ್ಟು ಹೋಗಬೇಕೆಂದು ಶೈಲಜೆಗೆ ವೀಣೆಯು ಆಜ್ಞಾಪಿಸಿದಂದು, ಮುರಲಿಯು ವಸೂಲಿಗಾಗಿ ಹಳ್ಳಿಗೆ ಹೋಗಿದ್ದನು. ಆದುದರಿಂದ, ಶೈಲಜೆಗೆ, ಅವನಿಲ್ಲದಿರುವಾಗ, ಚಿಕ್ಕಂದಿನಿಂದಲೂ ಅವನ ಸಲಹೆಯಂತೆ ನಡೆದುದರಿಂದ, ಮನೆಬಿಟ್ಟು ಹೋಗಲು ಮನಸ್ಸುಬರಲಿಲ್ಲ. ಅವನಾದರೋ ಇನ್ನೂ ಹತ್ತಿಪ್ಪತ್ತು ದಿನಗಳು ಬರುವಂತಿದ್ದಿಲ್ಲ. ವೀಣೆಯಾದರೂ ಇದೇ ಸಂದರ್ಭವನ್ನು ಸಾಧಿಸಿ, ಶೈಲಜೆಯೊಂದಿಗೆ, ಅವಳ ಆರಾಧ್ಯ ಮೂರ್ತಿಯನ್ನು ವಿಸರ್ಜಿಸುವಂತೆ ಹೇಳಿ ಕಲಹವೆಬ್ಬಿಸಿದಳು

ಶೈಲಜೆಯು ಅಕ್ಕನ ನಿಷ್ಠುರ ಆಜ್ಞೆಯನ್ನು ಕೇಳಿ ಮನನೊಂದವಳಾಗಿ ತನ್ನ ಕೋಣೆಗೆ ಹೊರಟುಹೋದವಳು ಬಾಗಿಲನ್ನಿಕ್ಕಿಕೊಂಡು, ಕಿಟಕಿಯ ಬಳಿಗೆ ಹೋಗಿ, ಶೂನ್ಯದೃಷ್ಟಿಯಿಂದ ಆಕಾಶವನ್ನು ನೋಡುತ್ತ ನಿಂತಳು. ಏನೇನೋ ವಿಚಾರಗಳು ಅವಳ ಮನಸ್ಸಿನಲ್ಲಿ ಮೂಡಿ ಅಳಿದವು. ಕೊನೆಗೆ, ಏನೋ ಒಂದು ದೃಢ ನಿಶ್ಚಯಕ್ಕೆ ಬಂದು, ತನ್ನ ಅಗತ್ಯದ ಸಾಮಾನುಗಳನ್ನೆಲ್ಲ ಒಂದು ಪೆಟ್ಟಿಗೆಯಲ್ಲಿ ತುಂಬಿದಳು. ಅನಂತರ ಹೊರಬಂದು, ಸೇವಕನನ್ನು ಕರೆದು, ಕುದುರೆಗಾಡಿಯನ್ನು ತರಹೇಳಿ, ತಾನು ಅಕ್ಕನ ಕೋಣೆಗೆ ಹೋಗಿ ಬಾಗಿಲು ದೂಡಿದಳು. ಆಗ ವೀಣೆಯು ಸೋಫದ ಮೇಲೆ ದಿಂಬಿಗೆ ಕೈಯ್ಯೂರಿ ತಲೆಯುಡಿಗಿಟ್ಟು ಕುಳಿತಿದ್ದಳು. ಬಾಗಿಲುತೆರೆಯಲ್ಪಡುತ್ತಲೇ ಅವಳುತಲೆಯೆತ್ತಿದಾಗ, ಅತ್ತತ್ತು ಕೆಂಪಾದ ಅವಳ ಮುಖವನ್ನು ನೋಡಿ ಶೈಲಜೆಗೆ ಆಶ್ಚರ್ಯವಾಯಿತು. 'ಅಕ್ಕಾ!' ಅವಳು ಕರೆದಳು ವೀಣೆಯು ಮಾತಾಡಲಿಲ್ಲ. ಪುನಃ ಶೈಲಜೆಯು, 'ನಾನು ಹೊರಟೆನಕ್ಕಾ! ಆದರೆ, ನನಗೆ ನಿನ್ನಲ್ಲಿ ಎಳ್ಳಷ್ಟೂ ಬೇಸರವಿಲ್ಲ. ನಾನು ಯೋಚಿಸಿ ನೋಡಿದೆ. ಪಾಪ! ನಿನ್ನದಾದರೂ ಅದರಲ್ಲಿ ತಪ್ಪೇನು? ನನ್ನಂತೆಯೇ ನೀನು ಕೂಡಾ ಮನುಷ್ಯಳೇ ಆಗಿರುವೆ. ವಿಧಿನಿಯಮಕ್ಕೆ ಅಡ್ಡಿ ಆತಂಕಗಳುಂಟೆ? ಬರುತ್ತೇನಕ್ಕಾ!' ಎಂದು ನುಡಿದಳು. ವೀಣೆಯು

ಕಣ್ಣೀರೊರಸುತ್ತ ಶೈಲಜೆಯ ಕೈಹಿಡಿದು ತನ್ನ ಬಳಿಯಲ್ಲಿ ಕೂರಿಸಿಕೊಂಡಳು. ಸ್ವಲ್ಪಹೊತ್ತು ಮೌನವಾಗಿದ್ದು ಅವಳೆಂದಳು:—

'ಶಾಲಿ, ನೀನು ಮನೆಯನ್ನಾದರೂ ಬಿಡುವೆ, ನಿನ್ನ ಅಕ್ಕನನ್ನಾದರೂ ಮರೆಯುವೆ, ನಿನ್ನ ನಿಶ್ಚಯವನ್ನು ಮಾತ್ರ ಬಿಡಲಾರೆಯಲ್ಲವೆ?'

'ಅಕ್ಕಾ' ಶೈಲಜೆಯು ನುಡಿದಳು. 'ಅಕ್ಕಾ, ನನ್ನ ಸ್ಥಳದಲ್ಲಿ ಕ್ಷಣಮಾತ್ರ ನಿನ್ನನ್ನು ಕಲ್ಪಿಸಿಕೊಂಡು ಅದು ಸಂಭವವೇ ನೋಡು! ನಾನು ಪ್ರಪಂಚವನ್ನೇ ಬಿಡಬಲ್ಲೆ, ಆದರೆ ಅವರನ್ನು ಮರೆಯುವುದು ನನ್ನ ಕೈಯ ಹೊರಗಿನ ಮಾತಾಗಿದೆ. ಆತ್ಮವಂಚನೆಯು ನನಗೆ ತಿಳಿಯದು!'

'ನೀನು ಮನೆಬಿಟ್ಟು ಹೋಗಿ ಪಡೆಯುವ ಭಾಗ್ಯವೇನು?'

'ನೀನೇ ಹೇಳಿದೆಯಲ್ಲಾ?'

ವೀಣೆಯು ಸ್ವಲ್ಪ ಹೊತ್ತು ಗಂಭೀರ ಚಿಂತೆಯಲ್ಲಿ ಮುಳುಗಿದಳು. ಅನಂತರ ತಟ್ಟನೆ ನುಡಿದಳು: "ಹೌದು, ನೀನು ಹೋಗಲೇಬೇಕು! ನಿನ್ನಂತೆಯೇ ವಿವಶಳಾಗಿ ನಿನ್ನನ್ನು ಹೊರದೂಡುವ ಪ್ರಸಂಗವು ನನಗೆ ಬಂದಿರುತ್ತದೆ. ಹಿಂದಿನಿಂದಲೂ ನೀನು ವಿಶಾಲಹೃದಯದವಳಾಗಿರುತ್ತೀ. ನೀನು ಮಾಡುತ್ತಿರುವ ತ್ಯಾಗವು ನನ್ನಿಂದ ಎಂದಿಗೂ ಸಾಧ್ಯವಿಲ್ಲ. ಇರಲಿ. ಶಾಲಿ, ನಿನ್ನ ವಿಚಾರವನ್ನು ಬಿಟ್ಟುಕೊಡದೆ ಮನೆಯನ್ನು ಬಿಡುತ್ತಿರುವೆಯಲ್ಲಾ. ಅದಕ್ಕಾಗಿಯಾದರೂ ನಾನು ನಿನ್ನ ಋಣಿಯೇ ಸರಿ. ಆದರೆ, ನನ್ನ ಒಂದು ಬೇಡಿಕೆಯನ್ನಾದರೂ ಮನ್ನಿಸುವೆಯಾ?"

'ಅದಾವುದು?'

'ಅವರು ಹಿಂದಿರುಗಿದ ಮೇಲೆ, ನೀನವರನ್ನು ಭೇಟಿಯಾಗಲು ಬಯಸಬಾರದು! ಏಕೆಂದರೆ, ಹಾಗೆ ಮಾಡುವೆಯಾದರೆ, ನಿನ್ನ ಇಷ್ಟು ದೊಡ್ಡ ತ್ಯಾಗವೂ ನಿಷ್ಫಲವಾಗಬಹುದು! ಶಾಲಿ, ನೀನು ಮಾಟಗಾತಿ! ಚಿಕ್ಕಂದಿನಿಂದಲೂ ಅವರ ಒಲುಮೆ ನಿನ್ನಲ್ಲಿಯೆ! ನಿನ್ನ ಅಕ್ಕನಿಗಾಗಿ, ತಬ್ಬಲಿಯಾದ ನಿನ್ನನ್ನು ಸಲಹಿಸಿದ ನೆನಹಿಗಾಗಿ, ಇದೊಂದಾದರೂ ಮಾಡುವೆಯಾ?'

ಶೈಲಜೆಯು ಅರ್ಥವಿಲ್ಲದ ನಗುವೊಂದನ್ನು ನಕ್ಕುಬಿಟ್ಟಳು. ಕೊನೆಗೆ ಕಣ್ಣುಮುಚ್ಚಿ 'ಹಾಗೆಯೇ ಆಗಲಿ!' ಎಂದಳು.

ವೀಣೆಯು ಗಟ್ಟಿಯಾಗಿ ಶೈಲಜೆಯನ್ನು ತಬ್ಬಿಕೊಂಡಳು.

೪

ಶೈಲಜೆಯು ಮನೆಬಿಟ್ಟ ಎಂಟನೆ ದಿನದಲ್ಲೇ ಮುರಲಿಯು ಹಿಂದಿರುಗಿದನು. ಮನೆಯಲ್ಲಾದ ಈ ಭಯಂಕರ ವಿಷಯದ ವರ್ತಮಾನವವನಿಗೆ ತಿಳಿಯುತ್ತಲೇ ಆವನು ಓಡೋಡಿಯೂ ಬಂದಿದ್ದನು. ಬಂದವನೇ ಎಂದಿಗಿಂತ ಹೆಚ್ಚಿನ ಧೈರ್ಯದಿಂದವನು ವೀಣೆಗೆ ಕೇಳಿದ ಪ್ರಶ್ನೆಯೆಂದರೆ 'ಏನಾಯಿತು, ಶೈಲಜೆಯು ಮನೆಬಿಟ್ಟುದೇಕೆ?' ಇಷ್ಟೆ. ವೀಣೆಯು ತಲೆಯನ್ನು ತಗ್ಗಿಸಿ ಹೇಳಿದಳು. 'ಮೊದಲು ನಿಮ್ಮ ಕೆಲಸಗಳನ್ನು ನೆರವೇರಿಸಿಕೊಳ್ಳಿ. ಆ ಮೇಲೆ ನಿಧಾನವಾಗಿ ಹೇಳುತ್ತೇನೆ. ಸ್ವಲ್ಪ ದರದಲ್ಲಿ ಹೇಳುವ ಸಂಗತಿಯಲ್ಲವದು'.

ಮುರಳಿಗೆ ಉತ್ಕಂಠಿಯೇನೋ ತಡೆಯಲಾರದಷ್ಟಿತ್ತು. ಆದರೆ, ವೀಣೆಯ ಸ್ವಭಾವವನ್ನರಿತ ಆವನು ಖಿನ್ನಮನಸ್ಕನಾಗಿ ತನ್ನ ಸ್ನಾನ ಪಾನಾದಿಗಳಿಗೆ ಹೋದನು. ಮನೆಯಲ್ಲೆಲ್ಲಾ ನಿಶ್ಶಬ್ದತೆಯಿತ್ತು. ಸೇವಕರನ್ನು ಕೇಳಿ ನೋಡಿದಾಗ ಆವರು ತಮಗೇನೂ ತಿಳಿದಿಲ್ಲನೆಂದು ಸಂಜ್ಞೆಯಿಂದಲೇ ತಿಳಿಸಿದರು. ಹೇಗೆ ಹೇಗೋ ಸ್ನಾನ, ಊಟದ ಶಾಸ್ತ್ರಮಾಡಿ ಮುರಲಿಯು ವೀಣೆಯ ಕೋಣೆಗೆ ಬಂದನು. ವೀಣೆಯು ಎದ್ದುನಿಂತಳು.

'ವೀಣಾ?'

ವೀಣೆಯು ಮೌನ.

'ನನ್ನ ಮನಸ್ಸು ಬಹಳ ಕಳವಳಗೊಂಡಿದೆ. ದಿಟ್ಟತನವನ್ನು ಕ್ಷಮಿಸು ವೀಣಾ, ಶಾಲಿಗೆ ಮನೆಬಿಡಲು ಏನಾಯಿತು?'

'ಹೀಗೆ ಕುಳಿತುಕೊಳ್ಳಿ, ಎಲ್ಲವನ್ನೂ ಹೇಳುತ್ತೇನೆ.'

ಮುರಲಿಯು ಕುಳಿತುಕೊಳ್ಳಲು ವೀಣೆಯೆಂದಳು, ನನ್ನೊಂದು ಬೇಡಿಕೆಯಿದೆ. ಶೈಲಜೆಯು ಮನೆಬಿಡುವ ವಿಷಯವನ್ನು ತಿಳಿಯುವ ಮೊದಲು ನೀವು ನನ್ನ ಬೇಡಿಕೆಯನ್ನು ಮನ್ನಿಸಬೇಕು'.

ಮುರಲಿಯು ಆಶ್ಚರ್ಯದಿಂದ, 'ವೀಣಾ, ನನ್ನಲ್ಲಿ ಬೇಡಿಕೆಯೆ? ಕಟ್ಟಳೆಯಲ್ಲವೆ?' ಎಂದನು.

'ಇನ್ನು ಕಟ್ಟಳೆಯಿಡುವ ಕಾಲವಲ್ಲ. ಹೇಳಿ ನನ್ನ ಬೇಡಿಕೆಯನ್ನು ಮನ್ನಿಸುವಿರಾ?'

'ವೀಣಾ, ನೀನು ಹೀಗೆ ಕೇಳಬೇಕಾದ ಅಗತ್ಯವೇ ಇಲ್ಲ. ಅದೆಂತಹದಾದರೂ ನಡೆಸಿಕೊಡುವುದು ನನ್ನ ಕರ್ತವ್ಯವೇ ಆಗಿದೆ.'

'ನಾಚಿಕೆಬಿಟ್ಟು ಮಾತಾಡುತ್ತೇನೆಂದು ತಿಳಿಯಬಾರದು. ನಮ್ಮಯ್ಯನವರಿದ್ದಿದ್ದರೆ ಇಂತಹ ಪ್ರಸಂಗವು ನನ್ನ ಮೇಲೆ ಬರುತ್ತಿದ್ದಿಲ್ಲ. ಈಗ, ನನಗೆ ನಾನೇ ಯಜಮಾನಿಯೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕೇಳಿ, ನಾನು ಮದುವೆಯಾಗಬೇಕೆಂದಿದ್ದೇನೆ.'

'ಬಹಳ ಚೆನ್ನಾಯಿತು. ವೀಣಾ! ಇದೊಂದು ಶುಭವಾರ್ತೆ!'

'ಮತ್ತದನ್ನೇ ನಾನು ಶಾಲಿಗೆ ತಿಳಿಸಿದೆನು.'

'ಅವಳು ಆನಂದದಿಂದ ಕುಣಿದಿರಬಹುದು!

'ಅದೀಗ ನಿಮ್ಮ ತಪ್ಪು ತಿಳುವಳಿಕೆ!"

'ಹಾಗೆಂದರೆ?"

'ನಾನು ಮದುವೆಯಾಗುವುದು ಅವಳಅಂತರ್ಯದಲ್ಲಿ ಇಷ್ಟವಿರಲಿಲ್ಲ'

'ಅದೇಕೆ?"

'ನಾನು ಆಯ್ದುಕೊಂಡ ವರನ ವಿಷಯದಲ್ಲಿ ಅವಳ ಆತಂಕವಿದೆ."

'ಶಾಲಿಯ ಗುಣಕ್ಕದು ಶೋಭಿಸದು. ಏಕೆಂದರೆ, ಸಹಭಾಗಿಗಳನ್ನಾಯ್ದುಕೊಳ್ಳುವುದರಲ್ಲಿ ಎಲ್ಲರೂ ಸ್ವತಂತ್ರರಾಗಿರುವುದೇ ಉತ್ತಮ. ಹೇಳು, ನಿನ್ನಿಂದ ಮನಸಾ ವರಿಸಲ್ಪಟ್ಟ ಭಾಗ್ಯಶಾಲಿ ಯಾರು? ನಾನು ಸರ್ವ ಪ್ರಯತ್ನದಿಂದಲೂ ಶಾಲಿಯ ಮನಸ್ಸನ್ನು ತಿರುಗಿಸಿ, ಈ ಶುಭ ಕಾರ್ಯವನ್ನು ನೆರವೇರಿಸಿ ಕೊಡುತ್ತೇನೆ."

'ನಿಜವಾಗಿಯೂ? ಮಾತು ಕೊಡಿ!"

'ಸಂಶಯವೆ, ನನ್ನಲ್ಲೂ ಸಂಶಯವೆ, ವೀಣಾ? ಇದೋ, ಕುಲದೇವರಾಣೆಗೂ ನಡೆಸಿಕೊಡುವೆನು. ವರನಾರು?"

ವೀಣೆಯು ತಲೆತಗ್ಗಿಸಿಕೊಂಡು.

'ಹೆಸರೆತ್ತಲು ನಾಚಿಕೆಯೆ, ವೀಣಾ? ಪರಿಚಯವಾದರೂ ಕೊಡು."

ವೀಣೆಯು ತಟ್ಟನೆ ಮುರಲಿಯ ಮುಖವನ್ನು ವಿಚಿತ್ರ ದೃಷ್ಟಿಯಿಂದ ನೋಡಿದಳು. ನಾಲ್ಕು ಕಣ್ಣುಗಳೂ ಒಂದುಗೂಡಿದವು ಮುರಲಿಯ ಹೃದಯದಲ್ಲಿ ಅದೇನೋ ವೇದನೆಯಾಯಿತು.

'ಅರ್ಥವಾಯಿತೆ?' ವೀಣೆಯು ಕೇಳಿದಳು.

ಮುರಲಿಯು ಸ್ವಲ್ಪ ಹೊತ್ತು ಸುಮ್ಮನಿದ್ದು, ಕೊನೆಗೆಂದನು. 'ಅರ್ಥವಾದರೂ ಅದು ನಂಬಲಸಾಧ್ಯ! ವೀಣಾ, ಹೇಳು, ಬಾಯಿಬಿಟ್ಟು ಹೇಳು.'

'ನೀವೇ, ಅದು ನೀವೇ!'

ಮುರಲಿಯು ತಟ್ಟನೆ ಎದ್ದುನಿಂತು, ವೀಣೆಯ ಬಳಿಗೆ ಹೋಗಿ, ಅವಳ ಕೈ ಹಿಡಿದನು.

'ವೀಣಾ, ಇದೆಂದಾದರೂ ನಡೆಯಬಹುದೆ? ನಾನಷ್ಟು ಭಾಗ್ಯ ಶಾಲಿಯೆ? ಆಶ್ರಿತ ಅನಾಥನ ಮೇಲೆ ಇಷ್ಟೊಂದು ದಯೆಯೆ?'

'ಕೇಳಿ, ಪ್ರಿಯಾ, ನೀವೇ ನನ್ನ ಸರ್ವಸ್ವ. ಅನಾಥರಾದರೇನು, ತಮ್ಮಲ್ಲಾವ ಕೊರತೆಯಿದೆ? ಒಂದು ವೇಳೆ ಇದ್ದರೂ ಕೂಡ ಪ್ರೇಮವು ಪಾತ್ರಾಪಾತ್ರವನ್ನು ವಿವೇಚಿಸಲಾರದು. ನಿಮ್ಮೊಂದು ಪ್ರೇಮಕ್ಕಾಗಿ ಶಾಲಿಯನ್ನು ತಿರಸ್ಕರಿಸಬೇಕಾಗಿ ಬಂದರೂ, ನಿಮ್ಮ ಒಪ್ಪಿಗೆಯನ್ನು ನೋಡಿ, ಬಹಳ ಸಮಾಧಾನವಾಗುತ್ತಿದೆ.'

ಮುರಲಿಯು ಸ್ವಲ್ಪ ಹೊತ್ತು ಯೋಚಿಸಿ, 'ಶಾಲಿಯ ಅಭಿಪ್ರಾಯವು ನಿಜವಿದೆ, ವೀಣಾ! ಅವಳ ಸ್ವಭಾವು ಬಹಳ ಗಂಭೀರ. ನೀನು ಹಟವಾದಿನಿಯಾದುದರಿಂದಲೇ ನನ್ನ ಮೇಲೆ ಕೃಪೆ ಮಾಡುವ ಮನಸ್ಸು ಮಾಡಿದೆ; ಇದೇ ಕಾರಣಕ್ಕಾಗಿ ಶಾಲಿಯು ಸಿಟ್ಟಾಗಿ ಹೋದಳಲ್ಲವೆ? ಅವಳು ಹೋಗಿರುವಳಾದರೂ ಎಲ್ಲಿಗೆ? ಅವಳನ್ನು ಕಂಡು, ನಾನವಳನ್ನು ಈ ವಿಷಯ ಒಪ್ಪಿಗೆಗಾಗಿ ಬೇಡಲೆ? ಅವಳಿಗೆ ನನ್ನಲ್ಲಿ ಬಹಳ ಅಭಿಮಾನ ವಿದೆ. ನನ್ನ ಬೇಡುವಿಕೆಯನ್ನು ಅಲ್ಲಗಳೆಯಲಾರಳೆಂದು ನನಗೆ ಧೈರ್ಯ ವಿದೆ' ಎಂದನು.

'ಬೇಡ, ಬೇಡ! ನನ್ನಾಣೆಯಿದೆ! ಸ್ವಲ್ಪ ಕಾಲ ಕಳೆಯಲಿ, ಆಗ ಅವಳ ಮನಸ್ಸು ತಾನಾಗಿ ಮಾರ್ಪಡಬಹುದು; ಎಳೆಯ ವಯಸ್ಸು. ಸರಿ ಹೋಗದಿರಲಾರಳು!"

'ಜನರೇನಂದಾರು? ಅವಳ ಒಪ್ಪಿಗೆಯಿಲ್ಲದೆ, ಅವಳಿಲ್ಲದಿರುವಾಗ ....?"

"ಜನರಿಗಾಗಿ ಬದುಕುವುದರಲ್ಲಿ ಅರ್ಥವಿಲ್ಲ!"

ಮುರಲಿಯು ಒಂದು ಹೊಸ ಅನುಭವದಿಂದ ಪುಲಕಿತನಾದನು. ಇಬ್ಬರೂ ಮೌನದಿಂದ ಎಷ್ಟೊತ್ತು ಕಳೆದರೊ!

೫

ಬಾನ ಹಳ್ಳಿಯು ಹರಿಹರಯ್ಯನವರ ಸ್ವಂತದ ಒಂದು ಕುಗ್ರಾಮ ವಾಗಿತ್ತು. ಕೆಲ ಬಡ ರೈತರೂ, ಹೊಲೆ, ಮಾದಿಗರೂ ಅಲ್ಲಿಯ ನಿವಾಸಿ ಗಳು. ಅದು ಊರಿಗೆ ಏಳು ಮೈಲು ದೂರದಲ್ಲಿತ್ತು. ರೈತರೇನೋ, ಹೊಲಗದ್ದೆಗಳಿಂದ ತಮ್ಮ ನಿರ್ವಾಹ ಮಾಡಿಕೊಳ್ಳುತ್ತಿದ್ದರು. ಬಡ ಅಂತ್ಯಜರ ಸ್ಥಿತಿಯು ಬಹಳ ಕೇವಲವಾಗಿತ್ತು. ಗುರಿಯಿಲ್ಲದ ಬಾಳನ್ನು ಪಶುಗಳಂತೆ ಸಾಗಿಸದೆ ಅವರಿಗೆ ಗತ್ಯಂತರವಿರಲಿಲ್ಲ.

ಒಬ್ಬರ ದುಃಖದಿಂದ ಮಗದೊಬ್ಬರ ಸುಖವುಂಟಾಗುವುದು ವಿಧಿ ನಿಯಮವೆಂದು ತೋರುತ್ತದೆ. ಆ ಕುಗ್ರಾಮದ ಭಾಗ್ಯೋದಯವಾ ಯಿತು. ಸ್ವಾರ್ಥವೊಂದಿಲ್ಲದಿರುತ್ತಿದ್ದರೆ ಪ್ರಪಂಚವು ಈಗಿನ ಸ್ಥಿತಿಯಲ್ಲಿ ರುತ್ತಿದ್ದಿಲ್ಲ. ಶೈಲಜೆಯೊಬ್ಬಳ ಸ್ವಾರ್ಥತ್ಯಾಗದಿಂದ ಇಡೀ ಗ್ರಾಮವೇ ಸುಖಶಾಂತಿಯಿಂದ ನಲಿವಂತಾಯಿತು. ಶೈಲಜೆಯು ಮನಸ್ಸು ಮಾಡಿ ದ್ದರೆ, ವೀಣೆಯಂತೆ ಹಟವಾದಿಯಾಗಿದ್ದಿದ್ದರೆ, ಆಕೆ ಮುರಲಿಯೊಂದಿಗೆ ನಲಿಯುಬಹುದಾಗಿತ್ತು. ಮುರಲಿಯು ವಸ್ತುಸ್ಥಿತಿಯನ್ನು ತಿಳಿದಿದ್ದರೆ ಶೈಲಜೆಗೇ ಒಲಿಯುವ ಸಂಭವವು ಹೆಚ್ಚಿತ್ತು. ಆದರೆ, ಇಲ್ಲ, ಅವಳು ಅಕ್ಕನ ಕಟ್ಟಳೆಯ ಮೇರೆಗೆ, ಬಾನಹಳ್ಳಿಗೇ ನೇರವಾಗಿ ಬಂದಿದ್ದಳು. ಅಲ್ಲಿಯ ಜನರ ದೀನಸ್ಥಿತಿಗಾಗಿ ಮರುಗಿದ್ದಳು ಆದರೆ ಊರನ್ನು ಸೇರು ತ್ತಲೆ ಆ ಹಳ್ಳಿಯ ಮರುವೆಯಾಗಿ ಹೋಗುತ್ತಿತ್ತು ಬಾಳು ಚಿಗುರಿ ಫಲಬಿಡುವ ಹೊತ್ತಿಗೆ, ಮೂಲವೇ ಕಡಿದು ಹೋದಾಗ ಅವಳಿಗೆ ಜೀವನ ದಲ್ಲೇ ಜಿಗುಪ್ಸೆಯುಂಟಾಯಿತು. ತನ್ನ ಜೀವನದ ಹಿಂದಿನ ನೆನಪುಗ ಳೊಂದೊಂದಾಗಿ ಬಂದಾಗ ಅವಳಿಗೆ ಬಾನಹಳ್ಳಿಯು ಕಣ್ಣುಕಟ್ಟಿತು. ಎಲ್ಲಾದರೂ ಹೋಗಿ ಅವಳು ವಾಸಿಸಬೇಕಿತ್ತು. ಬಾನಹಳ್ಳಿಯು ಅವಳ ಪಾಲಿಗೆ ಬಿದ್ದುದಾಗಿದ್ದಿತು. ಆದಕಾರಣ ಅವಳು ನೇರವಾಗಿ ಅಲ್ಲಿಗೆ ಬಂದು ವಾಸಿಸತೊಡಗಿದಳು.

ಕೆಲಸವಿಲ್ಲದೆ ಎಂಜಲೆಲೆಗಾಗಿ ಅಲೆಯುತ್ತಿದ್ದ ಅಂತ್ಯಜರಿಂದವಳು

ಅತ್ಯುತ್ತಮ ಬಿತ್ತದ ಸಾಮಾನುಗಳನ್ನು ಒತ್ತಾಯದಿಂದ ಕಲಿಸಿ ತಯಾರಿಸಿಕೊಂಡುದಲ್ಲದೆ, ಅವುಗಳನ್ನು ಮಾರಿಸಿ ಲಾಭವನ್ನುಂಟುಮಾಡಿಕೊಟ್ಟಳು. ರೈತರ ಹೆಂಗಸರನ್ನು ನೂಲುವುದಕ್ಕೆ ಹಚ್ಚಿದಳು. ಅವರೆಲ್ಲರ ಮಕ್ಕಳಿಗೆ ತಾನೇ ಓದುಬರೆಹವನ್ನು ಕಲಿಸತೊಡಗಿದಳು. ಸೋಮಾರಿತನದಿಂದ ಕಾಲಕಳೆಯುತ್ತಿದ್ದವರು, ತಮ್ಮ ಕೆಲಸದಿಂದ ಸಿಕ್ಕುವ ಲಾಭದಿಂದ ದ್ವಿಗುಣ ಉತ್ಸಾಹಿಗಳಾದರು. ಉತ್ಸಾಹವೇ ಏಳಿಗೆಯ ಮೂಲ ಮಂತ್ರವಲ್ಲವೆ?

ಹಗಲೇನೋ ಹೀಗೆ ಕಳೆಯುತ್ತಿತ್ತು; ಆದರೆ, ಶೈಲಜೆಗೆ ಮನಃಶಾಂತಿಯಿರಲಿಲ್ಲ. ಅವಳ ಸುತ್ತಮುತ್ತ ಪ್ರೇಮಮಯ ಜನರಿದ್ದರು. ಆದರೆ, ಅವಳ ಹೃದಯದಲ್ಲಿ ಅದರ ಸಿಂಚನೆಯಾಗಿರಲಿಲ್ಲ. ಆ ಅಮೃತ ಕಲಶವು ಅಕ್ಕನ ವಶವಾಗಿತ್ತು. ಮೊದಲು ಕೆಲದಿನಗಳವರೆಗೆ ಅವಳು ಮುರಲಿಯ ಆಗಮನವನ್ನೆದುರುನೋಡಿದಳು. ಆದರೆ ವ್ಯರ್ಥ. ಆತನು ವೀಣೆಯ ಸಹವಾಸದಲ್ಲಿ ಪ್ರಪಂಚವನ್ನೇ ಮರೆತಿರುವುದವಳಿಗೆ ತಿಳಿದು ಬಂತು. ವೀಣೆಯ ಸಾಮರ್ಥ್ಯವೇ ಅಂತಹದು! ಕಾಲಕಳೆದಂತೆ ಅವಳು ಶತಪ್ರಯತ್ನದಿಂದ ತನ್ನ ಹೃದಯದುರಿಯನ್ನು ಶಾಂತಪಡಿಸಲು ನೋಡಿದಳು. ಮೆದುಳಿನ ಯೋಚನೆಗೆ ಅವಕಾಶವನ್ನೇ ಕೊಡದೆ ಏನಾದರೊಂದು ಕೆಲಸದಲ್ಲಿ ಮೈಮರೆಯುತ್ತಿದ್ದಳು. ಅಭ್ಯಾಸಬಲದಿಂದ ಸಾಧ್ಯವಾಗದ ವಿಷಯವಾವುದು? ವರ್ಷದೊಳಗೆ ಅವಳು, ತಾನು ಈ ರೀತಿಯ ಬಾಳುವೆಗಾಗಿಯೇ ವಿಧಿಯಿಂದ ನಿಯಮಿಸಲ್ಪಟ್ಟವಳೆಂದು ತಿಳಿದು ಅದರಲ್ಲೇ ತೃಪ್ತಿಗೊಂಡಳು. ಶೈಲಜೆಯೀಗ ಬಾಹ್ಯಪ್ರಪಂಚದ ಎಲ್ಲಾ ಭಾವನೆಗಳಿಗೂ ಹೊರಗಾಗಿ ತನ್ನದೇ ಆದೊಂದು ಪ್ರಪಂಚವನ್ನು ಸೃಷ್ಟಿಸಿ ಸುಖಿಯಾದಳು — ಹೌದು, ಸುಖಿಯಾದಳು.

ಅದೊಂದು ದಿನ ಬೆಳಿಗ್ಗೆ ಶೈಲಜೆ ತನ್ನ ಮನೆಯ ಅಂಗಳದಲ್ಲಿ ಮಕ್ಕಳನ್ನು ಕೂಡಿಸಿ ಪಾಠಹೇಳುತ್ತ ಕುಳಿತಿದ್ದಳು. ಆಗ, ಒಕ್ಕಲಿಗ ಪುಟ್ಟನು ಗಾಬರಿಯಿಂದ ಅಲ್ಲಿಗೆಬಂದು ಕೈಮುಗಿದುನಿಂತನು. ಶೈಲಜೆಯು ಕೇಳಿದಳು: 'ಓಹೋ ಪುಟ್ಟ! ನೀನು ನಿನ್ನೆ ಸಾಯಂಕಾಲ ಊರಿಗೆ ಹೋಗಿದ್ದೆಯಲ್ಲವೆ? ಏನಾದರೂ ವಿಶೇಷವುಂಟೆ?' ಪುಟ್ಟನು ನಡುಗುವ ಸ್ವರದಿಂದ ಹೇಳಿದನು: 'ಮುರ್ಲಪ್ನೋರು, ತಾಯಿ, ಕಾರು ಡಾಸಾಯಿ

ತಂತೆ; ಆಸ್ಪತ್ರೆಯಲ್ಲಿದ್ದಾರೆ. ನಾನೋಗಿ ನೋಡ್ಕೊಂಡ್ಬಂದೆ; ಜೋದ್ಸೇ ಇಲ್ಲಾ. ವೀಣಮ್ನೋರು ಭಾಳ ಸೊರ್ಗಿ ಹೋಗಿಧಾರೆ, ಅಳ್ತಾ ಕೂತ್ಕೊಂಡಿದ್ರು'.

'ಏನು, ಏನು? ಮುರಲಿ? ಗಾಯಗೊಂಡು ಆಸ್ಪತ್ರೆಯಲ್ಲಿರುವರೆ?' ಶೈಲಜೆ ಎದ್ದು ನಿಂತಳು.

'ಹೌದು ತಾಯಿ, ನಿನ್ನೆ ಸಾಯಂಕಾಲ ಪೇಟಿಗೋಗಿ ಬರ್ವಾಗ ಕಾರು ಡಾಸಾಯಿತಂತೆ. ಮೈಯೆಲ್ಲಾ ಜಜ್ಜೋಗಿ ಪಟ್ಟಿ ಕಟ್ಟಿಧಾರೆ'.

ಶೈಲಜೆಯು ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡಳು; ಅಲ್ಲಿ ನಿಲ್ಲಲಾಗಲಿಲ್ಲ. ಮನೆಯೊಳಹೊಕ್ಕು ಮನಸ್ಸೀ ಅತ್ತುಬಿಟ್ಟು ಹೃದಯವನ್ನು ಹಗುರಾಗಿಸಿದ ನಂತರ ಹೊರಬಂದು ಕೇಳಿದಳು: 'ಪುಟ್ಟ ಬಹಳ ಗಾಯಗಳಾಗಿವೆಯೆ?'

'ಹೌದು ತಾಯಿ, ನಿನ್ನೆಯಿಂದ ಜೋದ್ಸೇ ಇಲ್ಲಾ. ನೆತ್ರು ಭಾಳ ಹೊರ್ಹೋಗಿರೋದ್ರಿಂದಾ.......'

'ತಾಳು ಪುಟ್ಟ, ಕುದುರೆಯನ್ನು ಗಾಡಿಗೆ ಕಟ್ಟಹೇಳು; ನಾನು ಅಲ್ಲಿಗೆ ಹೋಗುತ್ತೇನೆ'.

ಗಾಡಿಯು ಸಿದ್ಧವಾಯಿತು; ಶೈಲಜೆಯು ಸೇವಕರನ್ನೆಚ್ಚರಿಸಿ ಒಬ್ಬ ಹೆಂಗಸೊಂದಿಗೆ ಗಾಡಿಯಲ್ಲಿ ಕುಳಿತಳು. ಎರಡು ತಾಸಿನೊಳಗೆ ಆಸ್ಪತ್ರೆಯನ್ನು ತಲುಪಿದಳು. ರೋಗಿಗಳ ವಿಭಾಗದಲ್ಲಿ ಎಲ್ಲೆಲ್ಲೂ ನಿಶ್ಶಬ್ದ. ಶೈಲಜೆಯು ಅಲ್ಲಿದ್ದ ದಾದಿಯನ್ನು ಮುರಲಿಯ ವಿಷಯವಾಗಿ ಕೇಳಿ ತನ್ನ ಪರಿಚಯ ಕೊಟ್ಟಳು. ದಾದಿಯು ಅವಳನ್ನು ಮುರಲಿಯ ಕೋಣೆಗೆ ಕರೆದುಕೊಂಡು ಹೋದಳು. ಅವನು ಮಂಚದ ಮೇಲೆ ಪಟ್ಟಿಗಳೊಂದಿಗೆ ನಿಶ್ಚೇಷ್ಟಿತನಾಗಿ ಬಿದ್ದು ಕೊಂಡಿದ್ದನು. ಕಾಲದೆಸೆಯಲ್ಲಿ ವೀಣೆಯು ಕುಳಿತಿದ್ದಳು; ದಾದಿಯೊಬ್ಬಳು ತಲೆದೆಸೆಯಲ್ಲಿದ್ದಳು; ಮತ್ತೊಬ್ಬಳು ಅಲ್ಲೇ ಸ್ವಲ್ಪದೂರದಲ್ಲಿ ಏನೋ ಔಷಧಿಯನ್ನು ತಯಾರಿಸುತ್ತಿದ್ದಳು. ಶೈಲಜೆಯು ಕೋಣೆಯೊಳ ಹೊಕ್ಕೊಡನೆ ವೀಣೆಯು ತಿರುಗಿ ನೋಡಿದಳು. ಶೈಲಜೆಯನ್ನು ಕಾಣುತ್ತಲೆ ಅವಳು ಮಗುವಿನಂತೆ ಓಡಿಹೋಗಿ, ಅವಳನ್ನಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. 'ಶಾಲಿ, ನಿನ್ನ ಹೃದಯ ಜ್ವಾಲೆಯ ಪರಿಣಾಮವಿದು ಶಾಲಿ! ಇವರಿಗೇನಾದರೂ ಆದರೆ ನಾನೇನು

ಮಾಡಲಿ? ನನಗೀ ಅವಸ್ಥೆ ಬರುವುದು ನ್ಯಾಯವಿತ್ತು—ಅವರನ್ನೇಕೆ ದೇವರು ಈ ಕಷ್ಟಕ್ಕೊಳಪಡಿಸಿದನು? ಶಾಲಿ, ನನಗೆ ಹುಚ್ಚು ಹಿಡಿಯುವಂತಿದೆ'. ವೀಣೆಯು ಬೊಬ್ಬಿಟ್ಟಳು. ಶೈಲಜೆಯು ವೀಣೆಯ ಬಾಯಿಗೆ ಕೈಯನ್ನಿಟ್ಟು ಮೃದುಸ್ವರದಿಂದ ನುಡಿದಳು: 'ಅಕ್ಕಾ, ಸಮಾಧಾನಗೊಳ್ಳು; ಹೀಗೆ ಮನೆಮಾತುಗಳನ್ನು ಗಟ್ಟಿಯಾಗಿ ಹೇಳಿಕೊಳ್ಳಬಾರದು. ಇದು ಆಸ್ಪತ್ರೆ ನೋಡು! ದೇವರು ದೊಡ್ಡವನು; ಆವನಿಷ್ಟಪಟ್ಟರೆ ಭಾವಯ್ಯನವರು ಗುಣ ಹೊಂದಬಹುದು'.

'ಇಲ್ಲ ಶಾಲಿ, ಡಾಕ್ಟರ್ ಹೇಳಿಯಾಗಿದೆ—ಬದುಕುವುದು ಕಷವೆಂದು. ರಕ್ತಸ್ರಾವವು ವಿಪರೀತವಾಗಿರುವುದರಿಂದ ಸಂದೇಹವೆಂದಿರುವರು! ಶಾಲಿ, ನಾನು ಪಾಪಿ, ರಾಕ್ಷಸಿ, ಕೇವಲ ಸ್ವಾರ್ಥಳು. ಕೊನೆಗೂ ನನ್ನ ಅವಸ್ಥೆ ಹೀಗಾಗಬೇಕೆ? ಇಂತಹ ಶಾಸ್ತಿಯೆ?'

'ಸ್ಯಾಲೆನ್ಸ್, ಪ್ಲೀಸ್!' ದಾದಿಯು ನುಡಿದಳು.

ಶೈಲಜೆಯು ವೀಣೆಯನ್ನು ಬಿಟ್ಟು ಸರಿದು, ಮುರಲಿಯ ಬಳಿಯ ದಾದಿಯನ್ನು ತನ್ನೆಡೆ ಬರುವಂತೆ ಸಂಕೇತ ಮಾಡಿದಳು. ಸ್ವಲ್ಪ ಹೊತ್ತು ಮೆಲ್ಲಗೆ ಏನೇನೋ ಮಾತಾಡಿದ ಮೇಲೆ ದಾದಿಯು ಹೊರಕ್ಕೆ ಹೋದಳು. ಹತ್ತು ನಿಮಿಷಗಳೊಳಗೆ ಪುನಃ ಡಾಕ್ಟರರೊಂದಿಗೆ ಅವಳು ಹಿಂತಿರುಗಿದಳು. ಡಾಕ್ಟರ್ ಬರುತ್ತಲೇ ಶೈಲಜೆಯನ್ನು ನೋಡಿ, 'ನೀವು ಈ ರೋಗಿಗೆ ಏನಾಗಬೇಕು?' ಎಂದರು. ಶೈಲಜೆಯು ಶಾಂತ ಸ್ವರದಿಂದ ವೀಣೆಯನ್ನು ತೋರಿಸಿ, 'ಈಕೆಯ ತಂಗಿ' ಎಂದಳು.

'ನೀವು ಮನಃಪೂರ್ವಕವಾಗಿ ನಿಮ್ಮ ರಕ್ತದಾನವನ್ನು ಮಾಡುವುದಾಗಿ ನನಗೆ ಹೇಳಿ ಕಳಿಸಿದಿರಾ?'

'ಹೌದು, ಮನಃಪೂರ್ವಕವಾಗಿ; ಕೇವಲ ನನ್ನಿಚ್ಛೆಯಿಂದ!

'ಶಾಲಿ, ಏನು? ನೀನು ದೇವಿ! ನನ್ನ ದೇವಿ!' ವೀಣೆಯು ಶೈಲಜೆಯನ್ನಪ್ಪಿಕೊಂಡಳು. ಡಾಕ್ಟರ್ ಶೈಲಜೆಯ ರಕ್ತವನ್ನು ಪರೀಕ್ಷಿಸಿ ತೃಪ್ತಿಪಟ್ಟನಂತರ ಮುರಲಿಯ ಮಂಚದ ಬಳಿಯಲ್ಲೇ ಮತ್ತೊಂದು ಮಂಚವಿರಿಸಲ್ಪಟ್ಟಿತು. ಶೈಲಜೆಯು ಅದರಲ್ಲಿ ಮಲಗಿದಳು

ಶೈಲಜೆಯು ದಾದಿಯಿಂದ ಮುರಲಿಯ ದೇಹದಲ್ಲಿ ಶುದ್ಧವಾದ ರಕ್ತವನ್ನು ಇಂಜಕ್ಷನ್ ಮೂಲಕ ಸೇರಿಸಿದರೆ ಆ ಬಲದಿಂದ ಆತನ ದೇಹ

ದಲ್ಲಿ ಚೈತನ್ಯವುಂಟಾಗಿ ಬದುಕುವ ಸಂಭವವಿದೆಯೆಂದು ತಿಳಿದಳು. ಒಡನೆ ತಾನು ತನ್ನ ರಕ್ತವನ್ನು ಕೊಡುವುದಾಗಿ ಡಾಕ್ಟರರಿಗೆ ಹೇಳಿ ಕಳಿಸಿದ್ದಳು.

ಡಾಕ್ಟರ್ ಪ್ರಜ್ಞೆ ತಪ್ಪಿಸಿ ಶೈಲಜೆಯ ತೋಳಿಗೆ ಸೂಜಿಯನ್ನು ನೆಟ್ಟು ರಕ್ತವನ್ನು ಹೀರಿ ಮುರಲಿಯ ದೇಹಕ್ಕೆ ಬಿಡತೊಡಗಿದರು. ಒಂದು ಮಟ್ಟಕ್ಕೆ ಬಂದಾಗ, ಅವರು ಶೈಲಜೆಯ ತೋಳಿಗೆ ಮದ್ದು ಹಚ್ಚಿ ಪಟ್ಟಿ ಕಟ್ಟಿದರು. ಅವಳನ್ನೆಚ್ಚರಿಸಿ ಚೇತನದಾಯಕ ಪಾನೀಯವನ್ನು ಕುಡಿಸಿದರು. ಅವಳ ಸತೇಜ ಕಣ್ಣುಗಳು ಇದೀಗ ನಿತ್ರಾಣವನ್ನು ಸೂಚಿಸುತ್ತಿದ್ದುವು.

ಡಾಕ್ಟರ್ ಸೂಚನೆಯ ಮೇರೆಗೆ ಶೈಲಜೆಯನ್ನು ಪಕ್ಕದ ಕೋಣೆಯಲ್ಲಿರಿಸಿದರು. ವೀಣೆಯು ಗಾಬರಿಯಿಂದ ಕಂಗಾಲಾಗಿದ್ದಳು; ಮೆಲ್ಲಗೆ ಶೈಲಜೆಯ ಬಳಿಗೆ ಹೋಗಿ, 'ಶಾಲಿ, ನನ್ನ ಭಾಗ್ಯ ದೇವತೆ!' ಎಂದಳು. ಶೈಲಜೆಗೆ ಹೆಚ್ಚಿನ ನಿತ್ರಾಣದಿಂದ ಸರಿಯಾದ ಪ್ರಜ್ಞೆ ಇರಲಿಲ್ಲ. ಅವಳು ಮೆಲ್ಲಗೆ ತನ್ನ ಕ್ಷೀಣ ದೃಷ್ಟಿಯನ್ನು ವೀಣೆಯ ಕಡೆಗೆ ತಿರುಗಿಸಿದಳು. ವೀಣೆಯು ಬಿಕ್ಕಿ ಬಿಕ್ಕಿ ಅತ್ತಳು.

ದಾದಿಯು ಶೈಲಜೆಯನ್ನು ತೊಂದರೆಪಡಿಸಬಾರದೆಂದೂ, ಅವಳಿಗಾವ ಅಪಾಯವೂ ಇಲ್ಲವೆಂದೂ ಅಲ್ಲದೆ ಮುರಲಿಯೂ ಇನ್ನು ಬದುಕುವನೆಂದೂ ತಿಳಿಯಪಡಿಸಿ ಅವಳಿಗೆ ಸಮಾಧಾನವುಂಟುಮಾಡಿದಳು. ಒಂದೆರಡು ತಾಸುಗಳಲ್ಲಿ ಶೈಲಜೆಯು ದಾದಿಯನ್ನು ಹತ್ತಿರ ಬರುವಂತೆ ಸಂಜ್ಞೆ ಮಾಡಿದಳು. ಅವಳು ಬರುತ್ತಲೇ, ಆಕೆ ತನ್ನ ತೋಳಿನ ಪಟ್ಟಿಯನ್ನು ತೋರಿಸುತ್ತ, 'ಇದು ಏನು?' ಎಂಬರ್ಥದಲ್ಲಿ ಮೆಲ್ಲಗೆ ಕೈಯನ್ನು ಆಡಿಸಿದಳು. ದಾದಿಯು ಅವಳ ಕೈಯನ್ನು ಮೆಲ್ಲಗೆ ಹಿಡಿದು, 'ಅಲ್ಲಾಡಿಸಬೇಡಿ, ಅಲ್ಲೇ ಸೂಜಿ ನೆಟ್ಟುದು. ಅದನ್ನಲ್ಲಾಡಿಸಿದರೆ ರಕ್ತಸ್ರಾವವಾಗಿ ಅಪಾಯವುಂಟಾಗಬಹುದು!' ಎಂದಳು. ಶೈಲಜೆಯು ಸುಮ್ಮನಾದಳು. ಸಾಯಂಕಾಲ ಪುನಃ ಶೈಲಜೆಯು ದಾದಿಯನ್ನು 'ಮುರಲಿಯ ಸ್ಥಿತಿಯು ಹೇಗಿದೆ?' ಎಂದು ಕ್ಷೀಣಸ್ವರದಿಂದ ಅಸ್ಫುಟವಾಗಿ ಕೇಳಿದಳು. 'ಸುಧಾರಿಸಿದೆ'ಯೆಂದು ದಾದಿಯು ನುಡಿದಾಗ ಶೈಲಜೆಯು ತೃಪ್ತಿಯ ಶ್ವಾಸವನ್ನು ಬಿಟ್ಟಳು. ಸ್ವಲ್ಪ ಹೊತ್ತಿನಲ್ಲಿ ಅವಳಿಗೆ ನಿದ್ದೆ ಬಂದಿತು.

ಮಧ್ಯರಾತ್ರಿಯಲ್ಲಿ ಶೈಲಜೆಯು ಎಚ್ಚತ್ತಳು. ಪಕ್ಕದಲ್ಲಿದ್ದ ದಾದಿಯನ್ನು

ಕರೆದು ಮುರಲಿಯ ವಿಷಯವಾಗಿ ಕೇಳಿದಳು. ಮುರಲಿಗೆ ಪ್ರಜ್ಞೆ ಬಂದಿರುವುದಾಗಿಯೂ ಇನ್ನಾವ ಅಪಾಯವೂ ಇಲ್ಲವೆಂದು ಡಾಕ್ಟರ್ ಹೇಳಿರುವರೆಂದೂ ಆಕೆ ತಿಳಿಸಿದಾಗ ಶೈಲಜೆಯ ತುಟಿಯುಲ್ಲೊಂದು ಹಾಸ್ಯರೇಖೆಯು ಮೂಡಿತು. ಅವಳು ಕಣ್ಣುಮುಚ್ಚಿ ಸುಮ್ಮನಾದಳು ಅವಳ ದುರ್ಬಲ ಮನಸ್ಸು ಏನೇನೋ ಚಿಂತಿಸತೊಡಗಿತು. ಹಾಗೆಯೇ ಜೊಂಪು ಹಿಡಿಯಿತು. ಮತ್ತೊಮ್ಮೆ ಕಣ್ಣುಬಿಟ್ಟಾಗ ಕೋಣೆಯಲ್ಲಿ ಯಾರೂ ಇಲ್ಲದುದನ್ನೂ ದಾದಿಯು ಕುಳಿತಲ್ಲೇ ನಿದ್ರಾವಶಳಾಗಿರುವುದನ್ನೂ ನೋಡಿ, ಅವಳ ಮನಸ್ಸಿನಲ್ಲಿ ಏನೇನೋ ಭಾವನೆಗಳುಂಟಾದುವು. "ಅಹ, ಅದೃಶ್ಯರೂಪದಿಂದ ನಾನು ನನ್ನ ದೇವರಲ್ಲಿ ಐಕ್ಯಳಾದೆ. ಈಗಲ್ಲದಿದ್ದರೂ ವೀಣೆಯ ಮನಸ್ಸಿಗೆ ಈ ಘಟನೆಯ ನೆನಪಾದಾಗಲೆಲ್ಲ ಆಕೆಗೆ ನನ್ನ ಮೇಲೆ ವೈರಾಗ್ಯ ಬರುವ ಸಂಭವವೇ ಹೆಚ್ಚು. ಇನ್ನುಳಿದು ಇದಕ್ಕಿಂತ ಮಹತ್ತಾದ ಇನ್ನಾವ ಕೆಲಸ ನನ್ನಿಂದಾಗಲಿರುವುದು? ನನ್ನ ಹೃದಯ ದೇವತೆಯ ಪುನರ್ಜೀವನದ ಶುಭ ಅವಸರದಲ್ಲಿ ಆ ಶುಭ ಧ್ಯಾನದಿಂದಲೇ ನಾನು ಪ್ರಪಂಚವನ್ನು ಬಿಡುವೆನಾದರೆ ಅದೆಂತಹ ಅಲೌಕಿಕ ಸುಖವುಂಟಾಗಬಹುದು!" ಮಿಂಚಿನಂತೆ ಈ ಭಾವನೆಗಳು ಮೂಡಿದುದೇ ತಡ, ಅವಳು ಬಲು ಪ್ರಯಾಸದಿಂದ ತನ್ನ ತೋಳಿನ ಪಟ್ಟಿಯನ್ನು ಬಿಚ್ಚಿಹಾಕಿದಳು. ಹಿಡನೆ ರಕ್ತವು ಉಕ್ಕಿ ಹರಿಯಿತು. ಶೈಲಜೆಗೆ ತನ್ನ ಹಾಸಿಗೆಯು ಒದ್ದೆಯಾಗುವಷ್ಟು ಹೊತ್ತು ಪ್ರಜ್ಞೆಯಿತ್ತು. ಆನಂತರ ಅಂಧಕಾರ!

ಬೆಳಿಗ್ಗೆ ಮೂರರ ಹೊತ್ತಿಗೆ ತನ್ನ ಕಾಲಡಿಯಲ್ಲೇನೋ ಹರಿಯುತ್ತಿರುವಂತೆ ಭಾಸವಾಗಿ ಗಾಬರಿಗೊಂಡು ದಾದಿಯು ಎಚ್ಚತ್ತು ಹಾರಿ ನಿಂತಳು. ನೋಡಿದಳೇನನ್ನು? ಕೋಣೆಯಿಡೀ ರಕ್ತಮಯ! ಅವಳು ಅಂಗಾಂಗಗಳ ಚಲನಶಕ್ತಿಯನ್ನೆ ಕಳಕೊಂಡವಳಾಗಿ ಬಿಟ್ಟಳು. ನಡುಗುತ್ತ ಎತ್ತಲಾರದ ಕಾಲುಗಳನ್ನೆತ್ತಿ ಅವಳು ಹೊರಕ್ಕೋಡಿ, ಸ್ವಲ್ಪ ಹೊತ್ತಿನೊಳಗೆ ತನ್ನ ಸಹೋದ್ಯೋಗಿಗಳನ್ನೆಲ್ಲಾ ಕರೆತಂದು ಶೈಲಜೆಯ ಕೋಣೆಯನ್ನು ತೋರಿಸಿದಳು. ಶೈಲಜೆಯು, ತನ್ನ ಪ್ರೇಮಪ್ರವಾಹವನ್ನು ರಕ್ತಧಾರೆಯಾಗಿ ಪ್ರವಹಿಸಿ, ಪ್ರಿಯನಲ್ಲಿ ಐಕ್ಯತಾಳಿ, ಶಾಂತಚಿತ್ತದಿಂದ ಅನಂತ ಕಾಲಕ್ಕಾಗಿಯೂ ಪವಡಿಸಿದ್ದಳು!

P. T. O.

ಜೀವನ ಸಂಗ್ರಾಮ	(ನಾಟಕ) ಪಿ. ಶೀನ ಶೆಟ್ಟಿ	1	8
ಕದಂಬ	(ಕಥೆಗಳು) ಸರಸ್ವತಿ ಬಾಯಿ ರಾಜವಾಡೆ	1	4
ಕವಿತಾಕಾಮಿನಿ	(ಕವಿತೆಗಳ) ಎಸ್. ವೆಂಕಟರಾಜ	2	0
ಸಪ್ತ ಸಾಗರ	(ಕಥೆಗಳು) ಎಸ್. ವೆಂಕಟರಾಜ	0	12
ಜಮೀನ್ದಾರ	(ಕಾದಂಬರಿ) ಹೊಸಮನೆ ಗುಡ್ಡಪ್ಪ	1	8
ಬಾಳಿನ ಬೆಡಗು	(ಕಾದಂಬರಿ) ಯು. ನಾರಾಯಣ ಭಟ್ಟ	1	0
ಧರ್ಮಸಂಕಟ	(ನಾಟಕ) ಕೊರಡ್ಕಲ್	0	6
ಕುಲವಿಲ್ಲದ ಹೆಣ್ಣು (ಕಾದಂಬರಿ)	ಪಿ. ವೆಂಕೋಬಾಚಾರ್ಯ	1	8
ಭಾಗ್ಯ ಲಕ್ಷ್ಮಿ (ನಾಟಕ)	ಬೆಳ್ತಂಗಡಿ ಲಕ್ಷ್ಮಣ ರಾವ್	1	4
ಯುಗವಾಣಿ (ಕವನಗಳು)	ಕು. ಶಿ. ಹರಿದಾಸ ಭಟ್	0	8
ಪ್ರಜಾಪ್ರಭುತ್ವವನ್ನು ಕುರಿತು	ಶಿವರಾಮ ಕಾರಂತ	0	8
ಕಾಲವೇ ಬದಲಾಗಿದೆ (ಕತೆ)	ಕು. ಶಿ. ಹರಿದಾಸ್ ಭಟ್	0	5
ಭಾರತದ ಸಾಹಿತ್ಯ ಮತ್ತು ಕಲೆಗಳು	ವಿಶ್ವೇಶ್ವರ ಶರ್ಮ	0	6
ಪುಸ್ತಕ ಪುರಾಣ	ಕು. ಶಿ. ಹರಿದಾಸ ಭಟ್	0	4
ಶವಗಳ ಸಾಗಾಟ (ಪತ್ತೇದಾರಿ)	ಸುಬ್ರಾವ್ ಕೃಷ್ಣ ಹೆಗ್ಡೆ	0	12
ಸ್ವಪ್ನ ಲೋಕ (ಸ್ವಪ್ನಗಳ ಕುರಿತಾದ ವಿವರ)	ಕಾರ್ತಿಕೇಯ	0	8
ಮನೆಯ ಹೊರಗಿನ ಮಹಾಜೀವಗಳು	ಕು. ಶಿ. ಹರಿದಾಸ ಭಟ್	0	6
ಫಂಟಮಾರಾ (ಇಟಾಲಿಯನ್ ಕಾದಂಬರಿ)	,,	2	0
ಜೀವನ ಕಲೆ (ಬಾಳ ಕೈದೀವಿಗೆ)	– ಗ. ನಾ. ಪಂಡಿತ	0	10
ಪ್ರತಿಜ್ಞಾಪೂರ್ತಿ (ನಾಟಕ)	ಸುಬ್ರಾವ್ ಕೃಷ್ಣ ಹೆಗ್ಡೆ	0	12
ಪರ್ಲ್ ಎಸ್. ಬಕ್ (ಜೀವನ ಚರಿತ್ರೆ)	ಯು. ನಾರಾಯಣ ಭಟ್	0	7
ಶಿಲ್ಪಿ (ಐತಿಹಾಸಿಕ ನಾಟಕ)	ಹುಲಿಮನೆ ಕಾಳೆ ತಿಮ್ಮಪ್ಪ ಹೊಸ ಮನೆ	1	8
ನೆನಪಿಗಾಗಿ (ಪ್ರಬಂಧಗಳು)	ಕೊರಡ್ಕಲ್ ಸ್ಮಾರಕ ಗ್ರಂಥ	2	0
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)		2	0
ಸರಸ್ವತಿ (ನಾಟಕ)	ಡಾ| ಎಂ. ಮಾಧವಾಚಾರ್ಯ	0	12
ಬದುಕು ಬಂಗಾರ	ಕುಮಾರ ಸ್ವಾಮಿ	1	8
ಮುರಲಿ	ಎನ್. ಎಸ್. ಕಿಲ್ಲೆ	0	12

ಹೆಚ್ಚಿನ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.
ದೊಡ್ಡ ಆರ್ಡರಿಗೆ ಕಮಿಷನ್ ಕೊಡಲಾಗುವುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ — ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ.

		ರೂ.	ಆ
ನಾಗಕನ್ನಿಕೆ	ಎಮ್. ರಾಮರಾವ್	1	4
ಹೂವಿನಆಸೆ	ಎಂ. ವಿ ಸೀತಾರಾಮಯ್ಯ	1	0
ವಿಚಿತ್ರ ಹೆಣ್ಣುಗಳು	ಕಂ ಶಾಮಣ್ಣ	2	4
ದೀನಬಂಧು	ಕಡಬ ದೊರೆ ಸ್ವಾಮಿ	1	4
ಜೀವ ಜ್ಯೋತಿಗಳು	ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ	1	4
ಭಕ್ತ ಮೀರಾ	ಆರ್ ಕಲ್ಯಾಣಮ್ಮ	1	0
ಭಾರತದ ಬಾಪು	ಅ ನ. ಕೃ	1	4
ಕರ್ಣಾಟಕದ ಹಿತ ಚಿಂತನೆ	,,	1	0
ಮಹಾ ಸತಿ	ಜಿ ವರದರಾಜ ರಾಯರು	1	8
ಬೇಬಿ ಮತ್ತು ಇತರ ಚಿತ್ರಗಳು	ಎಸ್ ಸೂರಪ್ಪ	0	12
ರಾಬಿನ್ಸನ್ ಕ್ರೂಸೋ	ಎಂ ವಿ. ಸೀತಾರಾಮಯ್ಯ	0	12
ಅಮರನಾಥ	ವಿ ಗುರು ರಾಜನ್	1	0
ಭಾಗ್ಯಶಿಲ್ಪಿ	ರೇಣುಕಾಚಾರ್ಯರು	1	8
ಪಂಚಾಮೃತ ಮತ್ತು ಇತರ ಕಥೆಗಳು	ದೇವುಡು	1	0
ಮಹಾಕವಿ ದಂಡಿಯ ಕಥೆಗಳು	ಎಸ್. ಕೃಷ್ಣಮೂರ್ತಿ	1	4
ಮನೆಗೆ ಬಂದ ಮಹಾಲಕ್ಷ್ಮಿ	ತ ರಾ ಸು.	1	4
ತಾರಾನಾಥ ತರ್ಕ ವಾಚಸ್ಪತಿ	ಹೊಸಕೆರೆ ಚಿದಂಬರಯ್ಯ	0	10
ಪುಷ್ಪ ಲತಾ	ಡಾ॥ ವೆಂಕಟೇಶಯ್ಯ	2	8
ಕುಟುಂಬ ಸೌಖ್ಯ	ಎಲ್. ಗುಂಡಪ್ಪ	2	4
ಅಡ್ಡಾ ದಿಡ್ಡಿ	ನಾಡಿಗೇರ ಕೃಷ್ಣರಾಯ	1	0
ಕಪಟ ನಾಟಕ:	ಭಾರತಿ	0	12
ಹರಿದ ಗೆಜ್ಜೆ	ಕುಮಾರ ವೆಂಕಣ್ಣ	1	8
ಸ್ವಾತಂತ್ರ್ಯ ವೀರರು	ವಸುದೇವ ಭೂಪಾಲಂ	1	4
ವಿಜಯ ನಾದ	ಎಂ ಜಿ ನಂಜುಂಡಾರಾಧ್ಯ	0	8
ನಿಯತಿ ನಟಿ	ನ. ಯೋಗ	0	6

		ರೂ	ಅ.
ಅನುಭವಾಮೃತ	ಹೊಸಕೆರೆ ಚಿದಂಬರಯ್ಯ	4	0
ರಾಬಿನ್ ಹುಡ್	ಜಿ ಪಿ ರಾಜರತ್ನಂ	1	8
ಮಾರ್ಗದರ್ಶಕ	ಎಂ. ವಿ. ಸೀತಾರಾಮಯ್ಯ	1	8
ಗಾಂಧೀ ಜೀವನ ಪಾಠಗಳು	ಬ. ನ. ಸುಂ	1	4
ಮುಗಿಲುಗಳು	ಎಂ. ವಿ. ಸೀತಾರಾಮಯ್ಯ	1	4
ಸ್ವಾಮಿಜಿಯ ಪತ್ರಗಳು	ಕೊ. ಚೆನ್ನಬಸಪ್ಪ	1	8
ಅಭಿವೃದ್ಧಿಯ ಜನ್ಮ ಅಥವಾ ಸಾರ್ಥಕವಾದ ಬಾಳು	ಎಸ್. ಕೆ. ನರಸಿಂಹಯ್ಯ	0	4
ಬ್ರಹ್ಮಸೂತ್ರದ ಬೆಳಕು	ಹೊಸಕೆರೆ ಚಿದಂಬರಯ್ಯ	1	4
ಗೀತೆಯ ತಿರುಳು	,,	0	12
ರಾಜ ಸೂಯ	ವೆಂಕಟ ರಾಮಪ್ಪ ಪ್ರಹ್ಲಾದರಾವ್	1	8
ರಾಕ್ಷಸನ ಸೋಲು	ಒ. ಎನ್. ಲಿಂಗಣಯ್ಯ	1	8
ಮತ್ಸ್ಯ ನಗರ	ವೆಂಕಟ ರಾಮಪ್ಪ ಪ್ರಹ್ಲಾದ ರಾವ್	1	4
ಕನ್ನಡದಲ್ಲಿ ವಿಡಂಬನ ಸಾಹಿತ್ಯ	ಎಚ್.ಎಸ್ ಕೃಷ್ಣಸ್ವಾಮಿ	0	6
ಬಾರತದ ಉಪಕಥಾವಳಿ (ನಾಳೀ ಜಂಘ)	ಜ. ಪ. ರಾಜರತ್ನಂ	1	4
ಆರ್ಯಕುಲ ಪ್ರದೀಪ	ಭವಾನಿ	1	4
ಪ್ರೇತ ಸಂಹಾರ	ದಾಶರಥಿ ದೀಕ್ಷಿತ್	1	0
ಶಿಕ್ಷಣ ತತ್ವದರ್ಶನ	ಡಾ. ಸಿದ್ಧಲಿಂಗಯ್ಯ ವೀರಪ್ಪ	6	0
ಕಾಮನ ಸೋಲು	ಅ. ನ. ಕೃ.	1	8
ಮುಕ್ತಿ ಮಾರ್ಗ	ಎಚ್ ಎಸ್. ಕೃಷ್ಣ ಸ್ವಾಮಿ	1	4
ಪುಷ್ಪ ಮಾಲೆ	ಶ್ರೀ ಸ್ವಾಮಿ	1	4
ಸೌಭಾಗ್ಯವತಿ	ಎಮ್ ವಿ. ಸೀತಾರಾಮಯ	1	12
ಮಾಯಾವಿ	ವೆಂಕಟಾದ್ರಿ ಶಾಸ್ತ್ರಿಗಳು	3	4
ಗಲಿವರನ ಪ್ರವಾಸ	ಟಿ ಟಿ ಶರ್ಮಾರವರು	1	0
ಪಾಪ-ಪುಣ್ಯ	ಅ ನ. ಕೃ.	1	8
ಎಳೆಯ ಕನಸುಗಳು	ವೈ ಎಂ ಷಣ್ಮುಖಯ್ಯ	1	8

		ರೂ.	ಅ.
ವೈರಾಗ್ಯ ನಿಧಿ ಅಕ್ಕ ಮಹಾದೇವಿ	ಒ. ಎಸ್. ಲಿಂಗಣಯ್ಯ	1	8
ಕನ್ನಡ ಸಾಹಿತ್ಯ ಚಿತ್ರ ಬಾ. 1. 2.	ಎಲ್. ಗುಂಡಪ್ಪ	1	4
ಜೀತದ ಜೀವ	ತ. ರಾ. ಸು.	1	0
ಮಹಾ ಪುರುಷ	ಎನ್. ಎಸ್ ನಾರಾಯಣ ಶಾಸ್ತ್ರಿ	2	4
ಸಮಾಜ ಧರ್ಮದ ಕಥೆಗಳು	ನ. ಯೋಗ	1	4
ದೇಶಾಂತರದ ಕಥೆಗಳು	ದೇವುಡು	1	0
ವೃಂದಾವನ ಮತ್ತು ಇತರ ಕಥೆಗಳು	ತ್ರಿವಿಕ್ರಮ	0	12
ಹರುಕು–ಮುರುಕು	ನಾಡಿಗೇರ ಕೃಷ್ಣ ರಾಯರು	1	0
ಭಾಗ್ಯ ಲಕ್ಷ್ಮಿ	ಎಂ. ವಿ. ಸೀತಾರಾಮಯ್ಯ	0	12
ಕಾಂತಂ ಮತ್ತು ಶರದ್ರಾತ್ರಿಗಳು	ಪಿ ವೆಂಕೋಬಾಚಾರ್ಯ	1	6
ಇವೆತ್	ಪಿ ವೆಂಕೋಬಾಚಾರ್ಯ	1	12
ಪುಷ್ಪ ಹಾರ	ಜಯಲಕ್ಷ್ಮಿ ಆರ್. ಶ್ರೀನಿವಾಸನ್	1	4
ಮನೋರಾಜ್ಯ	ರಂ. ಶ್ರೀ. ಮುಗಳಿ	1	12
ಪೂರ್ಣಿಮಾ	ತಿ ಸಿದ್ದಪ್ಪ	1	4
ಸೈಮನ್ನನ ತಂದೆ	ವಿವಿಧ ಲೇಖಕರು	1	12
ಬೆಳವಲದ ಭಾಗ್ಯಲಕ್ಷ್ಮಿ	ಕುಲಕರ್ಣಿ ಶೇಷಗಿರಿ ರಾವ್	2	8
ನೇತಾಜಿ	ಮೇವುಂಡಿ ಮಲ್ಲಾರಿ	1	8
ಪತ್ರಿಕಾ ವ್ಯವಸಾಯ	ಪ್ರೊ. ರಾ ಯ. ಧಾರವಾಡಕರ	0	12
ಉಷಾ	ಕುಮಾರಿ ಪದ್ಮಾ	0	4
ವಿಧಿಲೀಲೆ	ಜಿ. ಮೈಲಾರ್ರಾವ್	0	4
ಪರಮಾಣು ಪ್ರಪಂಚ	ಕೆ. ಗುರುರಾಜ ಉಡುಪ	0	4
ನೀತಿ ವಿನೋದ ಕತೆಗಳು	ವೀರಪ್ಪ ಯುಗಟಿ ಹಾವೇರಿ	0	12
ಸಾಹಸ ಭೀಮ ವಿಜಯ	ಕೆ. ಪಿ. ವೆಂಕಪ್ಪ ಶೆಟಿ.	0	8
ಭಾರತದ ಗುರುಕುಲ	,,	0	6
ಉತ್ತ ಪಗಡೆ	,,	0	6
ಭರತೇಶ ದಿಗ್ವಿಜಯ	,,	0	8

ಮನೋಪದೇಶ	ವಿನಾಯಕ ರಾವ್ ಬಾಪಟ್	0	6
ಜೀವನ ಕಲೆ	ಗ. ನಾ ಪಂಡಿತ್ ಗೋಕರ್ಣ	0	10
ಪ್ರತಿಜ್ಞಾ ಪೂರ್ತಿ	ಸುಬ್ರಾವ್ ಕೃಷ್ಣ ಹೆಗ್ಡೆ	0	12
ಮಿತ ಸಂತತಿ	ಅಂತರಂಗ ಕಾರ್ಯಾಲಯ ಉಡುಪಿ	0	6
ಗುಪ್ತ ರೋಗ ನಿವಾರಣೆ	,,	0	8
ಸೌಂದರ್ಯ	ವೈ. ರಾಮ ತಂತ್ರಿ ಶಿರೋಮಣಿ ವಿಶಾರದ	0	5
ನವೀನ ನಾಟಕಗಳು	(ಸಂಕಲನ)	0	7
ಪರ್ಲ್ ಎಸ್. ಬಕ್	ಯು. ನಾರಾಯಣ ಭಟ್	0	7
ಬೇಟೆ ನಾಯಿ	ಸಂಜೀವಿನಿ ಪ್ರಕಾಶನ	2	8
ಉತ್ಕಲಾ ಭಾಗ ೧—೨	,,	5	0
ಆಶಾ	,,	1	8
ಸಂಗಾತಿ	,,	1	8
ಬೀಳದ ತೆರೆ	,,	2	0
ಪಾಶ್ಚಾತ್ಯ ಕಲಾವಿದರು	,,	3	0
ಹೀಗಿದೆ ಜಗತ್ತು	,,	1	0
ಆಕಾಶ ದೀಪ	ಎಸ್. ಆರ್. ಚಂದ್ರ	1	0
ಕರುಣ ಕಥೆ	ಅನಂತಮಹಿಪತಿ	1	0
ಸ್ವಪ್ನಜೀವಿ	ತ್ರಿವಿಕ್ರಮ	1	8
ಪ್ರಜಾ ತಂತ್ರದ ಹೆದ್ದಾರಿ	ಕು. ಶಿ. ಹರಿದಾಸ ಭಟ್ಟ, M.A.	2	0
ಅರ್ಥಶಾಸ್ತ್ರ	,,	5	0
ಘಂಟಮಾರಾ	,,	2	0

ನವಭಾರತ ಪುಸ್ತಕ ಭಂಡಾರ, ಉಡುಪಿ.

Navayuga Press, Udipi—500/10-58.